ಕುವೆಂಪುರವರ ಚಿತ್ರಾಂಗದಾ : ಒಂದು ಅಧ್ಯಯನ

೨೦೦೮-೦೯ನೇ ಸಾಲಿನ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕಿ

ಮೋಹನಕುಮಾರಿ.ಕೆ

ಕನ್ನಡ ಎಂ.ಫಿಲ್ (ಹಂಪಿ, ಕ.ವಿ.ವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
...ಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಮಳಲಿ ವಸಂತಕುಮಾರ್

ನಿವೃತ್ತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೮-೦೯

740

ಕುವೆಂಪುರವರ ಚಿತ್ರಾಂಗದಾ : ಒಂದು ಅಧ್ಯಯನ

೨೦೦೮-೦೯ನೇ ಸಾಲಿನ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕಿ

ಮೋಹನಕುಮಾರಿ.ಕೆ
ಕನ್ನಡ ಎಂ.ಫಿಲ್ (ಹಂಪಿ, ಕ.ವಿ.ವಿ)
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಮಳಲಿ ವಸಂತಕುಮಾರ್
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೮-೦೯

<u>ದೃಢೀಕರಣಪತ್ರ</u>

೨೦೦೮–೦೯ನೇ ಸಾಲಿನಲ್ಲಿ ಕ್ರಮ ಸಂಖ್ಯೆ KVTMKS - 00328ರ ಹಂಪಿ ವಿಶ್ವವಿದ್ಯಾನಿಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿನಿಯಾದ ಮೋಹನಕುಮಾರಿ.ಕೆ ಅವರು ನನ್ನ ಮಾರ್ಗದರ್ಶನದಲ್ಲಿ **"ಕುವೆಂಪುರವರ ಚಿತ್ರಾಂಗದಾ : ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ಮಳಲಿ ವಸಂತಕುಮಾರ್)
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಮೈಸೂರು
ದಿನಾಂಕ: ೧೩.೦೮.೨೦೦೮

ಅಭ್ಯರ್ಥಿಯ ಘೋಷಣಾಪತ್ರ

"ಕುವೆಂಪುರವರ ಚಿತ್ರಾಂಗದಾ : ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್ ಪದವಿಯ ಕ್ರಮಸಂಖ್ಯೆ KVTMKS - 00328ರ ವಿದ್ಯಾರ್ಥಿನಿಯಾದ ನಾನು ೨೦೦೮-೦೯ನೇ ಸಾಲಿನ ಪರೀಕ್ಷೆಗಾಗಿ **ಡಾ. ಮಳಲಿ ವಸಂತಕುಮಾರ್** ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಸಂಪ್ರಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೋಹನ ಕುಮಾರಿ ಕೆ

(ಮೋಹನಕುಮಾರಿ.ಕೆ)
೨೦೦೮-೦೯ನೇ ಸಾಲಿನ ಎಂ.ಫಿಲ್. ವಿದ್ಯಾರ್ಥಿನಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮೈಸೂರು
ದಿನಾಂಕ : ೧೩.೦೯.೨೦೦೯

[illegible]

ಪ ರಿ ವಿ ಡಿ

*****

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಚಿತ್ರಾಂಗದಾ

ಬ್ರಹ್ಮ ಮಾನಸ ಮಹದ್ ಗರ್ಭ ಸಂಭವೆ, ವಿರಾಟ್
ಪ್ರಭವೆ, ಭವ್ಯಾನಂದ ವಿಭವೆ, ಶಾರದೆ, ವರದೆ
ಭಾವ ಚಿಂತಾಖನಿಯೆ, ಶಿಖಿವಾಹನೆಯೆ, ವಾಣಿ,
ಭುವನ ಮೋಹನ ಮಧುರ ದಿವ್ಯ ವೀಣಾಪಾಣಿ,
ವಾಗ್ದೇವಿ, ಸರಸ ಕವಿತಾ ಕಲಾ ಕಲ್ಯಾಣಿ,
ತುಂಬುವೆನು ನಿನ್ನಮಲ ಪಾದ ಪಂಕೇಜದಲಿ
ಮುಂಗುರುಳ್ದುಂಬಿಗಳನೆಲೆ ತಾಯೆ, ಕೃಪೆಗೈದು
ಕಂದನಂ ಕಾರುಣ್ಯದಿಂ ಕಂಡು ಜಡಮತಿಗೆ
ದಿವ್ಯವೈದ್ಯುತ ಚೇತನವನ್ನಿತ್ತು ನಲಿದೊಲಿದು
ನರ್ತನಂಗೈಯೆನ್ನ ಜಿಹ್ವೆಯಲಿ......೧

ಸರಸ್ವತಿ ಸ್ತುತಿಯ ಸುಂದರ ಸಾಲುಗಳಿಂದ ಸಜ್ಜಾಗಿರುವ ಚಿತ್ರಾಂಗದಾ ಖಂಡಕಾವ್ಯವು ಪೌರಾಣಿಕ ಕಥಾವಸ್ತುವನ್ನು ಒಳಗೊಂಡಿದೆ. ಸರಳರಗಳೆಯ ಮೈಕಟ್ಟನ್ನು ಹೊಂದಿರುವ 'ಚಿತ್ರಾಂಗದಾ' ಕಾವ್ಯವು 'ಮಹಾಭಾರತ'ವನ್ನು ನಮ್ಮ ಸ್ಮೃತಿಗೆ ತರುತ್ತದೆ. ನಮ್ಮ ದೇಶದ ಪವಿತ್ರ ಗ್ರಂಥ 'ಮಹಾಭಾರತ'ದಲ್ಲಿನ ಮೌಲ್ಯಗಳು ಸಾರ್ವಕಾಲೀಕ ಸತ್ಯಗಳಾಗಿವೆ. ಈ ಮೌಲ್ಯಗಳು ವ್ಯಾಸಭಾರತದಲ್ಲಿ ಅನೇಕ ಕಥೆ, ಉಪಕಥೆಗಳ ರೂಪದಲ್ಲಿ ನಮಗೆ ಗೋಚರಿಸುತ್ತದೆ. ನಮ್ಮ ಕನ್ನಡದಲ್ಲಿ ಪಂಪ, ರನ್ನ, ಕುಮಾರವ್ಯಾಸ, ಲಕ್ಷ್ಮೀಶ ಮೊದಲಾದವರು ತಮ್ಮ ತಮ್ಮ ಯುಗಧರ್ಮಕ್ಕೆ ಅನುಸಾರವಾಗಿ ಅವರವರ ಪ್ರತಿಭೆಯ ಬಲದಿಂದ ಕಥೆಗಳನ್ನು, ಮೌಲ್ಯಗಳನ್ನು ಮೆರೆಸಿದ್ದಾರೆ. ಇಂತಹ ಪರಂಪರೆಯನ್ನು ಪಾಲಿಸಿಕೊಂಡು ಬಂದ ಕುವೆಂಪು ವ್ಯಾಸಭಾರತದ ಅಶ್ವಮೇಧಿಕ ಪರ್ವದಲ್ಲಿ ಮಿಂಚಿ ಮರೆಯಾಗುವ ಚಿತ್ರಾಂಗದಾ ಪಾತ್ರದ ಕಥಾಚಿತ್ರಣವನ್ನು ಆರಿಸಿಕೊಂಡು ಹಲವು 'ಮಾರ್ಪಾಡುಗಳನ್ನು ಮಾಡಿಕೊಂಡು ಇಂದಿನ ಯುಗಧರ್ಮಕ್ಕೆ ಅನುಗುಣವಾಗಿ 'ಚಿತ್ರಾಂಗದಾ' ಖಂಡಕಾವ್ಯವನ್ನು ರಚಿಸಿದ್ದಾರೆ.

ಈ ಕಾವ್ಯವು ಚಿತ್ರಾಂಗದೆಯ ಜೀವನ ವೃತ್ತಾಂತವನ್ನು ಪರಿಪೂರ್ಣವಾಗಿ ಒಡಿದುಕೊಡುವ ಏಕೈಕ ಕನ್ನಡ ಕಾವ್ಯವಾಗಿದೆ. ಈಕೆಯ ಪೂರ್ಣ ವ್ಯಕ್ತಿತ್ವದ ಅಭಿವ್ಯಕ್ತಿ

---

೧. ಕುವೆಂಪು, ಚಿತ್ರಾಂಗದಾ, ಪು. ೧

ಇದರಲ್ಲಿದೆ. ವ್ಯಾಸಭಾರತದ ಕಾಡಿನ ಪುಟ್ಟ ಸಸಿಯಂತಿರುವ ಚಿತ್ರಾಂಗದೆಯ ಕಥೆಯನ್ನು ನಮ್ಮ ಇಂದಿನ ಕವಿಗಳು ಅದಕ್ಕೆ ನೀರೆರೆದು ಪೋಷಿಸಿ ಮಹಾವೃಕ್ಷವಾಗಿ ಬೆಳೆಸಿದ್ದಾರೆ.

ಕನ್ನಡದಲ್ಲಿ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಚಿತ್ರಾಂಗದೆಯ ಜೀವನ ಕಥೆಯನ್ನು ಸಂಪೂರ್ಣವಾಗಿ ಅಲ್ಲದಿದ್ದರೂ ಆಂಶಿಕವಾಗಿ ಚಿತ್ರಿಸಲಾಗಿದೆ. ಈ ಕಾವ್ಯಕ್ಕೆ ಕುವೆಂಪುರವರು ಇಬ್ಬರು ಮಹಾನ್ ಕವಿಗಳು ರಚಿಸಿರುವ ಚಿತ್ರಾಂಗದಾ ಕಥೆಯನ್ನು ಬಳಸಿಕೊಂಡಿದ್ದಾರೆ. ಮೂಲ ಕಥೆಯನ್ನು ಇಂದಿನ ಕಾಲಮಾನಕ್ಕೆ ತಕ್ಕಂತೆ ಅಗತ್ಯ ಬದಲಾವಣೆಗಳನ್ನು ಮಾಡಿಕೊಂಡು ತಮ್ಮ ತಮ್ಮ ದರ್ಶನದ ಮುಖೇನ ಒಂದೊಂದು ಮೌಲ್ಯಗಳನ್ನು ಪ್ರತಿಪಾದಿಸುತ್ತಾ, ಎತ್ತಿಹಿಡಿಯುತ್ತಾ ಬಂದಿದ್ದಾರೆ. ಕವಿ ಕಾವ್ಯದ ಆರಂಭದಲ್ಲಿ ಅರಿಕೆ ಮಾಡಿಕೊಳ್ಳುವಂತೆ, "ಕನ್ನಡ ಜೈಮಿನಿ ಭಾರತ'ದಲ್ಲಿ ಅರ್ಜುನ ಬಭ್ರುವಾಹನರ ಕಾಳಗವನ್ನು ವರ್ಣಿಸುವಾಗ ಲಕ್ಷ್ಮೀಶನು ಪ್ರಾಸಂಗಿಕವಾಗಿ ಆಕೆಯ ಪಾತ್ರವನ್ನು ನಮ್ಮ ಮುಂದೆ ತರುತ್ತಾನೆ. ಅಲ್ಲಿಯ ಆಕೆಯ ಚಿತ್ರವನ್ನು 'ಉತ್ತರ ಚಿತ್ರಾಂಗದೆ' ಎಂದು ಕರೆಯಬಹುದು. ವಂಗ ಕವಿ ರವೀಂದ್ರನಾಥ ಠಾಕೂರರ ಇಂಗ್ಲಿಷಿಗೆ ಭಾಷಾಂತರವಾಗಿರುವ 'ಚಿತ್ರಾ' ನಾಟಕದಲ್ಲಿ ಚಿತ್ರಾಂಗದೆಯ ಪೂರ್ವ ಜೀವನವನ್ನು ಚಿತ್ರಿಸಿದ್ದಾರೆ. ಅಲ್ಲಿ ಆಕೆಯನ್ನು ಶೃಂಗಾರದ ಪರಿಪೂರ್ಣತೆ-ಯಲ್ಲಿ ಚಿರಸ್ಥಾಯಿಯನ್ನಾಗಿ ಮಾಡಿದ್ದಾರೆ. ಅವರ ಚಿತ್ರವನ್ನು 'ಪೂರ್ವ ಚಿತ್ರಾಂಗದಾ' ಎಂದು ಕರೆಯಬಹುದು. ಈ ಕನ್ನಡ ಕಾವ್ಯದಲ್ಲಿ ಸೃಷ್ಟಿಯಾಗಿರುವ ಚಿತ್ರಾಂಗದೆಯರ ನೆತ್ತರು ಕೊಂಚಮಟ್ಟಿಗೆ ಹರಿಯುತ್ತಿರುವುದಾದರೂ ವಂಶಪಾರಂಪರ್ಯವೊಂದು ವಿನಾ ಮತ್ತೆ ಬಹು ವಿಷಯಗಳಲ್ಲಿ ಈಕೆ ಬೇರೆಯಾಗಿದ್ದಾಳೆ ಇಲ್ಲಿ ಲಕ್ಷ್ಮೀಶನ ಕೃತಿಯಲ್ಲಿರುವಂತೆ ತಾರುಣ್ಯದ ಸಂಯಮ ರಹಿತ ವ್ರತಭ್ರಷ್ಟತೆಗೆ ಪ್ರಾಯಶ್ಚಿತ್ತ ವಿಹೀನವಾದ ಭೋಗ ಕಿರೀಟವನ್ನಿಟ್ಟು ಪ್ರೇಮದ ಮಂಗಳಾರತಿಯೆತ್ತುವುದಕ್ಕೂ ಸಾಧ್ಯವಾಗಿಲ್ಲ.

ಪೂರ್ವ ಚಿತ್ರಾಂಗದೆಯನ್ನು ಚಿತ್ರಿಸುವ ಕೆಲವು ಸನ್ನಿವೇಶಳಿಗೆ ಈ ಕಾವ್ಯ ಠಾಕೂರರಿಗೆ ಋಣಿಯಾಗಿದೆ. ಮದನನು ವರವನ್ನೀಯುವುದರಲ್ಲಿಯೂ, ಆತನಿಗೂ ಚಿತ್ರಾಂಗದೆಗೂ ನಡೆಯುವ ಸಂಭಾಷಣೆಯಲ್ಲಿಯೂ ಓದುಗರು ಅವನ್ನು ಚೆನ್ನಾಗಿ ಗುರುತಿಸಬಹುದು. 'ಉತ್ತರ ಚಿತ್ರಾಂಗದೆ'ಯ ಚಿತ್ರದಲ್ಲಿ ಲಕ್ಷ್ಮೀಶನ ಋಣ ಅಷ್ಟು ಮೇಲೆದ್ದು ಕಾಣದಿದ್ದರೂ ಮೇಧಾವಿಯಾದ ಓದುಗನಿಂದ ಅದು ತಪ್ಪಿಸಿ-ಕೊಳ್ಳಲಾರದೆಂದು ತೋರುತ್ತದೆ. ಈ ಚಿತ್ರಾಂಗದೆ ಆ ಚಿತ್ರಗಳೆರಡನ್ನೂ ಕೂಡಿಸಿ

ತಯಾರಾದವಳಲ್ಲ. ಅವುಗಳಿಂದ ಮೂಡಿ ಸೃಷ್ಟಿಯಾಗಿದ್ದಾಳೆ. ಗಣಿತ ಕರ್ಮವಾಗಿಲ್ಲ, ಕಲಾಕೃತಿಯಾಗಿದ್ದಾಳೆ".[೧]

ಪುರಾಣ ಪ್ರಸಿದ್ಧವಾದ ವ್ಯಾಸಭಾರತ ಸಾಗರದಲ್ಲಿ ಹನಿಯಂತಿರುವ ಚಿತ್ರಾಂಗದೆಯ ಕಥೆಯನ್ನು ನಮ್ಮ ಇಂದಿನ ಕವಿಗಳು ಇದಕ್ಕೆ ಪರಿಪೂರ್ಣತೆಯನ್ನು ಕೊಟ್ಟು ಚಿತ್ರಾಂಗದೆಯ ಪಾತ್ರಕ್ಕೆ ಜೀವವನ್ನಿಟ್ಟು ಬೆಳಗಿದ್ದಾರೆ. ಪ್ರೇಮಮಯಿ, ತ್ಯಾಗಮಯಿ ಚಿತ್ರಾಂಗದೆಯ ಪಾತ್ರದ ಗುಣ ವಿಶೇಷತೆಗಳನ್ನು ಬಣ್ಣಿಸುವುದರ ಜೊತೆಗೆ ಸ್ತ್ರೀಯರ ಅಂತರ್ಮುಖಿ, ಬಹಿರ್ಮುಖಿ ವರ್ತನೆ, ಮನಸ್ಥಿತಿಗಳನ್ನು ಮನೋವೈಜ್ಞಾನಿಕ ಭೂಮಿಕೆಯಲ್ಲಿ ಚರ್ಚಿಸಬಹುದು.

ವ್ಯಾಸ ಭಾರತದ ಉಪಕಥೆಯನ್ನು ಆಯ್ದುಕೊಂಡು ಬೃಹತ್ತಾಗಿ ಬೆಳೆಸಿರುವ ಕುವೆಂಪುರವರು ಪರಂಪರೆಯನ್ನು ಕೈಬಿಡದೆ ಉಳಿಸಿಕೊಂಡು ಬಂದಿದ್ದಾರೆ. ಛಂದಸ್ಸು, ಭಾಷೆ ಮತ್ತು ಶೈಲಿಯಲ್ಲೂ ಕೂಡ ನಾವೀನ್ಯತೆಯನ್ನು ಸಾಧಿಸಿದ್ದಾರೆ. ಈ ಕಾವ್ಯದ ಅರಿಕೆಯ ಭಾಗದಲ್ಲಿ ಕವಿ ಹೇಳಿರುವಂತೆ "ಈ ದೀರ್ಘಕಾವ್ಯವನ್ನು ಸರಳ ರಗಳೆಯಲ್ಲಿ ಬರೆದಿದ್ದೇನೆ. ರಾಗರಹಿತವಾದ ಧೀರ ಶೈಲಿಯಿಂದ ಓದುವುದಕ್ಕೂ, ರಾಗ ಸಹಿತವಾಗಿ ಹಾಡಲೂಬಹುದು. ಕಾವ್ಯದಲ್ಲಿ ಅಲ್ಲಲ್ಲಿ ಬರುವ ಮಿಶ್ರೋಪಮೆ ಮಹೋಪಮೆಗಳು ಪಾಶ್ಚಾತ್ಯ ಸಾಹಿತ್ಯಗಳ ಪುರಾಣಗಳನ್ನು ಓದಿರುವವರಿಗೆ ಹೊಸದಲ್ಲವಾದರೂ ಕನ್ನಡದಲ್ಲಿ ಇದೇ ಮೊದಲ ಸಾಹಸ. ಆದ್ದರಿಂದ ಜನಮನದ ದೃಷ್ಟಿಯಲ್ಲಿ ಈ ಕಾವ್ಯಕ್ಕೆ ಯಾವ ಸ್ಥಾನಮಾನಗಳು ಲಭಿಸುತ್ತವೆಯೋ ಎಂಬ ವಿಚಾರದಲ್ಲಿ ಕಾವ್ಯಕರ್ತೃವಿನ ಮನಸ್ಸು ತೂಗುಯ್ಯಾಲೆಯಾಗಿವೆ. ಮಹತ್ತಾಗಿ ಸೋಲುವುದೂ ಗೆಲುವಿನ ಮಹತ್ತಿಗಿಂತ ಕೀಳಲ್ಲವಷ್ಟೆ."[೨]

ಕನ್ನಡದಲ್ಲಿ ಖಂಡಕಾವ್ಯವು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಬೆಳೆದಿದೆ. ವಾಸ್ತವವಾಗಿ ಇದು ದೀರ್ಘ ಕಾವ್ಯ ಮತ್ತು ಮಹಾಕಾವ್ಯಗಳ ಮಧ್ಯದ ಒಂದು ಸ್ಥಿತಿ. ದೀರ್ಘ ಕಥನಕವನಗಳ ಮುಂದುವರೆದ ಭಾಗವೇ 'ಖಂಡಕಾವ್ಯ'. ಇದು ಒಂದು ರೀತಿಯಲ್ಲಿ ಮಹಾಕಾವ್ಯಕ್ಕೆ ಪೀಠಿಕೆ ಇದ್ದಂತೆ. ಮತ್ತೊಂದು ರೀತಿಯಲ್ಲಿ ಮಹಾಕಾವ್ಯದ ಎಲ್ಲಾ ಸಲ್ಲಕ್ಷಣಗಳನ್ನು ಖಂಡಕಾವ್ಯ ಒಳಗೊಂಡಿರುತ್ತದೆ. ಆದರೆ ಮಹಾಕಾವ್ಯದ ಬೃಹತ್ತು, ವೈಭವ, ಸಂಕೀರ್ಣತೆ ಇಲ್ಲಿ ಕಂಡುಬರುವುದಿಲ್ಲ. ಜನದನಿಯ ವಿಜೃಂಭಣೆ ಮಹಾಕಾವ್ಯದಂತೆ ಇಲ್ಲಿ ಇರುವುದಿಲ್ಲ. ಮಹಾಕಾವ್ಯದ ಜೀವನ ಸಮೃದ್ಧಿ, ವೈವಿಧ್ಯ ಮತ್ತು ಸಾಂಸ್ಕೃತಿಕ ಬಾಹುಳ್ಯ ಇಲ್ಲಿ ಕಂಡುಬರುವುದಿಲ್ಲ.

---

೧. ಕುವೆಂಪು, ಚಿತ್ರಾಂಗದಾ, ಅರಿಕೆ
೨. ಕುವೆಂಪು, ಚಿತ್ರಾಂಗದಾ, ಅರಿಕೆ

ಉದಾ: ಕುವೆಂಪುರವರ ಚಿತ್ರಾಂಗದಾ ಖಂಡಕಾವ್ಯವು ಮಹಾಕಾವ್ಯದಂತೆ ಮಹೋಪಮೆಗಳನ್ನು, ಮಹಾಛಂದಸ್ಸನ್ನು ಒಳಗೊಂಡಿದೆ. ಆದರೆ ಮಹಾಕಾವ್ಯದ ಹಾಗೆ ಮೌಲ್ಯಗಳ ಮಹಾಪೂರ, ಇಲ್ಲಿ ಕಾಣಸಿಗುವುದಿಲ್ಲ. ಇಲ್ಲಿ ಪ್ರೀತಿಯೊಂದೇ ಮೌಲ್ಯ. ಮಹಾಕಾವ್ಯಗಳಲ್ಲಾದರೆ ಮೌಲ್ಯಗಳ ಸಮುಚ್ಚಯವನ್ನೇ ಕಾಣುತ್ತೇವೆ. ಪಿತೃಭಕ್ತಿ, ಮಾತೃಭಕ್ತಿ, ಭ್ರಾತೃಪ್ರೇಮ, ಪಾತಿವ್ರತ್ಯ, ಸ್ನೇಹ, ಔದಾರ್ಯ, ತ್ಯಾಗ, ಛಲ ನನ್ನಿ. ಹೀಗೆ ವಿವಿಧ ಮೌಲ್ಯಗಳು ಅಲ್ಲಿ ವಿಜೃಂಭಣೆಗೊಳ್ಳುತ್ತದೆ.

ಕನ್ನಡದಲ್ಲಿ ಗೋಲ್ಗೊಂಥಾ ವೈಶಾಖಿ, ಮಾದ್ರಿಯಚಿತೆ ಮುಂತಾದವು ಒಳ್ಳೆಯ ಖಂಡಕಾವ್ಯಗಳಾಗಿವೆ. \ ಇತ್ತೀಚೆಗೆ ಬಂದ ಎ.ಎನ್.ವೇಣುಗೋಪಾಲರಾಯರ ಮೌಲ್ಯಾಲಿಂಗನವು ಉತ್ತಮ ಗದ್ಯ ಖಂಡಕಾವ್ಯವಾಗಿವೆ. ನನ್ನ ಈ ಪ್ರಬಂಧವು ಕುವೆಂಪುರವರ ಚಿತ್ರಾಂಗದಾ ಖಂಡಕಾವ್ಯ ಕುರಿತಾದ ಅಧ್ಯಯನವಾಗಿದೆ.

ಇವುಗಳನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಈ ಸಂಪ್ರಬಂಧದಲ್ಲಿ ಒಟ್ಟು ಆರು ಅಧ್ಯಾಯಗಳಲ್ಲಿ ಅಧ್ಯಯನ ನಡೆಸಲಾಗಿದೆ.

ಮೊದಲ ಅಧ್ಯಾಯದಲ್ಲಿ, ಚಿತ್ರಾಂಗದಾ ಕಥಾಸ್ವರೂಪವನ್ನು ಸಂದರ್ಭದೊಡನೆ ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ, ಚಿತ್ರಾಂಗದಾ ಕಾವ್ಯದ ಪಾತ್ರಗಳ ಗುಣವಿಶೇಷತೆ-ಯನ್ನು ಚರ್ಚಿಸಲಾಗಿದೆ. ಅವುಗಳ ರಚನಾಕೌಶಲದ ಬಗ್ಗೆ ವಿವರಣೆ ಇದೆ.

ಮೂರನೆಯ ಅಧ್ಯಾಯದಲ್ಲಿ, ಚಿತ್ರಾಂಗದಾ ಕಾವ್ಯ ಕುರಿತಾದ ವಿಮರ್ಶೆಗಳು ಚಿಂತನ ಮಂಥನಗಳ ಅಭಿಪ್ರಾಯವಿದೆ.

ನಾಲ್ಕನೆಯ ಅಧ್ಯಾಯದಲ್ಲಿ, ಕಾವ್ಯದಲ್ಲಿನ ಪ್ರಕೃತಿಯ ವರ್ಣನೆಯ ಜೊತೆಗೆ ಕವಿಗಳ ದರ್ಶನ ಪ್ರತಿಭೆಯನ್ನು ಕಾಣಬಹುದು.

ಐದನೆಯ ಅಧ್ಯಾಯದಲ್ಲಿ, ಛಂದಸ್ಸು, ಭಾಷೆ ಮತ್ತು ಶೈಲಿಯ ಬಗ್ಗೆ ಕುರಿತಾದ ಅಧ್ಯಯನ ನಡೆಸಲಾಗಿದೆ.

ಆರನೆಯ ಅಧ್ಯಾಯದಲ್ಲಿ, ಠಾಕೂರರ ಚಿತ್ರಾ ನಾಟಕ ಲಕ್ಷ್ಮೀಶನ ಜೈಮಿನಿ ಭಾರತದ ಚಿತ್ರಾಂಗದೆಯ ಪಾತ್ರ ಇವುಗಳ ಜೊತೆ ಕುವೆಂಪುರವರ ಚಿತ್ರಾಂಗದಾ ಖಂಡಕಾವ್ಯದ ತೌಲನಿಕ ಅಧ್ಯಯನ ನಡೆಸಲಾಗಿದೆ. ಅಂತಿಮವಾಗಿ ಉಪಸಂಹಾರದಲ್ಲಿ ಈ ಅಧ್ಯಾಯಗಳ ಕುರಿತಾದ ನನ್ನ ಅಭಿಪ್ರಾಯದೊಂದಿಗೆ ಈ ಅಧ್ಯಯನದ ವ್ಯಾಪ್ತಿಯು ನಿಂತಿದೆ.

ಅಧ್ಯಾಯ - ೧

ಕಥಾಸ್ವರೂಪ

ಚಿತ್ರಾಂಗದಾ ಕಾವ್ಯದ ನಾಯಕಿ ಚಿತ್ರಾಂಗದೆ. ಈಕೆಯ ಹೆಸರನ್ನು ಕಾವ್ಯಕ್ಕೆ ಇಟ್ಟಿರುವುದು ಅನ್ವರ್ಥವಾಗಿದೆ. ಚಿತ್ರಾಂಗದಾ ಕುರಿತ ಅಧ್ಯಯನ ಇದಾಗಿದೆ.

ಮಣಿಪುರದ ರಾಜ ಚಿತ್ರವಾಹನನ ಮಗಳು ಚಿತ್ರಾಂಗದೆ. ಈಶ್ವರನ ವರಪ್ರಸಾದಿಂದ ಹುಟ್ಟಿದ ಈಕೆಯನ್ನು ರಾಜ ಗಂಡು ಮಗನಂತೆ ಸಾಕಿ ಬೆಳೆಸಿದ್ದನು. ಗಂಡಿನಂತೆ ಬೆಳೆದ ರಾಜಕುಮಾರಿ ರಣಪಂಡಿತೆಯಾದಳು. ವೀರತನದಲ್ಲಿ ತನಗೆ ಸರಿಸಾಟಿ ಯಾರು? ಎಂಬಂತೆ ಬೆಳೆದಳು. ಇದರಿಂದ ಇವಳಲ್ಲಿ ಸ್ತ್ರೀ ಸಹಜವಾಗಿರಬೇಕಾದ ಲಜ್ಜೆಯಾಗಲೀ, ಜಾಣ್ಮೆಯಾಗಲಿ, ಪ್ರಣಯ ರಹಸ್ಯವಾಗಲೀ, ತಿಳಿದಿರಲಿಲ್ಲ. ಇಂತಹ ವೀರ ವನಿತೆ ಒಮ್ಮೆ ಕಾಡಿಗೆ ಬೇಟೆಗೆಂದು ತೆರಳಿದ್ದಾಗ, ರಾತ್ರಿಯ ಕನಸಿನಲ್ಲಿ ಹರಿಣ ಶಿಶುವೊಂದಕ್ಕೆ ಮನಸೋಲುತ್ತಾಳೆ. ಅದನ್ನು ನೋಯಿಸದೆ ಹಿಡಿವೆನೆಂಬಾತುರದಿ ಬೆನ್ನಟ್ಟುತ್ತಾಳೆ. ಬೆಟ್ಟದ ಕಂದರ ಬಳಿ ಸಾಗುವುದನ್ನು ಕಂಡು ಹಿಂಬಾಲಿಸಿ ಸಾಕಾಗಿ ಇನ್ನೇನು ಬಾಣ ಬಿಡಬೇಕೆನ್ನುವಷ್ಟರಲ್ಲಿ ಬೆಚ್ಚಿಬಿದ್ದಳು ಕನ್ಯೇ! ಅದ್ಭುತ ಪವಾಡಮಂ ಸಂದರ್ಶಿಸಿದ ವೀರವಿಜ್ಞಾನಿಯೋಲ್ ಬೆಪ್ಪು ಬೆರಗಾಗಿ!' ಮೋಹನಾಕೃತಿಯ ರುಕ್ಮರಾಗತಪಸ್ನಾತ ಮಾನವಮೂರ್ತಿಯನ್ನು ಕಂಡ ಕೂಡಲೇ ಅವಳ ಗಂಡೆದೆಯ ಹೃದಯದಲ್ಲಿ ತಾನು ಹೆಣ್ಣೆಂಬ ಲಜ್ಜಾ ಕಂಪನ ಮೊತ್ತ ಮೊದಲು ಉಂಟಾಯಿತು. ಕನಸಿನಿಂದ ಎಚ್ಚೆತ್ತು ತನ್ನ ಗಂಡುಡುಗೆಯಲ್ಲಿ ಕಾಡಿನಲ್ಲಿ ನಡೆದು ಹೋಗುತ್ತಾಳೆ. ವಿಸ್ಮಯ! ಕನಸು ನನಸಾದಂತೆ ಕನಸಿನಲಿ ಕಂಡ ಆ ಸುಂದರಮೂರ್ತಿಯು ಮೈತಳೆದು ಸರಸ್ತೀರದ ಕಲ್ಲು ಬಂಡೆಯೊಂದರ ಮೇಲೆ ಕುಳಿತಿರುವ ಸುಂದರ ತಪಸ್ವಿಯನ್ನು ಕಾಣುತ್ತಾಳೆ. ಆತನ ಕಂಡು ಆ ಸೂರ್ಯೋದಯದ ವೇಳೆಯಲಿ ಮುಖ ರಂಗೇರುತ್ತದೆ. ಗಂಡುಗಳ ಹಾಗೆ ಬೆಳೆದಿದ್ದರೂ ಸಹ ಸ್ತ್ರೀ ಸಹಜ ನಡವಳಿಕೆಗೆ ಚಿತ್ರಾಂಗದೆ ಹೊರತಾಗೇನಿಲ್ಲಾ.

ನೋಡು ನೋಡುತ್ತಿದ್ದಂತೆ ಆ ಸುಂದರ ತೇಜಸ್ವಿ ತನ್ನ ನಯನಗಳನ್ನು ತೆರೆದು ತನ್ನ ಮುಂದೆ ನಿಂತಿದ್ದ ತರುಣ ವೇಷದ ಚಿತ್ರಾಂಗದೆಯನ್ನು ಕಂಡು ಯಾರೆಂದು ವಿಚಾರಿಸಲಾಗಿ ಪ್ರತ್ಯುತ್ತರ ಬಾರದಿರುವುದನ್ನು ಕಂಡು 'ನುಡಿ, ಅಂಜದಿರು'. ಈ ನುಡಿ ಕೇಳಿ ಅವಳ ಹೃದಯದೊಳಗಿನ ಹುತ್ತದಲ್ಲಿ ಸುಪ್ತವಾಗಿದ್ದ ಪುರುಷತೆ ಒಡನೆಯೇ ಹೆಡೆಯೆತ್ತಿ ನಿಲ್ಲುತ್ತದೆ. ಪ್ರತಿಯಾಗಿ ಆ ತರುಣ ವೇಷದ ವೀರೆ ಚಿತ್ರಾಂಗದೆ

"ಅಂಜುವವರಾವಲ್ಲ! ಅಂಜುಕುಳಿಗಳ ರಕ್ಷಣೆಯೆ ನಮ್ಮ ಕುಲಕರ್ಮ; ಅಂಜದಿರು! ನುಡಿ ಎನಲ್ ನೀನಾರೆಲೆ ತಪಸ್ವಿ?" ಎಂಬ ಪ್ರಶ್ನೆಯನ್ನು ಎಸೆಯುತ್ತಾಳೆ. ಅದಕ್ಕೆ ಅರ್ಜುನನು,

"ಮುನಿಯದಿರ್, ಸಾತ್ವಿಕನೆ, ತಾಳ್ಮೆಯೊಳೆ ಬಾಳ್ಮೆಯಿದೆ"
.... ನಾನಾರೆ?
ಕುರುವಂಶನಾಮದೊಂದರಸುಮನೆತನಮಿಹುದು.
ಬಲ್ಲೆಯೇಂ? – ಸುಪ್ರಸಿದ್ಧನು ನೀನು. ನಿನಗೆ ಆ
ಅಪ್ರಸಿದ್ಧರ ಅರಿವದೆಂತಹುದು? ಆ ಬಳಿಯ
ಪಾಂಡುರಾಜಗೆ ಪಂಚಪಾಂಡವರ್ ಜನಿಸಿದರ್. –
ನೀರಸ ಕಥಾಲಾಪಮಿದು ನಿನಗೆ ಬೇಸರ್ಗಂ!–
ಕೇಳಿಬಲ್ಲೆಯ ಯುಧಿಷ್ಠಿರ ಭೀಮರೆಂಬರ್ಗಂ?
ನಕುಲ ಸಹದೇವರಂ? ಪಾರ್ಥನೆಂಬಾತನಂ?
ಶ್ರೀಕೃಷ್ಣನೆಂಬೋರ್ವ ಗೊಲ್ಲನಂ?– ನೀನರಿಯೇ:
ಅಖ್ಯಾತರಲ್ಪರಜ್ಞಾನತರವರನಿಬರುಂ!
ನೀಂ ಜಗದ್ವಿಖ್ಯಾತ ವನಚರಂ! ನಿನಗೆಂತು
ವೇದ್ಯಮಹುದಜ್ಞಾತರಿತಿಹಾಸಮದು? ಇರಲಿ;
ನಾಂ ಯುಧಿಷ್ಠಿರನಲ್ತು, ಮೇಣ್ ಭೀಮನುಮಲ್ತು;
ನಕುಲ ಸಹದೇವರೊಳಗೊಬ್ಬಾತನಲ್ತು; ಮೇಣ್
ಕೃಷ್ಣನೆಂಬಾ ಗೋವಳಿಗನಲ್ತು. ಆದೊಡಾಂ
ಧರ್ಮಜ ಕೃಪಾಪೋಷಿತಂ; ಭೀಮನಕ್ಕರೆಗೆ
ಪಾತ್ರನಾಗಿಹ ಕೃಷ್ಣ ಪದಕಮಲ ಕಿಂಕರಂ;
ಪಾಂಡವರ ಮಧ್ಯಮಂ; ಮೇಣ್ ಧನಂಜಯನೆಂಬ
ದುರ್‍ಯಶಕ್ಕೀಡಾಗಿ ತೊಳಲ್ವ ನಾನರ್ಜುನಂ!"

ಎಂದು ಸ್ವಪರಿಚಯ ಮಾಡಿಕೊಳ್ಳುತ್ತಾನೆ. ಅವನ ಹೆಸರನ್ನು ಕೇಳುತ್ತಲೇ ತನ್ನ ಬಾಳಿನ ಬಯಕೆಯಾರಾಧನೆಯ ಮೂರ್ತಿ ಇವನೆ ಎಂದು ಕುಸಿದು ಬೀಳುತ್ತಾಳೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಈ ಮೊದಲೇ ಚಿತ್ರಾಂಗದೆಯು ಅರ್ಜುನನ ಗುಣ, ಕೀರ್ತಿ, ವಿಶೇಷತೆಗಳನ್ನು ಕೇಳಿ ಬಗೆ ಸೋತು ಅವನನ್ನೇ ತನ್ನ ಆರಾಧ್ಯಮೂರ್ತಿ–ಯನ್ನಾಗಿ ಮಾಡಿಕೊಂಡಿದ್ದಾಳೆ. ಅವನನ್ನು ನೋಡದೆಯೆ ತನ್ನ ಹೃದಯದಲ್ಲಿ ಸ್ಥಾನ ಕೊಟ್ಟಿದ್ದಾಳೆ. ಅವಳಿಗರಿವಿಲ್ಲದಂತೆ ಬಯಕೆಯ ಮೊಳಕೆಯು ಮೊದಲಿನಿಂದಲೂ ಬೆಳೆಯುತ್ತಿದೆ.

ಆಕೆ ಅರ್ಜುನನ ಕೊಂಕು ಮಾತುಗಳಿಂದ ನೊಂದು ದುಃಖಿತಳಾಗಿ ಬಿಸಿಗಂಬನಿ ಸುರಿಸುತ್ತಾ ಹಿಂತಿರುಗಿದಳು. ಚೈತ್ರೋದಯದಲ್ಲಿ ವಿಫುಲ ಸಂಪತ್ತುಗಳಿದ್ದರೇನು? ದಾರಿದ್ರ್ಯವಿದೆ – ಕನ್ಯೆಯಾತ್ಮದಲ್ಲಿ. ತನ್ನ ಗಂಡುತನದ ಪರಾಕ್ರಮದಿಂದ ಮುದ್ರೆಯೊತ್ತಿದ ರೀತಿ ಇರುವ ತನ್ನಂಗವನ್ನು ನೋಡಿಕೊಂಡು ಜುಗುಪ್ಸೆಗೊಂಡಳು. ರಾಜಕುಮಾರಿ ಚಿತ್ರಾಂಗದೆ ತನ್ನ ಸಖಿಯರಿಗೆ ತನ್ನನ್ನು ಚೆನ್ನಾಗಿ ಅಲಂಕಾರ ಮಾಡುವಂತೆ ಆಜ್ಞೆಮಾಡುವಳು. ಚೆನ್ನಾಗಿ ಶೃಂಗರಿಸಿಕೊಂಡು ವೀರಯತಿ ಪಾರ್ಥನನ್ನು ಕಯ್ದುವಿಲ್ಲದ ಕದನದಲ್ಲಿ ಗೆಲ್ಲುವೆನೆಂದು ಹೊರಟಳು. ಹೊನ್ನಿನ ಸಂಜೆಯಲ್ಲಿ ಕೆಂಪಾದ ಬಿಸಿಲಿನಲಿ, ಹೊನ್ನೀರ ಮಳೆ ಬಿದ್ದ ಕಡೆಯಲ್ಲೆಲ್ಲಾ ಮಳೆಹನಿಗಳು ಸಣ್ಣಗೆ ಮಿರುಗುತ್ತಿದ್ದವು. ಮೃದುಗಾಳಿ ತೀಡಿತ್ತು. ಕತ್ತಲು ಆವರಿಸುತ್ತಿತ್ತು. ಕಾಡಿನಲ್ಲಿ ಧೈರ್ಯವಾಗಿ ತನ್ನಾರಾಧನೆಯ ಮೂರ್ತಿಯನ್ನು ನೆನೆದು ಬರುತ್ತಿದ್ದಳು. ದೂರದಲ್ಲಿ ಯತಿಮೂರ್ತಿ ಅರ್ಜುನನನ್ನು ಕಂಡು ಸಹಜ ರತಿ ಕಲಾಭ್ಯಾಸದ ಅರಿವಿಲ್ಲದೆ, ಶತ್ರುಗಳನ್ನು ಸಂಹರಿಸುವ ವಿಜಯದ ದೃಢ ನಿಶ್ಚಯದಿಂದ ಬಂದು ನಿಂತಳು. ವೈರಿಗಳನ್ನು ಗೆದ್ದಷ್ಟು ಸುಲಭ ಪುರುಷ ಪ್ರೀತಿಯನ್ನು ಗೆಲ್ಲುವುದು ಎಂದು ಭಾವಿಸಿದ್ದಳು. ಹತ್ತಿರ ಬರುತ್ತಿರುವ ಸ್ತ್ರೀಯಾಕೃತಿಯನ್ನು ಕಂಡು ಪಾರ್ಥ ಮೋಹಿನಿಯೋ, ರಕ್ಕಸಿಯೋ ಎಂಬ ಶಂಕೆ ಮೂಡಿ ಯಾರೆಂದು ವಿಚಾರಿಸುತ್ತಾನೆ. ಅದಕ್ಕೆ ಚಿತ್ರಾಂಗದೆ

"ನಿನ್ನ ಪ್ರೇಯಸಿ ನಾಂ ಪ್ರಣಯ ಭಿಕ್ಷೆಯ ಬೇಡಿ
ಬಂದೆನಾಂ ಸುಂದರನೆ ದಯಗೈ ಕರುಣಿಸೆನೆಗೆ"

ಎಂದು ನಿವೇದಿಸಿಕೊಳ್ಳುತ್ತಾಳೆ. ಇದನ್ನು ಕೇಳಿ ಅರ್ಜುನನು ಕಿರುನಗೆಯಾಡಿ ಇಂತೆಂದನ್ "ಸಾಹಸಿ ಕಿರಾತಕನ್ಯೆ! ಅಲ್ತುಲ್ತು! ಎಲೆ ಲಲನೆ, ಅಲ್ಲದಿರೆ ವರ್ತಿಪರೆ ನಾಗರಿಕರ ರೀತಿ ಪ್ರಣಯ ಪ್ರಸಂಗದಲಿ?" ಎಂದು ಜರೆದು ಮೂದಲಿಸಿ ಕಾರಣಾಂತರದಿಂದ ಹನ್ನೆರಡು ವರ್ಷಗಳ ನೋಂಪಿಯನ್ನು ಕೈಗೊಂಡಿದ್ದೇನೆ ಎಂದು ಅವಳನ್ನು ತಿರಸ್ಕರಿಸಿದ್ದಷ್ಟೇ ಅಲ್ಲದೆ "ನಿನ್ನೊಳೇನಿದೆ ಎನಗೆ ಎಣೆಯಾಗಿ, ಮೇಣೆನ್ನೆರ್ದೆಗೆ ಹೂವುಗಣೆಯಾಗಿ ನೀನಾವ ಪಾರ್ಥಿವ ಕುಲಾಂಬುಧಿಯ ಕಡೆಹದಲಿ ಮೂಡಿರುವ ಕೌಸ್ತುಭಂ? ನಿನಗದೇನಿಹುದೋ ಸೌಂದರ್ಯಸಂಪದಂ? ಬಿತ್ತರದ ಲೋಕದಳ್ ಕೇವಲ ಕನಿಷ್ಠರೆನೆ ನಿನಗಿಂತಲುತ್ತಮರ್" ಎಂಬ ಮೂದಲಿಕೆಯ ಮಾತುಗಳನ್ನು ಕೇಳಿ ಕೋಪಬಂದರೂ ಸಹಿಸಿಕೊಂಡು ದುಃಖಿತಳಾಗುತ್ತಾಳೆ. ಕೋಪ ಪ್ರದರ್ಶನ ಮಾಡುವುದು ಪೌರುಷದ ಕುರುಹೆಂದು ಬೆದರಿ ಕಂಬನಿಗರೆದು ಸೋಲ್ತೊಮ್ಮೆ ಗೆಲ್ದಳಾಕೆ!

ಸ್ತ್ರೀ ಸಹಜವಾದ ತಾಳ್ಮೆಯನ್ನು ಅರಿತು ಕೋಪಗೊಳ್ಳದೆ ಕಂಬನಿ ಹರಿಸುತ್ತಾಳೆ. ಸ್ತ್ರೀ ಸಂಯಮ ಸ್ವಭಾವವನ್ನೇ ನಮ್ಮ ನಾಯಕಿ ತೋರಿದ್ದು. ನಾರಿ ಸಹಜವಾದ ಭಾವ ಲಹರಿಯದು. ಪ್ರಣಯಭಂಗದಿಂದ ಚಿತ್ರಾಂಗದೆ ನೊಂದು ಅದರಲ್ಲೂ ಅರ್ಜುನನಿಂದ ಕಟು ಟೀಕೆಗೆ ಒಳಗಾಗಿ ತನ್ನ ಬಗ್ಗೆ ತಾನೇ ಜುಗುಪ್ಸೆ ಹೊಂದಿದಳು. ಖಿನ್ನ ಮನಸ್ಕಳಾಗಿ ದೇಗುಲಕ್ಕೆ ಬಂದು ಮದನ ಹರನಿದಿರಿನಲ್ಲಿ ಕೈಮುಗಿದು ನಿಂತಳು. ಮದನನ ಕೃಪೆಗಾಗಿ ಒಂದು ದಿನದಲ್ಲಿಯೇ ಯುಗದ ತಪವನಾಚರಿಸಿ ಮನ್ಮಥ ಕೃಪೆಯನ್ನು ಪಡೆದಳು. ಮನ್ಮಥನ ವರದಂತೆ ಒಂದು ತಿಂಗಳವರೆಗೆ ಅವಳು 'ಅಂಗಜಮೋಹದೀಪ ಶಿಖಿ'ಯಾಗುವಂತೆ ವರವನ್ನು ಪಡೆಯುತ್ತಾಳೆ. ಮಾರನೆಯ ದಿನ ನಸುಕಿನ ಸಮಯಕ್ಕೆ ಸರಿಯಾಗಿ ಸರಸ್ತೀರಕ್ಕೆ ಬಂದು ಅರ್ಜುನನೆದುರು ವಯ್ಯಾರದಿಂದ ಕಣ್ಸನ್ನೇ ಮಾಡುತ್ತಾ ತನ್ನ ಕೇಶ ಪಾಶವನ್ನು ಎಸೆಯುತ್ತಾಳೆ. ಸೃಷ್ಟಿಯ ಸೌಂದರ್ಯವೆಲ್ಲಾ ತನ್ನೆದುರಿನಲ್ಲಿ ಮಿಂಚಿ ಸುಳಿದು ಮರೆಯಾಯಿತ್ತಲ್ಲಾ ಎಂದು ಕನಸಿನಿಂದ ಎಚ್ಚೆತ್ತು ಅರ್ಜುನ ಸೊಬಗಿನರಸಿಯನರಸಿ ಅವಳ ಹಿಂದೆ ಓಡುತ್ತಾನೆ.

ತನ್ನ ಸೌಂದರ್ಯಕ್ಕೆ ಬಗೆಸೋತು ಪ್ರೇಮಭಿಕ್ಷೆ ಬೇಡುತ್ತಾ ಬಂದು ನಿಂತ ಅರ್ಜುನನ್ನೂ ಕಂಡು ಅಲ್ಲಿ ತನ್ನ ನಾಗರಿಕ ಚೂಟಿಯನ್ನು ಮೆರೆಯುತ್ತಾಳೆ ಚಿತ್ರಾಂಗದೆ. ಅವಳ ಮಾತು ಕೇಳುತ್ತಾ ಪಾರ್ಥನಿಗೆ ಯತಿಪತಿಯ ಯತಿತ್ವವಳಿದು ಅವಳ ಅಪೇಕ್ಷೆಯ ಪತಿತ್ವಕ್ಕೆ ದಾಸನಾಗುತ್ತಾನೆ. ಅಲ್ಲಿ ತನ್ನಿಷ್ಟವನ್ನು ಅರಹುತ್ತಾಳೆ.

ಚಿತ್ರಾಂಗದೇ : "ನನ್ನಿಷ್ಟನಾತಂ ಜಗತ್ಪ್ರಸಿದ್ಧಂ ವೀರಂ
ಮೂರುಲೋಕಗಳಲಿ ದೊರೆಯಿಲ್ಲವಾತಂಗೆ
ಸೌಂದರ್ಯದಲಿ ಬುದ್ಧಿಯಲಿ ಮಹಾವಿಕ್ರಮದಲಿ"[೧]
............................"ಸದ್ವಂಶ ಸಂಜಾತಂ
ಪಾರ್ಥಿವಕುಲ ವರಿಷ್ಠವಂಶ ಸಂಭವಶ್ರೇಷ್ಠಂ!"[೨]
....
"ಕುರುವಂಶ ಶರಧಿಯ ಸುಧಾಸೂತಿ ಲೋಕೈಕ
....
ವೀರ ತ್ರಿಭುವನ ಜಗದ್ವಿಜಯಿ ಅರ್ಜುನಂ!"[೩]

---

೧. ಕುವೆಂಪು, ಚಿತ್ರಾಂಗದಾ, ಪು. ೩೬
೨. ಕುವೆಂಪು, ಚಿತ್ರಾಂಗದಾ, ಪು. ೩೬
೩. ಕುವೆಂಪು, ಚಿತ್ರಾಂಗದಾ, ಪು. ೩೭

ಎಂದೊಡನೆಯೆ ಪಾರ್ಥನು ಆನಂದಭರಿತನಾಗಿ,

> "ಇದೊ ದೇವಿ ಮಣಿದ ಮೊಳಕಾಲಿನಲಿ ಸೆರೆಗೊಡ್ಡಿ
> ಶರಣಾರ್ಥಿಯಾಗಿರುವೆನರ್ಜುನಂ! ನನ್ನ ಸರ್ವಸ್ವವು
> ನೀನೆ ಪ್ರಾಣೇಶ್ವರಿ!"[೧]

ಎಂದು ಪರಿಪರಿಯಾಗಿ ಬೇಡುತ್ತಾನೆ. ಪ್ರೇಮಕ್ಕಾಗಿ ಅವಳಲ್ಲಿ ಹಾತೊರೆಯುತ್ತಾನೆ. ಅವನ ಸ್ಥಿತಿಯನ್ನು ನೋಡಿ ಮನದಲ್ಲಿ ಸಂತೋಷಿಸಿದಳು ಚಿತ್ರಾಂಗದೆ. ಆದರೂ ಅವನನ್ನು ಎಚ್ಚರಿಸುವ ಮಾತುಗಳನ್ನಾಡುತ್ತಾಳೆ. "ಕ್ಷಣಿಕ ಸುಖಕ್ಕಾಗಿ ಶಾಶ್ವತಾತ್ಮದ ಬಲಿಯೆ ಏನಿದೀ ದುರ್ಬಲತೆ, ಪ್ರೇಮವಲ್ಲ, ಕಾಮದ ಚಿಹ್ನೆ" ಎಂದು ಬುದ್ಧಿ ಹೇಳಿದರೂ, ಅವಳ ಮುಂದೆ ಶರಣಾರ್ಥಿಯಾಗಿರುವ ಅರ್ಜುನ, 'ನೀನೆ ಶಾಶ್ವತ ಸತ್ಯ ನೀನೆ ನಿರುತಂ. ಮಿಕ್ಕುದೆಲ್ಲವೂ ಹುಸಿ' ಎಂದು ಅವಳಲ್ಲಿ ಅನುರಕ್ತನಾಗುತ್ತಾನೆ. ಕಡೆಗೆ ಚಿತ್ರಾಂಗದೆ ಅರ್ಜುನನಿಗೆ ಮನಸೋತು "ಸೂರೆಗೊಳ್ಳೆನ್ನ ಸರ್ವಸ್ವಮಂ" ಎಂದು ತನ್ನನ್ನು ಪಾರ್ಥನಿಗೆ ಸಮರ್ಪಿಸಿಕೊಳ್ಳುತ್ತಾಳೆ.

ಹೀಗೆ ಪ್ರಣಯ ಸಮಾಗಮವು ಸಮಯದರಿವೆ ಇಲ್ಲದೆ ಸಾಗುತ್ತಿರಲು, ತನ್ನನ್ನು ರಸದ ಕಡಲಿನಲ್ಲಿ ಮುಳುಗಿಸಿದ ಸುಂದರಿಯ ಕುರಿತು ಅರ್ಜುನ 'ನೀನಾರೆಲೆಗೆ ಚೆನ್ನೆ?" ಎಂದು ಅವಳ ಪೂರ್ವಾಪರದ ಬಗ್ಗೆ ವಿಚಾರಿಸುತ್ತಾನೆ. ತಾನು ಯಾರೆಂದು ಹೇಳದೆ ಹಿಂಜರಿದ ರಾಜಕುಮಾರಿ ಕೇವಲ, 'ನಿನ್ನ ಬಳಿ ಬಂದು ಪ್ರಣಯ ಭಿಕ್ಷೆ ಬೇಡಿದ ಸಾಮಾನ್ಯ ಸ್ತ್ರೀ', ಎಂದಷ್ಟೇ ತನ್ನ ಪರಿಚಯವನ್ನು ಹೇಳಿಕೊಳ್ಳುತ್ತಾಳೆ. "ಹಿಂದೆ ನೀ ಮೂದಲಿಸಿ, ತಿರಸ್ಕರಿಸಿದ ಕಿರಾತ ಕನ್ಯೆ ಎಂದು ಜರೆದು ಅಪಮಾನಿಸಿದ ಹೆಣ್ಣು ನಾನೇ. ಮನ್ಮಥನ ವರಪ್ರಸಾದದಿಂದ ತನಗೀ ರೂಪು ಬಂದಿತೆಂದು ಅದರ ಅವಧಿ ಮುಗಿಯುತ್ತಾ ಬಂದಿದೆ" ಎಂದು ನಡೆದ ವೃತ್ತಾಂತವನ್ನು ಪಾರ್ಥನಿಗೆ ತಿಳಿಸುತ್ತಾಳೆ. ಆದರೆ ತಾನು ಯಾರ ಮಗಳು ಎಂಬುದನ್ನು ಹೇಳದೆ ಗರ್ಭಿತ ರಹಸ್ಯೆಯಾಗುಳಿಯುತ್ತಾಳೆ. ದೂರದಲ್ಲಿ ಉರಿಯುತ್ತಿದ್ದ ದೀಪಗಳನ್ನು ಕಂಡು ಪಾರ್ಥ ಅವು ಯಾರವೆಂದು ಕುತೂಹಲಭರಿತನಾಗಿ ಪ್ರಶ್ನಿಸಲು, ಅವು ಮಣಿಪುರದ ಸೈನ್ಯದ ಬಿಡಾರ. ರಾಜಕುಮಾರಿ ಚಿತ್ರಾಂಗದೆಯ ಬಗ್ಗೆ ಅಬಲಾ ಸುಲಭ ಕಲಾಧ್ವನಿಯಿಂದ ಚಿತ್ರಾಂಗದೆ ಬಣ್ಣಿಸುತ್ತಾಳೆ. ಅವಳ ಕ್ಷಾತ್ರರಮಣೀಯ ವೀರೋಚಿತ ತೇಜಸ್ಸನ್ನು ಕೇಳಿ ರೋಮಾಂಚಿತನಾದ ಪಾರ್ಥನಿಗೆ ಅವಳ ಬಗ್ಗೆ ಒಂದು ರೀತಿಯ ಗೌರವ ಭಾವ

---

೧. ಕುವೆಂಪು, ಚಿತ್ರಾಂಗದಾ, ಪು. ೩೮

ಮೂಡುತ್ತದೆ. ಆದರೆ ಸುಂದರ ರೂಪದ ಚಿತ್ರಾಂಗದೆ ಆಗಲೂ ಸಹ ತಾನು ಯಾರೆಂಬುದನ್ನು ಹೇಳದೆ ಉಳಿದುಬಿಡುತ್ತಾಳೆ.

ಒಂದು ದಿನ ಚಿತ್ರಾಂಗದೆ ಮತ್ತು ಪಾರ್ಥ ಪ್ರಕೃತಿಯನ್ನು, ಅದರ ಅಂದವನ್ನು ಸವಿಯುತ್ತಾ ಪರ್ವತದ ತುದಿಗೆ ಬಂದುನಿಂತು ಅದರ ವಿಸ್ತಾರತೆಯನ್ನು ನೋಡುತ್ತಾರೆ. ಆಕಾಶದವರೆಗೂ ಬೆಳೆದು ನಿಂತಿದೆಯೇನೋ ಎಂಬಂತೆ ಅದರ ವಿಶಾಲವಾದ ವ್ಯಾಪಕತೆಯನ್ನು ನೋಡಿ ಅರ್ಜುನನಿಗೆ ತನ್ನ ಸಹೋದರರ ನೆನಪಾಗಲು ತನ್ನ ಕೆಲಸಕಾರ್ಯಗಳ ಜ್ಞಾಪಕ ಬರಲು ಚಿತ್ರಾಂಗದೆಯನ್ನು ಕುರಿತು ತಾನು ಹೊರಡುವುದಾಗಿ ತಿಳಿಸುತ್ತಾನೆ. ತೀವ್ರ ಹೃದಯಭಾರದಿಂ ಒಬ್ಬರನ್ನೊಬ್ಬರು ಅಗಲಿಕೆಯನ್ನು ಸಹಿಸದಾದರು. ಷಟ್ ಮಾಸಗಳಿಗೆ ಹಿಂತಿರುಗಿ ಬರುವೆನೆಂದು ಚಿತ್ರಾಂಗದೆಗೆ ವಾಗ್ದಾನವನ್ನು ನೀಡುತ್ತಾನೆ. ಅವಳನ್ನು ಸಮಾಧಾನಪಡಿಸುತ್ತಾನೆ. ಆ ರಾತ್ರಿ ಇಬ್ಬರು ಮಲಗಿರಲು ನಡುರಾತ್ರಿಯ ವೇಳೆಯಲ್ಲಿ ಪಾರ್ಥನಿಗೆ ಎಚ್ಚರವಾಗಿ ಹೊರಡಲನುವಾಗುತ್ತಾನೆ. ಹೊರಡುವ ಮುನ್ನ ಅವಳ ಬೆರಳುಗಳಿಗೆ ತನ್ನುಂಗುರವನ್ನು ತೊಡಿಸುತ್ತಾನೆ. ಹೋಗುವ ಮುನ್ನ ಅವಳ ಮುಖವನ್ನೊಮ್ಮೆ ನೋಡುವ ಬಯಕೆಯಿಂದ ನೋಡಲು ಆಶ್ಚರ್ಯ! ಅಂದಿಗೆ ಮಾಸಾವಧಿಯ ರೂಪ ಕಳೆದು ಸಾಮಾನ್ಯ ಸ್ತ್ರೀಯಾಗಿದ್ದಳು ಚಿತ್ರಾಂಗದೆ. ಆದರೇನಂತೆ ತನ್ನ ಇಷ್ಟು ದಿನದ ಸಮಯದಲ್ಲಿ ಅಮೃತವನ್ನುಣಿಸಿ, ಸುಖವನ್ನು ಧಾರೆಯಾಗಿ ಹರಿಸಿದ್ದಳು. ಎಂದು ಬಿಡಲಾರದ ಮನಸ್ಸಿನಿಂದ ಹಿಂತಿರುಗಿ ನೋಡ–ನೋಡುತೆ ನಿರ್ಗಮಿಸಿದನು. ಇತ್ತ ಚಿತ್ರಾಂಗದೆಯ ಮನ ಇದಾವುದರ ಪರಿವೆ ಇಲ್ಲದೆ ತನ್ನ ಮುಂದಿನ ಭೀಕರ ಭವಿಷ್ಯದ ಗಂಧವು ತಿಳಿಯದೆ ಮಲಗಿತ್ತು.

ಈ ವೃತ್ತಾಂತವನ್ನು ಕವಿ ತಮ್ಮ ಮೊದಲ ಮೂರು ಪರ್ವಗಳಲ್ಲಿ ತಿಳಿಸಿದ್ದಾರೆ. ಈ ಮೊದಲ ಮೂರು ಪರ್ವಗಳು ಠಾಕೂರರಿಗೆ ಋಣಿಯಾಗಿದ್ದು, ಅಗತ್ಯಕ್ಕೆ ತಕ್ಕ ಅಲ್ಪ–ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಂಡು ಪೂರ್ವಚಿತ್ರಾಂಗದೆಯನ್ನು ಕಡೆದಿದ್ದಾರೆ, ಇಲ್ಲಿ ಚಿತ್ರಾಂಗದೆ ಪ್ರಣಯಿನಿಯಾಗಿ ಕಾಣಿಸಿಕೊಳ್ಳುತ್ತಾಳೆ. ಠಾಕೂರರಲ್ಲಿ ನಾಟಕ ಇಲ್ಲಿಗೆ ಮುಗಿಯುತ್ತದೆ. ಪ್ರಣಯಿನಿಯಾದ ಚಿತ್ರಾಂಗದೆ ತನ್ನ ಪರಿಚಯ ಮಾಡಿಕೊಂಡು ಬಿಡುತ್ತಾಳೆ. ಅಲ್ಲಿ ಮುಂದಿನ ಜೀವನದ ಯಾವ ಚಿತ್ರಣವೂ ಇಲ್ಲ. ಆದ್ದರಿಂದ ನಾಟಕವನ್ನು ಇಲ್ಲಿಗೆ ಮುಕ್ತಾಯಗೊಳಿಸಿದ್ದಾರೆ. ಏಕೆಂದರೆ ಕೇವಲ ಪ್ರಣಯಿನಿಯನ್ನಾಗಿ ಚಿತ್ರಿಸುವುದಷ್ಟೇ ಠಾಕೂರರ ಉದ್ದೇಶ. ಆದರೆ ಕುವೆಂಪುರವರು ಆಕೆಯ ಮುಂದಿನ ಜೀವನ ವಿವರಗಳನ್ನು ತಮ್ಮ ಉತ್ತರ ಚಿತ್ರಾಂಗದೆಯಲ್ಲಿ ನಮ್ಮ ಮುಂದಿಡುತ್ತಾರೆ. ಈ ಭಾಗವು ಲಕ್ಷ್ಮೀಶನ ಜೈಮಿನಿಭಾರತಕ್ಕೆ ಸಂಪೂರ್ಣವಾಗಿ ಅಲ್ಲದಿದ್ದರೂ ಕೊಂಚಮಟ್ಟಿಗೆ ಋಣಿಯಾಗಿದೆ. ಇದುವರೆವಿಗೂ ಪ್ರೇಮದ

ಪರಾಕಾಷ್ಠೆಯಲ್ಲಿ ಪ್ರಣಯಿನಿಯಾಗಿದ್ದ ಚಿತ್ರಾಂಗದೆ ಇನ್ನು ಮುಂದೆ ತ್ಯಾಗಮಯಿಯಾಗಿ, ವೀರಮಾತೆಯಾಗಿ, ಪ್ರೇಮತಪಸ್ವಿನಿಯಾಗಿ ಕಾಣಿಸಿಕೊಳ್ಳುತ್ತಾಳೆ. ಅವಳ ಆದರ್ಶಗಳು ಎಲ್ಲರ ಹೃನ್ಮನಗಳಲ್ಲಿ ಅಮರವಾಗುಳಿಯುತ್ತದೆ.

ಅರ್ಜುನನ ಅಗಲಿಕೆಯಿಂದ ನೊಂದು, ಬೆಂದು ಅವನಿಗಾಗಿ ತಡಕಾಡಿ, ಕರೆದು ಕೂಗಿ, ಸಂಕಟವನ್ನನುಭವಿಸುತ್ತಾ, ಅವನಿತ್ತ ಆಶ್ವಾಸನೆಯನ್ನು ನೆನೆದು, ಅವನು ಬೆರಳಿಗಿಟ್ಟಿದ್ದ ಉಂಗುರವನ್ನು ಜೋಪಾನ ಮಾಡುತ್ತಾ ಮಣಿಪುರಕ್ಕೆ ಹಿಂತಿರುಗುವಳು. ಮಗಳ ನಡೆ-ನುಡಿಯಲ್ಲಿನ ವ್ಯತ್ಯಾಸದಿಂದ ಮದುವೆಯೇ ಮದ್ದೆಂದು ಭಾವಿಸಿ ಆಕೆಯಲ್ಲಿ ಪ್ರಸ್ತಾಪಿಸಿರುತ್ತಾರೆ ತಂದೆ ತಾಯಿ. ಅದಕ್ಕೆ ಚಿತ್ರಾಂಗದೆ ಕಾಡಿನಲ್ಲಿ ತಾನು ಗಾಂಧರ್ವ ವಿವಾಹವಾದೆ ಎಂದು ಹೇಳುತ್ತಾಳೆ. ಇಲ್ಲಿ ಆಕೆಯ ಮನಃಸ್ಥಿತಿಯನ್ನು ಕವಿ ಹಿಡಿದಿಟ್ಟಿರುವ ಬಗೆ ಸೂಕ್ಷ್ಮಾತಿಸೂಕ್ಷ್ಮ ತೆರನಾದದ್ದು. ಯಾವ ಹೆಣ್ಣಿಗಾದರೂ ಈ ಸಂದರ್ಭ ಮರುಹುಟ್ಟು ಪಡೆದಂತೆ. ತನ್ನ ಇನಿಯ ಇನ್ನಾರು ತಿಂಗಳಲ್ಲಿ ಮರಳಿ ಬರುವನೆಂದು ತಾಯಿ ತಂದೆಯರಿಗೆ ಸಮಾಧಾನಪಡಿಸುತ್ತಾಳೆ.

ಅರ್ಜುನನ ಬರುವಿಕೆಯ ನಿರೀಕ್ಷೆಯಲ್ಲಿ ತಪವನ್ನು ಆಚರಿಸುತ್ತಾಳೆ. ಆರು ತಿಂಗಳುಗಳು ಕಳೆದು ಅರ್ಜುನನ ಬರುವಿಕೆಯ ಸಮಯ ಸಮೀಪಿಸಿತು. ಅವಳ ಉತ್ಸಾಹ ಸಡಗರಕ್ಕೆ ಕೊನೆಮೊದಲಿಲ್ಲ. ತಮ್ಮ ಹಿಂದಿನ ಭೇಟಿಯ ಸ್ಥಳಕ್ಕೆ ಧಾವಿಸಿ ಪಾರ್ಥನಿಗಾಗಿ ಕಾಯುವಳು. ಅಲ್ಲೆಲ್ಲಾ ಅವರಾಡಿದ ಮಧುರ ಅನುಭವಗಳನ್ನು ನೆನೆಯುವಳು. ಚಿತ್ರಾಂಗದೆಯ ಜೀವನೋದ್ವಿಗ್ನ ಜಿಹ್ವೆಯಲಿ ಬೇವು ಬೆಲ್ಲದ ದಿನ. ಕಾದಳು, ಕಾತುರತೆಯಿಂದ ಕಾದು ಕಾದು ರೋಸಿ ಹೋದಳು. ಆದರೆ ಬರಲಿಲ್ಲ ಪಾರ್ಥ. ಆಸೆ ತುಂಬಿದ ಹೃನ್ಮನಕ್ಕೆ ನಿರಾಸೆ. ಅತಿಭೀಷಣ ಮನಃಸ್ಥಿತಿಯಲ್ಲಿ ತುಂಬಿದ ನೋವಿನಲ್ಲಿ ತನ್ನ ಅರಮನೆಗೆ ಹಿಂತಿರುಗುವಳು. ತನ್ನ ತಾಯಿಗೆ ಕೊಟ್ಟ ವಚನವನ್ನು ನೆನೆದು, ಜನರ ಮೂದಲಿಕೆಯ ಮಾತುಗಳನ್ನು ಸಹಿಸಲಾರದೆ ಅತಿ ಸೂಕ್ಷ್ಮಮನಸ್ಥಿತಿಯಿಂದ ಆತ್ಮಹತ್ಯೆಗೆ ಶರಣಾಗಲು ಬಯಸಿತ್ತು ಚಿತ್ರಾಂಗದೆಯ ಮನ. ಸಾಗರ ತಟಿಯ ಮೇಲೆ ನಿಂತು "ಉರುಳುರುಳು ಸಾಗರವೆ ಮುನ್ನೀರಿನಾಗರವೆ ತೆರೆತೋಳ್ಗಳಿಂದೆಯಾಲಂಗಿಸಿ ಧರಿತ್ರಿಯ ವರುಷ ಶತ-ಗತವಾದರಳಿಯದನುರಾಗದಲಿ" ಎಂದು ಹಲಬುತ್ತಾಳೆ.

"ನಿರ್ಜನ ನಿಶಾವೇಳೆಯಲಿ ಚಿತ್ರೆ ಕ್ಷಾತ್ರಕುಲ
ರಮಣಿ ಬಾಳ್ಗೋಲೆಗುಜ್ಜುಗಂಗೈದು ಕಡಲತಡಿಗೈತಂದು
ಮಣಿದು ದಿಕ್ಪಾಲಕರಿಗೆ ಗಗನದೇವರ್ಕಳಿಗೆ ಪವನಂಗೆ
ಸಾಗರಕೆ ಶಶಿ ತಾರೆಗಳಿಗೆ ಭಿನ್ನೈಸಿದಳ್ ಕೈಮುಗಿದು....

ತನ್ನನ್ನು ಆತ್ಮಾಹುತಿಗೆ ಅರ್ಪಿಸಿಕೊಳ್ಳಲು ಬೇಡಿಕೊಳ್ಳುತ್ತಾಳೆ.

"ಲೋಕಸಾಕ್ಷಿಗಳಲ್ತೆ ಕರುಣಾ ದೇವರ್ಕಳಿರ...... ಪಾವನ ಸರಿತ್ಪತಿಯ
ವಿಸ್ತೃತೌದಾರ್ಯಕ್ಕೆ![1]

ಎಂದು ದುಃಖಿಸಿಕೊಂಡಳು. ಇವಳ ದುಃಖವನ್ನು ಕೇಳಿದ ಸಮುದ್ರಮೂರ್ತಿಯೂ ಪ್ರತ್ಯಕ್ಷವಾಗಿ ಅವಳಿಗೆ ಸಾಂತ್ವಾನ ಹೇಳುತ್ತದೆ. ಬದುಕಿನ ಭರವಸೆಯ ನುಡಿಗಳನ್ನಾಡುತ್ತದೆ.

"ಸಾಹಸಂಗೈಯದಿರ್; ನಡೆ, ಮಗಳೆ ನಿನ್ನೆಡೆಗೆ
ಕಡಲಲೊಡಲ ಕುಳಿರಿನಿಂ ಬೆಚ್ಚನೆಯ ಮನೆಮಡಿಲೆ
ಲೇಸು. ಕಣ್ಣೆದುರಿರ್ಪ ನೋವು ತಾನದೆ ಸೊಗಂ
ಕಾಣದಿಹ ಸಾವಿಗಿಂ ಮೇಣ್ ಮದ್ದಲ್ತು ಕೊಲೆ
ವಿರಹಕ್ಕೆ. ನಿನಗಹುದು ನಿನ್ನಿನಿಯ ದರ್ಶನಂ
ನೀನು ಕೊನೆಯುಸಿರೆಳೆವ ಮೊದಲ್. ನಿನ್ನೊಡಲಿನೊಳ್
ಬಳೆಯುತಿದ ಸ್ವಾತಿಹನಿ ಮುತ್ತಾಗಿ ಬೆಳೆವಂತೆವೋಲ್
ನಿಮ್ಮ ಬೇಟವ ಸಾರಸರ್ವಸ್ವ ಶಿಶು!" (ಸಾಲು ೧೮೨೧–೨೮)

ಸಮಾಧಾನದ ನುಡಿಕೇಳಿ ಚಿತ್ರಾಂಗದೆ ತನ್ನ ಜವಾಬ್ದಾರಿಯನ್ನರಿತುಕೊಂಡು ಮೊದಲ ಸ್ಥಿತಿಗೆ ಮರಳುತ್ತಾಳೆ. ಕ್ಷತ್ರಿಯೋಚಿತವಾದ ರಾಜಸಂಭ್ರಮದ ಮೊದಲ ಸ್ಥಿತಿಗೆ ತೆರಳುತ್ತಾ, ತಾಯಾಗಿ ಪೊತ್ತು ಪೊರೆದಳು ಒಂಭತ್ತು ತಿಂಗಳ ಚಂದ್ರಸಮ ತೇಜಸ್ವಿಯನ್ನು. ಮಗು ಅಚ್ಚರಿಯನ್ನುಂಟುಮಾಡುವಂತೆ ಬೆಳೆಯುತ್ತದೆ. 'ಬಭ್ರುವಾಹನ'–ನೆಂಬ ಹೆಸರಿಟ್ಟು ಪೆರ್ಮೆಯಿಂ ಮೊಲೆಯಡಿಸಿದಳು. ಸಿಂಹಿಣಿ ಕಿಶೋರ ಕೇಸರಿಯಂ ಪೊರೆಯುವಂತೆ, ಮತ್ತೊಬ್ಬ ಅರ್ಜುನನೊ ಎಂಬಂತೆ ಬೆಳೆದನಾ ಬಭ್ರುವಾಹನನು ತನ್ನ ನಾಡಿಗೆ ಕೋಟೆಯಾಗಿ. ಚಿತ್ರವಾಹನ ಅಳಿಯಲು ಚಿತ್ರಾಂಗದೆಯು ರಾಜ್ಯಭಾರವನ್ನು ವಹಿಸಿಕೊಂಡು ದರ್ಪದಿ ನಡೆದು ಮಗನು ಹರೆಯಕ್ಕೆ ಕಾಲಿಡುವವರೆಗೂ ರಾಜ್ಯವನ್ನು ಸುಭೀಕ್ಷವಾಗಿ ನಡೆಸಿದಳು. ನಂತರ ಮಗನ ಕೈಗೆ ರಾಜ್ಯಸೂತ್ರವನ್ನು ಕೊಟ್ಟು ಹೊರವಲಯ ಉದ್ಯಾನವೊಂದರಲ್ಲಿ ನಿತ್ಯವು ತಪಸ್ಸನ್ನಾಚರಿಸಲು ಮಗ್ನಳಾಗುವಳು. ಕಂದನಿಗೆ ರಾಜನೀತಿ ಧರ್ಮಭೀತಿಗಳನ್ನು ಚೆನ್ನಾಗಿ ಕಲಿಸಿದ್ದಳು ಚಿತ್ರಾಂಗದೆ. ಕಚ್ಚಿದರು ಕೊಲ್ಲದೆಯೆ ಕೇವಲ ವಿಷವ ಕಾರುವ ಭಯವನ್ನು ಹುಟ್ಟಿಸುವ ಹಾವಿನಂತೆ ನೆರೆಯ ರಾಜ್ಯಗಳಿಗೆ ಸಿಂಹಸ್ವಪ್ನವಾಗಿದ್ದನು ಬಭ್ರುವಾಹನ. ನೆರೆರಾಜ್ಯಗಳ ಮೇಲೆ ಮುತ್ತಿಗೆ

೧. ಕುವೆಂಪು, ಚಿತ್ರಾಂಗದಾ, ಪು. ೬೬–೬೭

ಹಾಕಿದರೂ ಕಪ್ಪಕಾಣಿಕೆಗಳನ್ನು ಬಯಸದೆ ನೆರೆಯ ದೊರೆಗಳು ಮಿತ್ರರಂಗೈದರಸು ಗೆಯ್ಯುತ್ತುಮಿರೆ ಭೂಮಿ ವರ್ಧಿಸಿತು. "ಸ್ವರ್ಗಮಾಯ್ತೆಂಬಿನಂ, ಮಣಿಪುರಕೆ ಭಿತ್ತರಿಸಿ ಶೋಭಿಸಿತು. ಸೌಂದರ್ಯ ಸ್ವಾತಂತ್ರ್ಯ ಸಂಸ್ಕೃತಿಗಳಂವೆರಸಿ ಧೈರ್ಯ ಶೌರ್ಯಂಗಳಿಂ ಶಾಂತಿಯಿಂ ನಲಿದತ್ತು ಜನಪದಂ ನಿಚ್ಚಮಾ!" ಸಂವತ್ಸರಗಳುರುಳಿ ಹರಿದುದು ನಿರಂತರದ ಕಾಲ ನದಿ. ಆರು ತಿಂಗಳಲ್ಲಿ ಬರುವೆನೆಂದು ಹೇಳಿ ತಿಂಗಳೆರಡಕ್ಕೆ ತಡವಾಗಿ ಮರಳಿ ಬಂದು ಬನದ ಗುಡಿಯ ಶಿವಾಲಯದಲ್ಲಿ ತನ್ನ ಇನಿಯಳಿಗಾಗಿ ತಡಕಾಡಿದನು ಪಾರ್ಥ. ಕಣ್ಣೀರು ಕರೆದು ಮಮ್ಮಲ ಮರುಗಿ ಕಾಂತೆಯೆಲ್ಲಿದ್ದಾಳೆಂಬುದು ತಿಳಿಯದೆ ಮರಳಿದನು. ಮುಂದೆ ನಡೆಯಲಿತ್ತು ಕುರು ಪಾಂಡವರ ಮಹಾಭಾರತ ಯುದ್ಧ. ಮೈನವಿರೇಳಿಸುವ ಮಹದ್ ಭವ್ಯ ಭಾರತ ಕದನ. ಚಿತ್ರಾಂಗದೆಯು ಮಹಾಭಾರತ ಯುದ್ಧ ಪ್ರಾರಂಭವಾಗುತ್ತಿದ್ದಂತೆ ನೋಂಪಿಯನ್ನು ಕೈಗೊಳ್ಳುವಳು.

"ಪಾರ್ಥಂಗೆ ಗೆಲಮಕ್ಕೆ!
ಅರ್ಜುನಗೆ ಸೊಗಮಕ್ಕೆ! ಜಯವಧು ಸವತಿಯಕ್ಕೆ!
ಧರ್ಮಸಂಸ್ಥಾಪಕಂ ದೇವಕಿನಂದನಗೆ
ನಿತ್ಯಮಂಗಳಮಕ್ಕೆ! ಲೋಕಕ್ಕೆ ಶಾಂತಿಯಕ್ಕೆ!"

ಎಂದು ವ್ರತದ ಪ್ರಾರ್ಥನೆಯನ್ನು ಮಾಡುವಳು. ಮಗನು ವ್ರತದ ಉದ್ದೇಶವೇನೆಂದು ಕೇಳಲು, ಬೆಸಸಿದಳಾಕೆ; "ಧರ್ಮದ ಜಯಕೆ ಬೇಡುತಿಹೆನೀಶನಂ" ಎಂದು ಹೇಳುವಳು. ಋತದ ಖಡ್ಗಕ್ಕೆ ಸುವ್ರತದ ಪ್ರಾರ್ಥನೆಯಹುದು ಸಾಣೆ". ಮಗ ಬಭ್ರುವಾಹನ ತಾಯಿಯಿಂದ ಮಹಾಭಾರತ ಯುದ್ಧದ ಹಿನ್ನೆಲೆಯನ್ನು ಕೇಳಿ ತಿಳಿದುಕೊಂಡು ಧರ್ಮದ ಜಯಕೆ ನೆರವಾಗಿ, ಮಣಿಪುರದ ಕೀರ್ತಿಗೆ ಕಲಶವಿಟ್ಟು ಬರಲು ಕುರುಕ್ಷೇತ್ರ ಯುದ್ಧಕ್ಕೆ ಸೇರಲು ಉತ್ಸಾಹತೋರುತ್ತಾನೆ. "ಕರೆಯದೆ ತೆರಳುವುದು ನೆಲದೊಡೆಯರಿಗೆ ತಗುವ ಮರ್ಯಾದೆಯಲ್ಲವೆಂದು" ಜನನಿ ಸಮಾಧಾನಪಡಿಸುತ್ತಾಳೆ. ಮಹಾಭಾರತಯುದ್ಧ ಮುಗಿದು ಪಾಂಡವರಿಗೆ ಜಯ ದೊರೆತು ಅಶ್ವಮೇಧ ಯಜ್ಞವನ್ನು ಆಚರಿಸುತ್ತಾರೆ. ಬಹುಕಾಲದ ಮೇಲೆ ಅಶ್ವಮೇಧಯಾಗ ನಿಮಿತ್ತವಾಗಿ ಅರ್ಜುನನು ಮಣಿಪುರದ ಕಡೆಗೆ ಬರುತ್ತಿರುವ ಸುದ್ದಿಕೇಳಿ ಚಿತ್ರಾಂಗದೆಗೆ ಸಂತಸವೋ ಸಂತಸ.

ದೀರ್ಘಸಮಯದ ನಂತರ ಪತಿಯ ದರ್ಶನ. ಬಭ್ರುವಾಹನನಿಗೆ ಮೂರು ಲೋಕದ ವೀರನೊಡನೆ ಕಾದಾಡುವ ಸಂತಸ. ಯಾಗ ಕುದುರೆಯ ಕಟ್ಟಿಹಾಕಿ ಯುದ್ಧಕ್ಕೆ ಅಣಿಯಾಗುತ್ತಾನೆ. ಇತ್ತ ಅರ್ಜುನ ಮಣಿಪುರದ ರಾಣಿ ಚಿತ್ರಾಂಗದೆಯ ಕಥೆ ಕೇಳಿ ರೋಮಾಂಚಿತನಾಗುತ್ತಾನೆ ಮತ್ತು ಮನಸ್ಸಿನಲ್ಲಿ ಏನೋ ಸಂಶಯ ಹುಟ್ಟಿ ಅದರ

ನಿವಾರಣೆಗಾಗಿ ಮಾರುವೇಷದಲಿ ಚಿತ್ರಾಂಗದೆ ಇದ್ದ ಸ್ಥಳಕ್ಕೆ ತೆರಳುತ್ತಾನೆ. ಚಿತ್ತದಲ್ಲಿ ತನ್ನ ಇನಿಯಳು ಇವಳೇನೋ ಎಂಬ ಶಂಕೆ ಮೂಡಿ ಹೋಲಿಸಿ ನೋಡುತ್ತಾನೆ.

"ತೆಗೆ ತೆಗೆ ಅದೆಲ್ಲಿಯದು? ಅವಳೆಲ್ಲಿ ಇವಳೆಲ್ಲಿ?
ಸರ್ವಸೌಂದರ್ಯ ಸಾರವದು! ನಿಸ್ಸಾರವಿದು!
ತಾಯ್ತನದ ಗಾಂಭೀರ್ಯವನು ಹೋಲಿಸುವುದುಂಟೆ
ತರುಳ ತರುಣತೆಯ ಮೋಹನ ಚಂಚಲತೆಯೊಡನೆ?
ಪುಷ್ಪ ಗರ್ಭಿತ ನವ–ವಸಂತಧ ಲಸಲ್ಲತೆಗೆ
ಪಣ್ ಬೀತುವೋದ ಮಾಗಿಯ ಮರದ ಸಾಮ್ಯಮೇಂ?"

ಮನಸ್ಸಿನ ಸಂದೇಹ ನಿವಾರಣೆಯಾಗಿ ಆ ತಪಸ್ವಿನಿಯ ಕಂಡು ಗೌರವ ಭಾವ ಮೂಡುತ್ತದೆ. ತನ್ನ ಪಾಳೇಯಕೆ ತಾನು ಹಿಂತಿರುಗುತ್ತಾನೆ.

ಕದನಗೈಯ್ಯುವ ಉತ್ಸಾಹದಿಂದ ಹಗೆಗೊಲೆಗೆ ತಾಯಿಯ ಆಶೀರ್ವಾದ ಪಡೆಯಲು ಪರ್ಣಕುಟೀರಕೆ ತೆರಳುತ್ತಾನೆ. ಮಗನಿಂದ ಕದನ ಮಾಡುವ ವಿಷಯ ತಿಳಿದು ಕಂಬನಿಗರೆದು ಗೋಳಾಡುತ್ತಾಳೆ. ಮಗನಿಂದಾದ ಅಕಾರ್ಯಕ್ಕೆ ಪ್ರತಿಯಾಗಿ ಯಾಗದ ಕುದುರೆಯನ್ನು ಬಿಟ್ಟು ಬಿಡೆಂದು ತಿಳಿಹೇಳುತ್ತಾಳೆ. ಅವನ ಉತ್ಸಾಹಕ್ಕೆ ಕಡಿವಾಣವಾಕುತ್ತಾಳೆ. ತನ್ನ ತ್ಯಾಗದ ಜೊತೆಗೆ ಮಗನಿಗೂ ತ್ಯಾಗಮಾಡೆಂದು, ಪಾರ್ಥನಿಗೆ ಶರಣಾಗೆಂದು ಉಪದೇಶಿಸುತ್ತಾಳೆ. ಇದು ಚಿತ್ರಾಂಗದೆಯ ವ್ಯಕ್ತಿತ್ವಕ್ಕೆ ಹಿಡಿದ ದರ್ಪಣ.

ತನ್ನ ತ್ಯಾಗಗುಣದಿಂದ ಸುತ್ತಲಿನ ಪರಿಸರಕ್ಕೂ ಆ ಗುಣ ಪಸರಿಸಬೇಕೆಂಬ ಮಹತ್ವಾಕಾಂಕ್ಷೆ ಹೊಂದಿಲ್ಲದಿದ್ದರೂ ಅದು ತಾನೇ ತಾನಾಗಿ ಅಂಕುರಿಸುತ್ತದೆ. ತಾಯಿಯ ಮಾತಿನ ಆಣತಿಯಂತೆ, ತಾಯಿಯ ಗುರು ಅರ್ಜುನ ಎಂದು ತಾಯಿಯ ಮಾತಿನಿಂದಲೇ ಕೇಳಿ ತಿಳಿದು ಯಾಗದ ಕುದುರೆಯನ್ನು ಬಿಡಲು ನಿರ್ಧರಿಸಿ ಕಪ್ಪಕಾಣಿಕೆ ಸಮೇತ ಅರ್ಜುನನ ಬಳಿಗೆ ಹೋಗುತ್ತಾನೆ. ಆದರೆ ಅಲ್ಲಿ ನಡೆದದ್ದೇ ಬೇರೆ. ವೀರಪಾನೋನ್ಮತ್ತನಾಗಿದ್ದ ಕಿರೀಟಿ ಬಭ್ರುವಾಹನನಿಗೆ ಅಪಮಾನಮಾಡುತ್ತಾನೆ. ಯುದ್ಧವನ್ನು ಮಾಡಲು ಹೆದರಿ, ಕಪ್ಪಕಾಣಿಕೆ ಸಮೇತ ಶರಣಾಗತನಾಗಲು ಬಂದಿರುವೆಯಾ? ಎಂದು ಮೂದಲಿಸುತ್ತಾನೆ. ನಿನ್ನ ತಂದೆ ಬಳೆತೊಟ್ಟ ನಟ್ಟುವನೊ" ಎಂದು ಜರೆದು ಅನುಚಿತವಾಗಿ ನಡೆದುಕೊಳ್ಳುತ್ತಾನೆ.

ಅರ್ಜುನನ ಕೊಂಕು ಮೂದಲಿಕೆಯ ಮಾತುಗಳನ್ನು ಕೇಳಿ ತನ್ನ ಹುಟ್ಟಿನ ಬಗ್ಗೆ ಅಸಹ್ಯಕರವಾದ ಮಾತುಗಳನ್ನು ಕೇಳುವಂತೆ ಮಾಡಿ ಬಿಟ್ಟಳಲ್ಲ ತಾಯಿ ಎಂದು

ಕೋಪಾವಿಷ್ಟನಾಗಿ, ಪ್ರಳಯ ಭಯಂಕರನಾಗಿ, ಕದನ ಕಾಳಿಗೆ ಆಹ್ವಾನವೀಯುತ್ತಾನೆ. ಆ ಕಿಶೋರಕೇಸರಿ. ಇಡೀ ಮಣಿಪುಳ ಸೈನ್ಯವೇ ಸಜ್ಜಾಯಿತು ಕದನಕ್ಕೆ. ಘೋರಾಂಧತೆ ಸುತ್ತಲೂ ಕವಿದಿತ್ತು.

ಪ್ರಳಯ ರೌದ್ರಾಭೀಲ. ಶೂಲಧರ ಧೂರ್ಜಟಿಯ ತಾಂಡವ ಸಮಯ ಚಂಡ ಡಮರು ಡಿಂಡಿಮದಂತೆ ಮೊಳಗಿದುದು ರಣಭೇರಿ, ಮೇರು ಮಾರ್ಧನಿ ಬೀರಿ ಬಿರುದುದೆನೆ ದಿಗ್ಭಿತ್ತಿ! ತೊಡಗಿದಳು ನರ್ತನಕೆ ಕರ್ಕಶ ಕದನಕಾಳಿ ಮಣಿಪುರದ ರಣಧರೆಯಲಿ, ತಂದೆ ಮಕ್ಕಳು ಒಬ್ಬರನ್ನೊಬ್ಬರು ತಾವು ಯಾರೆಂದು ಅರಿಯದೆ ಕಾಳಗದ ಭೂಮಿಯಲ್ಲಿ ನಿಂದಿದ್ದಾರೆ.

ಇತ್ತ ಮಗನಿಗೆ ಹೇಳಿ ಕಳುಹಿಸಿದ್ದ ಕಾರ್ಯವು ಏನಾಯಿತೋ ಎಂಬ ತಳಮಳದಿಂದ ಧ್ಯಾನಸ್ಥೆಯಾಗುತ್ತಾಳೆ. ಧ್ಯಾನ, ನಿದ್ರಾ ಸ್ವಪ್ನದರ್ಶನದಿ ಕಾಣಿಸಿತ್ತೊಂದು ದಿವ್ಯಾಕೃತಿ ರುಚಿರಮೂರ್ತಿ. ಅವಳಿಗೆ ರಣರಂಗದಲ್ಲಾಗುತ್ತಿರುವ ಅಕಾರ್ಯವನ್ನು ತಿಳಿಸುತ್ತದೆ. ಅವಳಿಗೆ ಏನು ಮಾಡಬೇಕೆಂಬುದನ್ನು ಹೇಳುತ್ತದೆ.

"ಹೋಗು ನಡೆ ಬೇಗದಲಿ;
ತಳುವಿದರೆ ಬೀಳುವುದು ಪಾರ್ಥನ ಕಳೇಬರಂ
ರಣಧರೆಗೆ : ತೊಡಗಿದೆ ನಿಶಾಯುದ್ಧಮಿರಾತ್ರಿ
ನಿನ್ನ ಹೃದಯದ ಬಲಿಯನಿತ್ತು ರಣದೇವತೆಗೆ
ಕೆರಳ್ದ ಬಿದಿಯಂ ತಣಿಸಿ, ಪತಿಸುತರ್ಗಿವರ್ಗೆ
ನೀಂ ಶುಭಂಕರಿಯಾಗು ನಡೆ ಹೋಗು ಬೇಗದಲಿ" ಎಂದು ಎಚ್ಚರಿಸುತ್ತದೆ.

ರುಚಿರಮೂರ್ತಿಯ ಸಂದೇಶವ ಕೇಳಿ ಆಘಾತಗೊಂಡವಳಂತೆ ಅರಮನೆಗೆ ಓಡಿಹೋಗಿ ಬಿಳಿಯ ಧ್ವಜವನ್ನು ಹಿಡಿದು ರಣರಂಗಕ್ಕೆ ಧಾವಿಸುವಳು. ಬಭ್ರುವಾಹನ ಜನನಿ, ಸಿತವಾಹನನ ಪತ್ನಿ, ಮಣಿಪುರದ ರಾಣಿ ಚಿತ್ರಾಂಗದೆ.

ಯಮಲೋಕವನ್ನೆ ತಂದು ಇಟ್ಟಂತೆ ಇತ್ತು ರಣಭೂಮಿ. ಮಣಿಪುರದ ರಣರಂಗ ನೆತ್ತರುವೃಷ್ಟಿಯಲ್ಲಿ ತೊಯ್ದಿತ್ತು. ಇಂತಹ ಭಯಂಕರ ರಣರಂಗದಲ್ಲಿ ನುಗ್ಗಿ ನಡೆಯುವಳು ಚಿತ್ರೆ. ಬಿಳಿಯ ಬಾವುಟವಿಡಿದು ದನಿಗೈದು ಶಾಂತಿಯಂ ತೋರಿ. ಕಂಡಳು! ಅತಿ ಭೀಷಣ ರುದ್ರಕಠಿಣ ಕೋಲಾಹಲದ ನಡುವೆ ಕಂಡಳು! ಸಮರ ಭೈರವ ಭೀಷ್ಮಲೀಲೆಯಲಿ ತೊಡಗಿರ್ದ ತಂದೆ ಮಕ್ಕಳ ಕಾಹುರದ ಕಾಳೆಗದ ರಾಹು! ಕಾಣಿಸಿತು. ನೆತ್ತಿಯೆಡೆ ರಣಚಂಡಿಯೊಡಗೂಡಿ ರಕ್ತದಾಹಾತುರದಿ ಕುಣಿಯುತ್ತಿರ್ದಾ ಮೃತ್ಯು 'ಕೊಳ್ಳೆನ್ನ ಕೊಳ್ಳೆನ್ನ! ಕಾಪಾಡು ಕಾಪಾಡು, ಪತಿಸುತರನೋ ಮೃತ್ಯು! ಎಂದೆನುತ್ತಾ

ರಾಣಿಹೊತ್ತ ಬಾವುಟದೊಡನೆ ತೂರ್ಯದ ಮಹಾರವಂ ಮೊರೆಮೊಣ್ಮೆ ಕರೆಗಣ್ಮೆ ಕಳಕೆಲ್ಲ ಕೇಳ್ವಂತೆ. ದನಿಗೈದು ಹಯದಿಂ ಕೆಳಕ್ಕೆ ಧುಮ್ಮಿಕ್ಕಿ ಹಾ! ಹಾ! ಮಗನೆ! ಹಾ ಮಗನೆ! ಕೈಯತಡೆ! ಕೈಯತಡೆ! ದಮ್ಮಯ್ಯ! ಎನ್ನುತ್ತಾ ಬ್ಬಸವಳಿದು ಧೊಪ್ಪೆಂದು ಬಿದ್ದಳು. ತಂದೆ ಮಕ್ಕಳ ನಡುವೆ ಸೇತುವೆನೆಪಿಣಿಲು ಹೆಣೆದ ಕಣೆಯ ರುಧಿರಮಯ ಶಯ್ಯೆಯಲಿ! ಬಿದ್ದ ಆಕೆಯ ಶುಶ್ರೂಷೆಗೆಂದು ತಂದೆ ಮಕ್ಕಳಿಬ್ಬರು ರಥದಿಂದಿಳಿದು ಓಡಿಬರುತ್ತಾರೆ. ನೆತ್ತರು ಹರಿಯುತ್ತಿದೆ ಪಾರ್ಥ ಕಂಗೆಟ್ಟು ನೋಡುತ್ತಿದ್ದಾನೆ. ತನುಜ ದುಃಖಿತನಾಗಿ ರೋಧಿಸುತ್ತಿದ್ದಾನೆ. ಆ ಸಮಯದಲಿ ತಾಯಿಯ ಸ್ಥಿತಿಯನ್ನು ಕಂಡು ಏನು ಮಾಡಬೇಕೆಂಬುದು ತೋಚದೆ ರೋದನದಲ್ಲಿ ಮುಳುಗಿದ್ದಾನೆ. ಇದನ್ನು ಕಂಡ ಆ ಜನನಿ "ದುಗುಡವೇಕಲೆ ಮಗನೆ? ಸಂತಸಕೆ ಸಮಯವಿದು ನಾನಳಿವೆನಾದರೇನು? ಮಂಗಳ ಮುಹೂರ್ತಕ್ಕೆ ನಾನಿಲ್ಲಿಗೈತಂದೆನಲ್ಲದಿರ್ದೊಡೆ ನಿನ್ನ ತಂದೆಯಂ ಕೊಲುತಿರ್ದೆ ನೀಂ! ಮಹಾಪಾತಕಕೆ ಪಕ್ಕಾಗುತಿರ್ದೆ" ಅರ್ಜುನನ ಕೈಗೆ ನರನಾಮಾಂಕಿತದ ಶ್ರೀಯುಂಗರವನ್ನು ಕೊಟ್ಟಳು ಸಾಕ್ಷಿಯಾಗಿ. ಸರಿಧಿಯನ್ನೊರೆದು ಶಾಂತಿಯಂ ನುಡಿದು ಶಾಂತಾತ್ಮದಿಂ ಶಿವನಾಮವಂ ಸ್ಮರಿಸಿ ಕಣ್ಣುಮುಚ್ಚಿದಳು. ಮೃತಮಯ ಚಿರ ಸಮಾಧಿಯಲಿ! ಇಡಿ ರಣರಂಗವನ್ನೆಲ್ಲಾ ರೋಧನೆಯು ಆವರಿಸಿತ್ತು. ಇಡೀ ಮಣಿಪುರವೇ ಕಂಬನಿಯ ಮಳೆಯಲ್ಲಿ ನೆಂದುಹೋಯಿತು. ಮಣಿಪುರದ ಅನರ್ಘ್ಯ ರತ್ನ ತನ್ನ ಹಾಗೂ ತಿರೆಯ ಸಂಬಂಧವ ಕಳಚಿ ಸಾಗಿತ್ತು ಚಿತ್ರಾಂಗದೆಯ ಕಳೇಬರ. ಸಕಲರಾಜ ಮರ್ಯಾದೆಗಳಿಂದ ಚಿತ್ರಾಂಗದೆಯ ದೇಹವ ಪೂಜಿಸಿ ಅಲಂಕರಿಸಿ ಕೊಂಡೊಯ್ದರೂ ಮಸಣಕೆ। ಚಿತೆಯು ಚಿತ್ರಾಂಗದೆಯ ದೇಹಕೆ ತಾಗಿದೊಡನೆ ಕಂಡರೆಲ್ಲರೂ ಚಿತಾ ಚಿತ್ರಭಾನುವ ಮಧ್ಯೆ, ಕನಸು ಕಂಡಂತೆ, ಚಿತ್ರಾಂಗದೆಯ ಸುಪ್ರಭಾ ಸುರಧನು ದುಕೂಲ ಸುಂದರ ದೇವಮೂರ್ತಿಯಂ ಪುಷ್ಪಕ ವಿಮಾನ ಪೀಠಸ್ಥೆಯಂ!

ಇಂತಹ ಕರುಣಾಪೂರ್ಣ ತ್ಯಾಗದೇಪತೆಯ ಮೂರ್ತಿಯಂ ಹಾಲ್ಗಲ್ಲಿನಲ್ಲಿ ಸ್ಮಾರಕವನ್ನು ನಿರ್ಮಿಸಿದರು. ಈ ಮಹಾಮಾತೆಯ ಚರಿತ್ರೆ ಪಾವನವಾಯಿತು.

"ಜ್ಞಾನಮಜ್ಞಾನಮಂ
ದಹಿಸುವಂತಗ್ನಿ ಸುಡೆ ಸುಡೆ ಕಾಯ ಮಾಯೆಯಂ
ತವಿಸಿದರದಂ ಪ್ರೇಮದಮೃತತ್ವದಂತಿರ್ದು
ಕುಂಭ ಕುಂಭಂಗಳಲಿ ತುಂಬಘನೆ ತುಂಬೆರೆದ
ಫೇನ ಧವಳಿಮ ಧೇನುದುಗ್ಧಾಭಿಷೇಕದಿಂದೆ!
ಹಗಲಿರುಳು ಏಳುದಿನಮಲ್ಲಿ ಚೈತ್ಯಾಲಯಂ
ಚಿತ್ರಾಂಗದೆಯ ಯಶಶ್ಚೈತ್ರ ಸುರತರುವಂತೆ

ಬೆಳೆದುದೊಯ್ಯನೆ ಹಾಲುಗಲ್ಲಿನ್ನೆಲಿ. ಕುಳಿರಿಂದೆ
ಹೆಪ್ಪಾದ ಹಾಲ್ಗಡಲಿನೈಕಿಲೊಳ್ಗಡ್ಡೆಯಂ
ಕಡಿಕಡಿಯುತಿಟ್ಟಿಗೆಯನೊಟ್ಟಿ, ಕಲ್ಪನೆಯಲ್ಲಿ
ಸವಿಯ ನೆನಹಿನ ಮೆನೆಯನೊಲಿದು ನಿರ್ಮಿಸುವಂತೆ,
ಕಟ್ಟಿದರಜಸ್ರಂ ಸಹಸ್ರ ಶಿಲ್ಪಿಗಳಲ್ಲಿ
ಸ್ಮಾರಕ ನಿಕೇತನ ಸ್ತೂಪಮಂ! ತಿರೆಯೊಲ್ಮೆ
ಸಿರವೆತ್ತಿ ಸಗ್ಗನೀಲಿಗೆ ಮುತ್ತು ಕೊಡುವಂತೆವೋಲ್
ಮಣಿಪುರ ಮನದ ಮಹಾಸ್ಮೃತಿಸುಧಾಶಿವರೂಪಿ ತಾಂ
ಮೆರೆದುದಾ ಮೂಕ ಶೋಕದಶಿಲೆಯ ಸಂಗೀತೆ!

ಚಿತ್ರಾಂಗದೆಯ ಜೀವನ ಪರಿಪೂರ್ಣ ಪ್ರೇಮಕ್ಕೆ, ಶೌರ್ಯಕ್ಕೆ, ತ್ಯಾಗಕ್ಕೆ ಹೆಸರುವಾಸಿಯಾಗಿ ಅವಳ ಆದರ್ಶಗಳು ಇಂದಿಗೂ ದಾರಿದೀಪವಾಗಿ ಬೆಳಗಿದೆ.

ಈ ಭಾಗದಲ್ಲಿ ಕುವೆಂಪುರವರು ಚಿತ್ರಾಂಗದೆಯ ಸಾತ್ವಿಕ ಜೀವನದ ವೃತ್ತಾಂತವನ್ನು ಕಟ್ಟಿಕೊಟ್ಟಿದ್ದಾರೆ. ಅದುವರೆಗೂ ಪೂರ್ವ ಚಿತ್ರಾಂಗದೆಯಲ್ಲಿದ್ದ ಬಾಲಿಶ ವರ್ತನೆ, ಯೌವನ ಸಹಜ ಬಯಕೆಗಳಿಂದ ಮುಕ್ತಳಾಗಿದ್ದಾಳೆ. ಶೌರ್ಯ, ಸಾಹಸ, ಪ್ರೇಮ, ತ್ಯಾಗ ಮುಂತಾದ ಗುಣಗಳಿಗೆ ಹೆಸರುವಾಸಿಯಾಗಿದ್ದಾಳೆ. ಕಲಾತಪಸ್ವಿ-ಯನ್ನು ಜೀವಂತ ಜ್ವಲಂತ ಸಾಕ್ಷಿಯನ್ನಾಗಿ ಕಡೆದು ಉತ್ತಮಕಾವ್ಯ ಕಲಾಕೃತಿಯನ್ನು ನಿರ್ಮಿಸಿದ್ದಾರೆ ಕವಿ ಕುವೆಂಪು.

ಹೀಗೆ ಕುವೆಂಪುರವರು ತಮ್ಮ ಖಂಡಕಾವ್ಯದಲ್ಲಿ ಪೂರ್ವ ಚಿತ್ರಾಂಗದೆ ಮತ್ತು ಉತ್ತರ ಚಿತ್ರಾಂಗದೆಯ ಜೀವನವೃತ್ತಾಂತವನ್ನು ತಮ್ಮ ಪ್ರತಿಭಾ ಬಲದಿಂದ ಅನೇಕ ಬದಲಾವಣೆಗಳನ್ನು ತಂದು 'ಪ್ರೀತಿ'ಯ ಮೌಲ್ಯವನ್ನು ಎತ್ತಿಹಿಡಿದಿದ್ದಾರೆ. ಕಥಾಸ್ವರೂಪದ ಈ ಅಧ್ಯಾಯದಲ್ಲಿ ಕಾವ್ಯದ ಕಥೆಯನ್ನು ಸಂದರ್ಭಗಳ ಜೊತೆಗೆ ವಿವರಿಸಲಾಗಿದೆ.

ಅಧ್ಯಾಯ – ಎರಡು

ಪಾತ್ರಗಳ ನಿರೂಪಣೆ

ಚಿತ್ರಾಂಗದಾ ಖಂಡ ಕಾವ್ಯದಲ್ಲಿ ಮುಖ್ಯವಾಗಿ ಮೂರು ಪಾತ್ರಗಳು

೧) ಚಿತ್ರಾಂಗದೆ

೨) ಅರ್ಜುನ

೩) ಬಭ್ರುವಾಹನ

ಇವುಗಳಲ್ಲದೆ ಸ್ವಪ್ನದರ್ಶನದಲ್ಲಿ ಬರುವ ಪಾತ್ರಗಳು

೧) ಮದನ

೨) ಸಮುದ್ರ ಮೂರುತಿ

೩) ರುಚಿರ ಮೂರ್ತಿ

ಚಿತ್ರಾಂಗದಾ ಕಾವ್ಯಕ್ಕೆ ನಾಯಕಿಯ ಹೆಸರನ್ನು ಚಿತ್ರಾಂಗದೆಯೆಂದು ಇಟ್ಟಿರುವುದು ಸರ್ವ ವಿಧದಲ್ಲಿಯೂ ಸೂಕ್ತವಾದುದು. ಆಕೆಯ ಜೀವನದ ಅವಸ್ಥಾಂತರಗಳನ್ನು ಪರಿಪೂರ್ಣವಾಗಿ ಹಿಡಿದಟ್ಟಿರುವ ಪ್ರಥಮ ಕಾವ್ಯವಿದು. ಈಗಾಗಲೇ ಮೊದಲ ಅಧ್ಯಾಯದಲ್ಲಿ ಚಿತ್ರಾಂಗದೆಯನ್ನು ಆಕೆಯ ಜೀವನವನ್ನು ಕುರಿತ ವಿಸ್ತಾರವಾದ ಕಥಾ ವಿನ್ಯಾಸವನ್ನು ಗಮನಿಸಿಯಾಗಿದೆ. ಈಭಾಗದಲ್ಲಿ ಆಕೆಯ ಪಾತ್ರ ವಿಶೇಷತೆಯನ್ನು, ರಚನಾ ಕೌಶಲವನ್ನು ನೋಡಬಹುದು.

ಚಿತ್ರಾಂಗದೆಯ ಪಾತ್ರದ ವಿಶಿಷ್ಟತೆಯನ್ನು ಚರ್ಚಿಸಬೇಕಾದರೆ ಠಾಕೂರರ ಚಿತ್ರಾ, ಲಕ್ಷ್ಮೀಶನ ಚಿತ್ರೆಯೊಡನೆ ಸಮೀಕರಿಸಿ ಹೇಳಬಹುದು. ಕವಿ ಹೇಳಿರುವಂತೆ ಪೂರ್ವ ಚಿತ್ರಾಂಗದೆಯು ಠಾಕೂರರಿಗೆ ಋಣಿಯಾಗಿದ್ದರೆ ಉತ್ತರ ಚಿತ್ರಾಂಗದೆಯು ಲಕ್ಷ್ಮೀಶನಿಗೆ ಕೊಂಚಮಟ್ಟಿಗೆ ಋಣಿಯಾಗಿದೆ.

ಮಣಿಪುರದ ರಾಜ ತನಯನ ಮಗಳು ಚಿತ್ರಾಂಗದೆ. ಚಿಕ್ಕಂದಿನಿಂದಲೂ ಈಕೆ ಗಂಡಿನಂತೆಯೇ ಬೆಳೆದವಳು. ಬೇಟೆಗೆಂದು ಅರಣ್ಯಕ್ಕೆ ತೆರಳುವುದು, ವೀರರಂತೆ ಹೋರಾಡುವುದು ಸರ್ವೇಸಾಮಾನ್ಯವಾಗಿತ್ತು. ಸ್ತ್ರೀಯರಿಗಿಂತಲೂ ವಿಭಿನ್ನ ರೀತಿಯಲ್ಲೆ ಬೆಳೆದ ಚಿತ್ರಾಂಗದೆ ಒಮ್ಮೆ ಕಾಡಿಗೆ ಬೇಟೆಗೆಂದು ತೆರಳುತ್ತಾಳೆ. ಅಲ್ಲೆ ವಿಶ್ರಾಂತಿ ಪಡೆಯುತ್ತಾ ಮಲಗಿರಲು ಸ್ವಪ್ನ ದರ್ಶನವಾಗುತ್ತದೆ. ಆ ಸ್ವಪ್ನದಲ್ಲಿ ಜಿಂಕೆಮರಿಯೊಂದನ್ನು ಕಂಡು ಅದನ್ನು ಹಿಡಿವೆನೆಂಬಾತುರದಲಿ ಅದರ ಹಿಂದೆ

ಓಡುತ್ತಾಳೆ. ಆ ಜಿಂಕೆಮರಿಯು ಮಿಂಚಿ ಮರೆಯಾಗುತ್ತಾ ಅಡವಿಯೊಳಗೆ ಓಡುತ್ತದೆ. ಇನ್ನೇನು ಕೈಗೆ ಸಿಗಬೇಕೆನ್ನುವಷ್ಟರಲ್ಲಿ ಬಾಣಬಿಡಬೇಕೆಂದು ಗುರಿ ಇಡುತ್ತಾಳೆ. ಆಶ್ಚರ್ಯಚಕಿತಳಾಗಿ ಸುಂದರ ಮೋಹನ ರುಕ್ಮರಾಗತಪಸ್ನಾತ ಮೂರ್ತಿಯನ್ನು ಕಾಣುತ್ತಾಳೆ. ಮೊತ್ತ ಮೊದಲ ಬಾರಿಗೆ ಚಿತ್ರಾಂಗದೆಯ ಹೃದಯದಲ್ಲಿ 'ತಾನು ಸ್ತ್ರೀಯೆಂಬ ಲಜ್ಜಾಕಂಪನ ಮೊಳೆಯೊಡೆಯುತ್ತದೆ.

"......................ಸ್ಫುರಿಸಿತಾ ಗಂಡೆದೆಯ
ಹೃದಯದಲಿ ತಾನು ಹೆಣ್ಣೆಂಬ ಲಜ್ಜೆಯ ಲಹರಿ
ಮೊತ್ತಮೊದಲ್"

ಇಲ್ಲಿ ಕವಿ ಸ್ವಪ್ನದರ್ಶನದ ಮೂಲಕ ಆಕೆಗೆ ಅರ್ಜುನನ್ನು ತೋರಿಸುತ್ತಾರೆ. ಕನಸಿನಿಂದ ಎಚ್ಚೆತ್ತ ಆಕೆಗೆ ವಾಸ್ತವದಲ್ಲಿ ಆ ಮೂರ್ತಿಯನ್ನು ನೋಡಿ ಕಂಪಿಸುತ್ತಾಳೆ. ಅದೇ ಅನುಭವ ಅವಳಿಗೆ ಮತ್ತೊಮ್ಮೆ ಸ್ಫುರಿಸುವುದು. ಆತನನ್ನು ನೋಡ-ನೋಡುತ್ತ ಶಿಲೆಯಾಗಿ ನಿಂತುಬಿಡುತ್ತಾಳೆ. ಮೊದಲ ಬಾರಿಗೆ ಉಂಟಾದ ಈ ಅನುಭವಗಳಿಂದ, ಗೊಂದಲಗಳಿಂದ ಅಂತರಂಗದಲ್ಲಾಗುವ ತುಮುಲಗಳಿಂದ ಬಾಯಾರಿದಂತಾಗುತ್ತಾಳೆ.

ಆ ಸುಂದರ ಮೂರ್ತಿಯು ತರುಣ ವೇಷದ ಚಿತ್ರಾಂಗದೆಯನ್ನು ಕಂಡು 'ಆರು ನೀನೆಲೆ ತರುಣವೇಷದವೀರ ನುಡಿ। ಅಂಜದಿರು' ಎಂದಾಗ ಮೋಹನ ಮಂತ್ರದಂತೆ ಮಲಗಿದ್ದ ಆ ಗಂಡೆದೆಗೆ ಬಿಂಕದುರಿ ತಗುಲಿ ಪ್ರತಿವಾದಕ್ಕ ಅಣಿಯಾಗುತ್ತಾಳೆ. ಅಂಜುವವರಾವಲ್ಲ। ಅಂಜಿಕೆಯ ಕಂಡಿಲ್ಲ ಅಂಜುಕುಳಿಗಳ ರಕ್ಷಣೆಯೆ ನಮ್ಮ ಕುಲಕರ್ಮ। ಅಂಜದಿರು ಎನಲ್ ನೀನಾರೆಲೆ? ತಪಸ್ವಿ, ಎಂದು ಮರು ಪ್ರಶ್ನೆಯನ್ನು ಹಾಕುತ್ತಾಳೆ. ಇಲ್ಲಿ ಚಿತ್ರಾಂಗದೆಯ ವರ್ತನೆ ಅನುಚಿತವಾದದ್ದು, ದರ್ಪದೀ ನಡವಳಿಕೆ ಕ್ಷತ್ರಿಯರಿಗೆ ಸರಿಯಷ್ಟೆ. ಕ್ಷತ್ರಿಯ ರಾಜಕುಮಾರಿ ಚಿತ್ರಾಂಗದೆಯು ಇದಕ್ಕೆ ಹೊರತಾಗಿಲ್ಲ.

ಅ ತಪಸ್ವಿಯೆ ಅರ್ಜುನನೆಂದು ತಿಳಿದ ಮೇಲೆ ಮೂಕ ವಿಸ್ಮಿತಳಾಗುತ್ತಾಳೆ. ತನ್ನೊಲುಮೆ ಆರಾಧ್ಯಮೂರ್ತಿ ಇವನೇ ವಂದು ತಿಳಿದು ತನ್ನ ಮೇಲೆ ತನಗೆ ಬೇಸರಪಟ್ಟುಕೊಳ್ಳುತ್ತಾಳೆ. ಈಗಾಗಲೇ ಕುರುವಂಶದ ಬಗ್ಗೆ ಕೇಳಿ ತಿಳಿದಿದ್ದ ಚಿತ್ರಾಂಗದೆ ಪಾರ್ಥನನ್ನು ಮೊದಲಿನಿಂದಲೂ ತನ್ನ ಹೃದಯದಲ್ಲಿ ಆರಾಧಿಸಿದ್ದಳು. ತನ್ನ ಪರಿವಾರಕ್ಕೆ ಹಿಂತಿರುಗಿ ಚೆನ್ನಾಗಿ ಸಿಂಗರಿಸಿಕೊಂಡು ಪಾರ್ಥನಲ್ಲಿಗೆ ಬಂದು ಪ್ರಣಯ ಭಿಕ್ಷೆಗಾಗಿ ಬೇಡುತ್ತಾಳೆ. ಪಾರ್ಥನು ಹನ್ನೆರಡು ವರ್ಷದ ವ್ರತದ ನೆಪವೊಡ್ಡಿ, 'ನಿನ್ನೊಳಗೇನಿದೆ ಎನಗೆಣೆಯಾಗಿ?' ಎಂದು ಮೂದಲಿಸುತ್ತಾನೆ. ಪ್ರಣಯ

ಭಂಗವಾದಂತಾಗಿ ಮನ್ಮಥನನ್ನು ಪ್ರಾರ್ಥಿಸುತ್ತಾಳೆ. ಕವಿ ಇಲ್ಲಿ ಮತ್ತೆ ಸ್ವಪ್ನದರ್ಶನ ಮಾಡಿಸುತ್ತಾರೆ. ಕನಸಿನಲ್ಲಿ ಮದನನ ಸಾಕ್ಷಾತ್ಕಾರವಾಗಿ ಒಂದು ಮಾಸ ಅವಧಿ 'ಅಂಗಜಮೋಹದೀಪಶಿಖಿ' ಯಾಗುವಂತೆ ವರವನ್ನು ಪಡೆಯುತ್ತಾಳೆ.

ಅರ್ಜುನನಿಂದ ಅಪಮಾನಿತಳಾಗಿ ಅವನನ್ನೇ ಪಡೆದೇ ಪಡೆವೆನೆಂಬ ಹಠದಿಂದ ಕಾರ್ಯ ಪ್ರವೃತ್ತವಾಗುವುದನ್ನು ನಾವಿಲ್ಲಿ ಗಮನಿಸಬಹುದು. ಮನ್ಮಥನಿಂದ ಪಡೆದ ವರದಿಂದ ತನ್ನ ಸೌಂದರ್ಯವು ವೃದ್ಧಿಯಾಗಿ ತನ್ನ ಕಣ್ಣನ್ನು ತಾನೇ ನಂಬದಾದಳು. ಇಲ್ಲಿ ತನ್ನ ಇನಿಯನಿಗೆ ಮನಸೋತ ಒಂದು ಹೆಣ್ಣಿನ ಆಂತರ್ಯದ ಚಿತ್ರಣವಿದೆ. ಸರ್ವಾಂಗ ಸುಂದರಿಯಾದ ಚಿತ್ರೆ ಅರ್ಜುನನ ಬಳಿ ಬಂದು ವಯ್ಯಾರವನ್ನು ತೋರುತ್ತಾಳೆ. ಇಲ್ಲಿ ಕವಿ ಬಳಸಿರುವ ಉಪಮೆ ಅವಳ ಮನಃಸ್ಥಿತಿಯನ್ನು ಚೆನ್ನಾಗಿ ಬಿಂಬಿಸುತ್ತದೆ. ಅವಳ ಸೌಂದರ್ಯಕ್ಕೆ ಮನಸೋತ ಅರ್ಜುನ ಅವಳಿಗೆ ಶರಣಾಗುತ್ತಾನೆ. ಅವಳಲ್ಲಿ ಪ್ರಣಯಭಿಕ್ಷೆಯನ್ನು ಬೇಡುತ್ತಾನೆ. ಈ ಸಂದರ್ಭದಲ್ಲಿ ಚಿತ್ರಾಂಗದೆ ಅತಿಬುದ್ಧಿವಂತೆಯ ರೀತಿ ನಡೆದುಕೊಳ್ಳುತ್ತಾಳೆ. ನಾನು ವ್ರತವನ್ನು ಕೈಗೊಂಡಿದ್ದೇನೆ ಆ ವ್ರತದ ನೇಮವು ತನ್ನ ಒಲುಮೆಯ ಅರ್ಜುನನಿಗಾಗಿ ಎನ್ನುತ್ತಾಳೆ. ಅರ್ಜುನನು ನಾನೇ ಒಲುಮೆಯ ಮೂರ್ತಿ ಅರ್ಜುನ ಎಂದು ಹೇಳಿದಾಗ ಚಿತ್ರಾಂಗದೆ ಹನ್ನೆರಡು ವರ್ಷದ ಆತನ ಬ್ರಹ್ಮಚರ್ಯದ ವ್ರತವನ್ನು ನೆನಪಿಸುತ್ತಾಳೆ. ಅದಕ್ಕೆ ಅರ್ಜುನ ಆ ವ್ರತವು ನಿನ್ನ ಸೌಂದರ್ಯದಿಂದ ಮುರಿದು ಹೋಗಿದೆ ಎಂದು ಅವಳಲ್ಲಿ ದಾಸನಾಗುತ್ತಾನೆ. ಅದಕ್ಕೆ ಚಿತ್ರಾಂಗದೆಯು ವಿವೇಕದ ನುಡಿಗಳನ್ನಾಡುತ್ತಾಳೆ.

"ಕ್ಷಣಿಕ ಸುಖಸಂಪ್ರಾಪ್ತಿಗೋಸುಗಂ
ಶಾಶ್ವತಾತ್ಮದ ಬಲಿಯೇ! ಏನೀದೀ ದುರ್ಬಲತೆ
ಅರ್ಜುನದೇವ ಮಿಥ್ಯೆ ನಿನ್ನಪೌರುಷದ ಕಥೆ" ಎಂದು ವ್ಯಂಗ್ಯವಾಡುತ್ತಾಳೆ.

ಕಡೆಗೆ ಅರ್ಜುನನಿಗೆ ತನ್ನನ್ನು ಸಮರ್ಪಿಸಿಗೊಂಡು 'ಸೂರೆಗೊಳ್ಳೆನ್ನ ಸರ್ವಸ್ವಮಂ ಎನ್ನುತ್ತಾಳೆ. ಕಾಡಿನ ಪ್ರಕೃತಿಯಲ್ಲಿ ತಾವೂ ಒಂದು ಪ್ರಕೃತಿಯೆಂಬಂತೆ ಲೀನವಾದರು. ಸರಸ ಸಲ್ಲಾಪದಲ್ಲಿ, ಪ್ರಣಯದಾಟದಲ್ಲಿ ಸಮಯುಗಳ ಅರಿವೆ ಇಲ್ಲದೆ ಮುಳುಗಿದ್ದರು ಕಾಮ ಸಾಗರದಲ್ಲಿ.

ಅರ್ಜುನನು ಚಿತ್ರಾಂಗದೆಯನ್ನು ಯಾರೆಂದು ಕೇಳಿದರೂ ಆತನಿಗೆ ತಾನು ಯಾರೆಂದು ಹೇಳದೆ ಕೇವಲ ಒಂದು ತಿಂಗಳ ಮಾಸದವಧಿಯ ಸೌಂದರ್ಯ ಸಂಪಾದಿಸಿಕೊಂಡು ಬಂದ ಸಾಮಾನ್ಯ ಸ್ತ್ರೀ, ನಿನ್ನಿಂದ ಅಂದು ತಿರಸ್ಕೃತಗೊಂಡ ಆ ಕಿರಾತಕನ್ಯೆ ಎಂದು ಮೂದಲಿಸಿಕೊಂಡವಳು, ನಾನೇ ಎಂದಷ್ಟೇ ಹೇಳಿಕೊಳ್ಳುತ್ತಾಳೆ.

ತಾನು ಯಾರೆಂದು ಹೇಳಿಕೊಳ್ಳದೆ ಇರುವುದಕ್ಕೆ ಬಲವಾದ ಕಾರಣವಿರಬಹುದು. ಅದೆಂದರೆ ತಾನೊಬ್ಬ ರಾಜ ಸ್ತ್ರೀ ಈ ರೀತಿ ಪ್ರೇಮಭಿಕ್ಷೆ ಬೇಡಿ ಬರುವುದು ಎಷ್ಟು ಸರಿ? ಅಲ್ಲದೆ ತಂದೆತಾಯಿಗೆ ಹೆದರಿರಬಹುದು. ಹೆದರಿ ಹೇಳದೆ ಇರಬಹುದು. ಭಾರತೀಯ ಸ್ತ್ರೀ ಧರ್ಮಕ್ಕೆ ವಿರುದ್ಧವಾಗಿ ನಡೆದುದರ ಅರಿವೆ ಅವಳಿಗಿದ್ದುದರಿಂದಲೇ ತಾನು ಯಾರೆಂದು ಹೇಳಿಕೊಳ್ಳದೇ ಇದ್ದಳು. ಮುಂದೆ ಇದೇ ಅವಳಿಗೆ ದೊಡ್ಡ ತಿರುವನ್ನು ತಂದೊಡ್ಡುತ್ತದೆ. ರಾಜನ ಮಗಳಾಗಿ ಈ ಅಕಾರ್ಯಕ್ಕೆ ಇಳಿದುದು ತನ್ನ ಕುಲಕ್ಕೆ ಅವಮಾನ ಎಂತಲೋ ಏನನ್ನು ಹೇಳದೇ ಗರ್ಭಿತ ರಹಸ್ಯೆಯಾಗುಳಿಯುತ್ತಾಳೆ.

ಮನ್ಮಥನು ಕೊಟ್ಟ ಒಂದು ಮಾಸದ ಅವಧಿಯು ಮುಗಿದು ಚಿತ್ರಾಂಗದೆಯು ಮೊದಲಿನಂತಾಗುತ್ತಾಳೆ. ಜೊತೆಗೆ ಅರ್ಜುನನು ಷಟ್ ಮಾಸಗಳಲ್ಲಿ ಹಿಂತಿರುಗಿ ಬರುವೆನೆಂದು ಹೇಳಿ ಆಕೆಯನ್ನು ಅಗಲಿ ಹೋಗಿರುತ್ತಾನೆ. ಈ ಸಂದರ್ಭದಲ್ಲಿ ಆಕೆಯ ಸ್ತ್ರೀ ಮನೋ ವೇದನೆಯನ್ನು ಕವಿ ಮಹೋಪಮೆಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಅವನ ನೆನಪಲ್ಲೇ ಕೊರಗಿ ಅವನಿಗಾಗಿ ತಡಕಾಡಿ ವಿರಹದ ಬೇಗೆಯಲ್ಲಿ ಬೇಯುತ್ತಾಳೆ. ಇಲ್ಲಿ ಅವಳ ಕಾಮವು ಪ್ರೇಮಕ್ಕೆ ತಿರುಗಿರುವುದು ಒಂದು ಮಹತ್ವದ ಅಂಶವಾಗಿದೆ.

ವಿರಹದ ತಾಪದಲ್ಲಿ ನೊಂದ ಚಿತ್ರಾಂಗದೆಯು ತನ್ನ ಅರಮನೆಗೆ ಹಿಂತಿರುಗುತ್ತಾಳೆ. ಅಲ್ಲಿ ತನ್ನ ತಂದೆ -ತಾಯಿಗಳಿಗೆ ಗಾಂಧರ್ವ ರೀತಿಯಿಂದ ವಿವಾಹ ಮಾಡಿಕೊಂಡಿದ್ದೇನೆ ಎಂದು ಹೇಳುತ್ತಾಳೆ. ಈ ಸಂದರ್ಭ ಎಂತಹ ಹೆಣ್ಣಿಗಾದರೂ ಮರು ಹುಟ್ಟು ಪಡೆದಂತೆ. ಅಂತಹ ಸಂದರ್ಭವನ್ನು ನಮ್ಮ ಚಿತ್ರಾಂಗದೆ ಎದುರಿಸಿದ್ದಾಳೆ. ತನ್ನ ತಂಧೆ-ತಾಯಿಗಳಿಗೆ ತನ್ನ ಪತಿ ಇನ್ನಾರು ತಿಂಗಳಿಗೆ ಮರಳಿ ಬರುವನೆಂದು ಸಮಾಧಾನ ಮಾಡುವಳು.

ಆರು ತಿಂಗಳು ಕಳೆದ ಮೇಲೆ ಪಾರ್ಥನನ್ನು ಕಾಣಲು ಮೊದಲು ತಾವು ತಂಗಿದ್ದ ಸ್ಥಳಕ್ಕೆ ಧಾವಿಸುವಳು. ಪಾರ್ಥನಿಗಾಗಿ ಎದುರು ಕಾಯುತ್ತಾಳೆ. ಆಸೆ ತುಂಬಿದ ಕಂಗಳಲ್ಲಿ ಹರಿದಿತ್ತು ಅಶ್ರುಧಾರೆ. ತಾಯಿಗೆ ಕೊಟ್ಟ ವಚನ. ಇನಿಯನ ನೋಡುವ ಹಂಬಲ, ಇವುಗಳಿಗೆ ಉತ್ತರವಾಗಿದ್ದ ಪಾರ್ಥ ಬರಲೇ ಇಲ್ಲ. ಆಕೆಯ ಮನಸ್ಸು ಸೂಕ್ಷ್ಮವಾಯಿತು; ನೆಲೆಕಾಣದೆ ಪರಿತಪಿಸುತ್ತಿತ್ತು. ದ್ವಂದ್ವದಲಿ ಬೆಂದ ಆಕೆಯ ಮನ ಬಯಸಿತ್ತು ಸಾವು. ಸಾಯಲು ಹೊರಟಾಗಸ್ವಪ್ನದರ್ಶನದ ಮೂಲಕ ಸಮುದ್ರ ಮೂರ್ತಿಯು ಕಾಣಿಸಿಕೊಂಡು ಬದುಕುವ ಜೀವನ ಪ್ರೀತಿಯ ಉಪದೇಶಗಳನ್ನಾಡುತ್ತದೆ. ಮುಂದೆ ನಿನ್ನಿನಿಯನ ದರ್ಶನವಾಗುತ್ತದೆ ಎಂಧು ಸಾಂತ್ವಾನ ನೀಡುತ್ತದೆ. ಕಾಲ ನದಿ ಪ್ರವಹಿಸಲು ಚಿತ್ರಾಂಗದೆಯು ತಮ್ಮ ಪ್ರೀತಿಯ ಸರ್ವಸ್ವದ ಮಗುವೊಂದಕ್ಕೆ ಜನ್ಮ

ನೀಡುತ್ತಾಳೆ. ಒಬ್ಬ ವೀರಮಾತೆಯಾಗಿ ಆ ಮಗುವಿಗೆ ಕ್ಷತ್ರಿಯೋಚಿತವಾದ ವಿದ್ಯೆಗಳನ್ನು ಹೇಳಿಕೊಡುತ್ತಾಳೆ. ಮುಂದೆ ಮಗುವೇ ಬಭ್ರುವಾಹನನೆಂಬ ಹೆಸರಿನಿಂದ ರಾಜವನ್ನಾಳುತ್ತಾನೆ. ಮಗನ ಕೈಗೆ ರಾಜ್ಯಭಾರ-ವನ್ನೊಪ್ಪಿಸಿ ತಾನು ತನ್ನ ರಮಣನನ್ನು ಆರಾಧಿಸುತ್ತಾ ಮಹಾ ತಪಸ್ವಿಯಾಗುತ್ತಾಳೆ.

ಮಹಾಭಾರತ ಯುದ್ಧದಲ್ಲಿ ಪಾರ್ಥಗೆ ಗೆಲಮಕ್ಕೆ! ಅರ್ಜುನಗೆ ಸೊಗಮಕ್ಕೆ ಎಂಬ ವ್ರತವನ್ನು ಕೈಗೊಳ್ಳುವಳು. ಮಹಾಭಾರತ ಯುದ್ಧ ಕಳೆದು ಅಶ್ವಮೇಧಯಾಗದ ಕಾಲ ಸನ್ನಿಹಿತವಾಗಲು ಯಾಗದ ಕುದುರೆಯು ಮಣಿಪುರಕ್ಕೆ ಬರಲು ಅದರ ರಕ್ಷಣೆಗೆ ಅರ್ಜುನ ಬರುತ್ತಿರುವನೆಂಬ ಸುದ್ದಿ ಕೇಳಿ ಚಿತ್ರಾಂಗದೆಗೆ ಸಡಗರವೋ ಸಡಗರ. ಮಗ ಯಾಗದ ಕುದುರೆಯನ್ನು ಕಟ್ಟಿಹಾಕಿ ಯುದ್ಧಕ್ಕೆ ಸನ್ನದ್ಧನಾಗಲು ಹವಣಿಸುತ್ತಿರುವ ಅವನ ಉತ್ಸಾಹಕ್ಕೆ ಕಡಿವಾಣವನ್ನು ಹಾಕಿ ಯುದ್ಧ ಕೂಡದೆಂದು ಪಾರ್ಥ ತನ್ನ ಗುರು ನಿನಗೆ ತಂದೆ ಸಮಾನ ಎಂದೆಲ್ಲಾ ಹೇಳಿ ಕಳುಹಿಸುತ್ತಾಳೆ. ಕುದುರೆಯ ಬಿಟ್ಟು ಕಪ್ಪ ಕಾಣಿಕೆಯೊಂದಿಗೆ ಅರಮನೆಗೆ ಆಮಂತ್ರಿಸಲು ಮಗನಿಗೆ ಬುದ್ಧಿಹೇಳುತ್ತಾಳೆ.

ಆದರೆ ಅಲ್ಲಿ ನಡೆದದ್ದೇ ಬೇರೆ. ಅರ್ಜುನ ವೀರ ಪಾನೋನ್ಮತ್ತನಾಗಿ ಕದನವನ್ನು ತಂದುಕೊಳ್ಳುತ್ತಾನೆ. ಇಲ್ಲಿನ ಧಾರುಣ ಸ್ಥಿತಿಯನ್ನು ರುಚಿರ ಮೂರ್ತಿಯು ಚಿತ್ರಾಂದೆಯ ಸ್ವಪ್ನದಲ್ಲಿ ಕಾಣಿಸಿಕೊಂಡು ತಂದೆ ಮಕ್ಕಳ ಘೋರ ಕಾಳಗದ ವರ್ಣನೆಯನ್ನು ಕೊಡುವುದರ ಜೊತೆಗೆ ಮುಂದೆ ಚಿತ್ರಾ ಏನು ಮಾಡಬೇಕು ಎಂಬುದನ್ನು ವಿವರಿಸುತ್ತದೆ.

ಕಾಳಗ ನಡೆಯುತ್ತಿದೆ ಎಂಬುದನ್ನು ಕೇಳಿದ ಚಿತ್ರಾಂಗದೆ ರಣರಂಗಕ್ಕೆ ಬಿಳಿಯ ಬಾವುಟವಿಡಿದು ಓಡಿ ಬರುತ್ತಾಳೆ. ಅಲ್ಲಿ ಶರಗಳ ಪೈಪೋಟಿಯ ನಡುವೆ ನುಗ್ಗಿದ ಚಿತ್ರಾಂಗದೆಯ ದೇಹ ಬಾಣಗಳಿಂದ ತುಂಬಿಹೋಗುತ್ತದೆ. ಶಾಂತಿಯನೊರೆದು ತಂದೆಮಗನ ಒಂದುಗೂಡಿಸಿ ಶಿವನಾಮವ ಜಪಿಸಿ ಕಣ್ಣುಮುಚ್ಚಿದಳು ಚಿರಸಮಾಧಿಯಲಿ ಚಿತ್ರಾಂಗದೆ.

ಇಲ್ಲಿ ಈಕೆಯ ಪಾತ್ರವನ್ನು ಮೊದಲು ಪ್ರಣಯಿನಿಯಾಗಿ ನಂತರದ ಜೀವನದಲ್ಲಿ ತಪಸ್ವಿಯಾಗಿ, ತ್ಯಾಗಮೂರ್ತಿಯನ್ನಾಗಿ ಕವಿ ಬೆಳೆಸಿದ್ದಾರೆ. ಕರುಣಾಶಾಲಿನಿಯಾಗಿ ತನ್ನ ಜೀವನವನ್ನು ಅರ್ಜುನನಿಗಾಗಿ ಮೀಸಲಿಟ್ಟು ಉತ್ತಮ ಜನನಿಯಾಗಿ, ವೀರ ಪುತ್ರನಿಗೆ, ವೀರ ಮಾತೆಯಾಗಿ ಜನ್ಮ ಸಾರ್ಥಕಪಡಿಸಿಕೊಳ್ಳುತ್ತಾಳೆ. ತ್ಯಾಗದ ಉತ್ತುಂಗ ಶಿಖರಕ್ಕೇರಿರುವ ಈ ಹೆಣ್ಣಿನ ಬಾಳು ಅಜರಾಮರ.

ಚಿತ್ರಾಂಗದಾ ಠಾಕೂರರಲ್ಲಿ ಕೇವಲ ಪ್ರಣಯಿನಿಯಾಗಿ ತೋರ್ಪಡಿಸಿ-ಕೊಂಡಿದ್ದಳು. ಆದರೆ ಇಲ್ಲಿ ಹಠ, ಛಲ, ವೀರತೆ, ಶೌರ್ಯ ಪರಾಕ್ರಮಗಳ ಗಣಿಯಾಗಿ, ಸ್ವಾಭಿಮಾನಿಯಾಗಿ ಮೆರೆದಿದ್ದಾಳೆ. ಲಕ್ಷ್ಮೀಶನ ಚಿತ್ರಾಂಗದೆಯು ವೀರ ಮಾತೆಯಾಗಿ ಚಿತ್ರಿತಗೊಂಡಿದ್ದರೂ ಅರ್ಜುನನ ಮರಣದಿಂದ ದುಃಖಿತಳಾಗಿ ಆತನನ್ನು ಬದುಕಿಸಿಕೊಡುವಂತೆ ದೇವನಲ್ಲಿ ಪ್ರಾರ್ಥಿಸುತ್ತಾಳೆ. ಆದರೆ ಕುವೆಂಪು ಈ ಇಬ್ಬರು ಕವಿಗಳ ಚಿತ್ರಾಂಗದೆಯರಿಗಿಂತಲೂ ಮಿಗಿಲಾಗಿ ಈ ಕಾವ್ಯದಲ್ಲಿ ಆಕೆಯನ್ನು ತ್ಯಾಗದ ಪರಾಕಾಷ್ಠೆಗೆ ಕರೆದೊಯ್ದಿದ್ದಾರೆ.

ಮುಂದೆ ಅವಳ ಸ್ಮರಣಾರ್ಥ ಅವಳ ತ್ಯಾಗಗುಣಕ್ಕೆ ಮೆಚ್ಚಿದ ಜನ ಸ್ಮಾರಕವೊಂದನ್ನು ಕಟ್ಟಿಸುತ್ತಾರೆ ಅಮೃತ ಶಿಲೆಯಲ್ಲಿ. ಇವೇ ಸಾಕ್ಷಿಯಾಗಿ ನಿಲ್ಲುತ್ತದೆ. ಅವಳ ಕೀರ್ತಿಗೆ ಕಳಸವಿಟ್ಟಂತೆ.

ಅರ್ಜುನ: ಚಿತ್ರಾಂಗದಾ ಕಾವ್ಯದಲ್ಲಿ ಅರ್ಜುನನ ಪಾತ್ರ ಮುಖ್ಯವಾದುದ್ದಾಗಿದೆ. ಚಿತ್ರಾಂಗದೆಯ ಸರ್ವಸ್ವ, ಪ್ರೇಮಾನಿಧಿ, ಪ್ರಾಣೇಶ, ಪತಿಯೇ ಪಾರ್ಥ. ಕಾವ್ಯ ಭಾಗದಲ್ಲಿ – ಅರ್ಜುನನು ಕಾಡಿನಲ್ಲಿ ತಪನಿರತನಾಗಿರಲು, ಜಿಂಕೆಯನ್ನು ಹಿಂಬಾಲಿಸಿಕೊಂಡು ಬಂದ ಚಿತ್ರಾಂಗದೆಯ ಕನಸಿನಲ್ಲಿ ಕಾಣಿಸಿಕೊಳ್ಳುತ್ತಾನೆ. ಆ ತಪ ತರುಣನನ್ನು ನಿಜವಾಗಿ ಕಂಡ ಚಿತ್ರಾಂಗದೆಯ ಮನಸ್ಸು ಆಶ್ಚರ್ಯದಿಂದ ಕುಗ್ಗಿ ಹೋಗುತ್ತದೆ. ಮೂಕ ವಿಸ್ಮಿತದಿಂದ ಸ್ತಬ್ಧಳಾಗುತ್ತಾಳೆ. ಹೆಣ್ಣಿನ ಮನಸ್ಸಿಗೆ ನೇರ ಗುರಿಯಿಟ್ಟು ಸೂರೆಗೊಳ್ಳುವ ರೂಪ ಪಾರ್ಥನದು. ತರುಣ ವೇಷವನ್ನು ಹಾಕಿದ್ದ ಚಿತ್ರಾಂಗದೆಯನ್ನು ಕಂಡ ಪಾರ್ಥ 'ಆರು ನೀನೆಲೆ ತರುಣ ವೀರ'? ಎಂದು ಗಂಭೀರ ವಚನದಿಂದ ಮಾತನಾಡಿಸುತ್ತಾನೆ. 'ಅಂಜದಿರು ನುಡಿ, ನಾವು ಮುನಿವ ಮುನಿವರರಲ್ಲ!' ಎಂದು ಧೈರ್ಯ ಹೇಳುತ್ತಾನೆ. ಇವರಿಂದ ಕುಪಿತನಾದ ಆ ತರುಣರೂಪಿ ಚಿತ್ರಾಂಗದೆ 'ನೀನಾರೆಲೆ ತಪಸ್ವಿ?' ಎಂದು ಕೇಳುತ್ತಾಳೆ. ಇದರಿಂದ ಪಾರ್ಥನು ಜಾಗೃತಗೊಂಡು ತನ್ನ ಪರಿಚಯ ಮಾಡಿಕೊಳ್ಳುವನು. ಅವನ ಮಾತಿನಲ್ಲಿ ಕೊಂಕು, ಬಿಂಕವೆಲ್ಲಾ ಅಡಗಿತ್ತು. ಇದಕ್ಕೆ ಕಿರೀಟವಿಟ್ಟಂತೆ ದರ್ಪತೆಯನ್ನು ಪ್ರದರ್ಶಿಸುತ್ತಾನೆ.

"ವೀರಕ್ಕೆ ವಿನಯಮೆಂಬುದು ಮುಡಿಯ ಮಾಣಿಕಂ;
ವಿನಯಮಿರದಿರಲದೆ ಕುಸಂಸ್ಕೃತಿ!"

ಎಂದು ಆ ತರುಣರೂಪಿಗೆ ಹೇಳುತ್ತಾನೆ ಮತ್ತು ಮೂದಲಿಸುತ್ತಾನೆ.

"ಕೇಳಿ ಬಲ್ಲೆಯ ಯುದಿಷ್ಠಿರ ಭೀಮರೆಂಬರಂ
ನಕುಲಸಹದೇವರಂ? ಪಾರ್ಥನೆಂಬಾತನಂ?"

ಶ್ರೀ ಕೃಷ್ಣನೆಂಬೊರ್ವ ಗೊಲ್ಲನಂ? ನೀನರಿಯೆ
ಅಖ್ಯಾತರಲ್ಪರಜ್ಞಾತರವರನಿಬರುಂ!
ನೀಂ ಜಗದ್ವಿಖ್ಯಾತ ವನಚರಂ! ನಿನಗೆಂತು
ವೇದ್ಯಮಹುದಜ್ಞಾತರಿತಿಹಾಸಮದು?"

ಎಂದು ತನ್ನ ಪರಿಚಯವನ್ನು ಮಾಡಿಕೊಳ್ಳುತ್ತಾ ಅಲ್ಲಿಂದ ಹೊರಟು ಹೋಗುತ್ತಾನೆ. ಚಿತ್ರಾಂಗದೆಯ ಅನುಚಿತ ವರ್ತನೆಗೆ ಪ್ರತಿಯಾಗಿ ತಾನು ಸಂಯಮದಿಂದ ನಡೆದುಕೊಳ್ಳದೆ ತಾನು ಸಹ ಅಷ್ಟೇ ಅನುಚಿತ ವರ್ತನೆಯಿಂದ ನಡೆದುಕೊಳ್ಳುತ್ತಾನೆ.

ಅವನ ಸುಂದರ ರೂಪಕ್ಕೆ ಮರುಳಾದ ಚಿತ್ರಾಂಗದ ಆತನೇ ಅರ್ಜುನನೆಂದು ತಿಳಿದು ಮತ್ತೂ ಮನಸೋಲುತ್ತಾಳೆ.ಅವನನ್ನು ಒಲಿಸಿಕೊಳ್ಳುವ ಸಲುವಾಗಿ ಸರ್ವಾಲಂಕಾರ ಭೂಷಿತೆಯಾಗಿ ದಟ್ಟಡವಿಯ ನಡುರಾತ್ರಿಯಲ್ಲಿ ಹೋಗುತ್ತಾಳೆ. ಆ ಹೊತ್ತಿನಲ್ಲಿ ಬಂದ ಸ್ತ್ರೀಯನ್ನು ನೋಡಿದ ಪಾರ್ಥ

"ಆರು ನೀನಲೆ ತರುಣಿ? ಈ ರಾತ್ರಿ ಈ ಘೋರವಿಪಿನದೊಳ್
ನಕ್ತಂಚರಿಯ ವೋಲ್ ಅದೇಕಿಂತು ಸುತ್ತುತಿಹೆ?
ಕೋಳ್ಮಿಗಗಳಲೆವ ಪೊಳ್ತಿದು: ಪೆಣ್ ನೀನಾಗಿಯುಂ
ಇನಿತಳುಕದೆಯೆ ಇರುಳ ನಲೆಯುತಿಹೆ? ಮಾನವ
ಸ್ತ್ರೀಯರ್ಗೆ ಈ ಬಾಳ್ಕೆ ಸೋಜಗಂ! ಮೇಣ್ ಸದ್ವಂಶ
ಜಾತರಿಗೆ ತಾಂ ತಗುವುದಲ್ತು!"

ಎಂದು ಹೇಳುತ್ತಾನೆ. ಒಂದು ಹೆಣ್ಣಿನ ಬಗ್ಗೆ ಅವನಿಗಿರುವ ಕಳಕಳಿಯನ್ನು ಈ ವಾಕ್ಯಗಳು ಸಾರುತ್ತವೆ. ಆ ಸ್ತ್ರೀಯು ಅವನಲ್ಲಿ ಪ್ರಣಯ ಭಿಕ್ಷೆಯನ್ನು ಬೇಡಿದಾಗಲಂತೂ ಅವನ ಸಂಯಮದ ಕಟ್ಟೆಯೊಡೆದು 'ಸಾಹಸಿ, ಕಿರಾತ ಕನ್ಯೆ' ಎಂದು ಜರೆದು

"ಅಲ್ಲದಿರೆ ವರ್ತಿಪರೆ
ನಾಗರಿಕರೀ ರೀತಿ ಪ್ರಣಯ ಪ್ರಸಂಗದಲಿ?"

ಎಂದು ಅವಳ ವರ್ತನೆಗೆ ಮಂಗಳಾರತಿ ಎತ್ತುತ್ತಾನೆ. ಬಂದ ದಾರಿಗೆ ಸುಂಕವಿಲ್ಲದಂತೆ ಹಿಂತಿರುಗು ಎಂದು ಅವಳ ಆಶಾಗೋಪುರವನ್ನು ತನ್ನ ಮಾತಿನ ಮದ್ದಿನಿಂದ ಸಿಡಿಸುತ್ತಾನೆ. ಅಷ್ಟೇ ಹೇಳಿದ್ದರೂ ಸಾಕಿತ್ತು ಅರ್ಜುನ, ಮುಂದುವರೆದು ನಾನು ಹನ್ನೆರಡು ವರ್ಷದ ಬ್ರಹ್ಮಚರ್ಯ ವ್ರತವನ್ನಾಚರಿಸುತ್ತಿದ್ದೇನೆ ಎಂದು ಹೇಳುತ್ತಾನೆ ಸಾಲದಕ್ಕೆ

"ಬನವೆಣ್ಣೆ, ನಿನ್ನೊಳೇನಿದೆ ಎನಗೆ
ಎಣೆಯಾಗಿ? ಮೇಣೆನ್ನರ್ದೆಗೆ ಹೂವುಗಣೆಯಾಗಿ?

ನೀನಾವ ಪಾರ್ಥವಕುಲಾಂಬುಧಿಯ ಕಡೆಹದಲಿ
ಮೂಡಿರುವ ಕೌಸ್ತುಭಂ? ಮೇಣ್ ನಿನಗದೇನಿಹುದೊ
ಸೌಂದರ್ಯ ಸಂಪದಂ? ಬಿತ್ತರದ ಲೋಕದೊಳ್
ಕೇವಲ ಕನಿಷ್ಠರೆನೆ ನಿನಗಿಂತಲುತ್ತಮರ್!"

ಎಂದು ಅಹಂಕಾರದ ಮಾತುಗಳನ್ನು ಆಡುತ್ತಾನೆ.

ಪಾರ್ಥನ ವ್ಯಕ್ತಿತ್ವದ ಒಂದು ಮುಖದ ಚಿತ್ರಣ ಇಲ್ಲಿ ಕಾಣಿಸಿಕೊಂಡಿದೆ. ಬ್ರಹ್ಮಚರ್ಯ ವ್ರತವನ್ನು ಮಾಡುತ್ತಿದ್ದವನಿಗೆ ಮುಂದಿದ್ದ ಹೆಣ್ಣು ಚೆಲುವಿದ್ದರೇನು? ಚೆಲುವಿಲ್ಲದಿದ್ದರೇನು? ತನ್ನ ಪಾಡಿಗೆ ತಾನು ಇರಬೇಕಿತ್ತು. ನಿನ್ನೊಳಗೇನಿದೆ ಎನಗೆಣೆಯಾಗಿ? ಎಂದು ಮೂದಲಿಸುವುದು ಬೇಕಿರಲಿಲ್ಲ. ಇದರಿಂದಲೇ ತಿಳಿಯುತ್ತದೆ ಅವನ ಬ್ರಹ್ಮಚರ್ಯ ವ್ರತವು ಹುಸಿಯಾಗಿರುವಂಥದ್ದು ಎಂದು. ಅವನ ವ್ಯಕ್ತಿತ್ವ ಎಷ್ಟುಮಟ್ಟಿನದು? ಎಂಬುದು ಗೋಚರವಾಗುತ್ತದೆ.

ಮನ್ಮಥ ವರದಿಂದ ಸರ್ವಾಂಗ ಸುಂದರಿಯಾಗಿ ಬಂದುನಿಂತ ಚಿತ್ರಾಂಗದೆ-ಯನ್ನು ಕಂಡ ಅರ್ಜುನನ ಮನಸ್ಸು ಸೂತ್ರ ಕಿತ್ತ ಗಾಳಿಪಟದಂತಾಗುತ್ತದೆ. ಅವಳನ್ನು ನೋಡಿ ತನ್ನ ವ್ರತದ ನಿಯಮ ಸದ್ದಿಲ್ಲದಂತೆ ಮಾಯವಾಗುತ್ತದೆ. ಅವಳ ಅನುರಾಗಕ್ಕಾಗಿ ಹಾತೊರೆಯುತ್ತಾನೆ. ಎಂತಹ ಸೌಂದರ್ಯ ಸಾರ ಎಂದುಕೊಳ್ಳುತ್ತಾನೆ.

ಅವಳ ಸೌಂದರ್ಯದ ಮುಂದೆ ಯತಿಪತಿಯ ಯತಿವ್ರವಳಿದು ಪಾರುತೆ ಪತಿತ್ವಮಂ ಬೇಡುತ್ತಿದ್ದಾನೆ. ಅವಳ ಸವಿಯಾದ ಮಾತುಗಳ ಕೇಳಿ ಕಡು ಬಡವನಂತಾಗುತ್ತಾನೆ ಪಾರ್ಥ! ಅವಳ ಹಿಂದೆ ಓಡಿಹೋಗಿ ಪ್ರೇಮ ಯಾಚನೆಯನ್ನು ಬೇಡುತ್ತಾನೆ. ಯತಿಯಲ್ಲಿ ಕ್ಷತ್ರಿಯನು ನಾನು ಎಂದು ಅಂಗಲಾಚುತ್ತಾನೆ. ದಯೆಗೈ ಕರುಣಿಸು ಎಂದು ಬೇಡಿಕೊಳ್ಳುತ್ತಾನೆ. ಅವಳ ಪ್ರೇಮದ ಮೂರ್ತಿಯು ನಾನೇ ಎಂದು ತಿಳಿದ ಮೇಲಂತೂ ಅವಳಲ್ಲಿ ಕಾಮಾತರನಾಗುತ್ತಾನೆ. ಚಿತ್ರಾಂಗದೆಯು ಅವನ ವ್ರತವನ್ನು ನೆನಪಿಸಿದರೂ ಅದನ್ನು ಲೆಕ್ಕಿಸದೆ ಅವಳನ್ನು ಪ್ರಣಯಲೀಲೆಗೆ ಕರೆಯುತ್ತಾನೆ. ಹಗಲು ಇರುಳು ಎನ್ನದೆ ಇಬ್ಬರು ಪ್ರಣಯ ಸಾಗರದಲಿ ತೇಲುತ್ತಾರೆ.

ಇಲ್ಲಿ ಅರ್ಜುನನ ವ್ಯಕ್ತಿತ್ವದ ಮತ್ತೊಂದು ಮುಖದ ಪರಿಚಯವಾಗುತ್ತದೆ. ಎಂತಹ ನಾಚಿಗೇಡಿನ ಸಂಗತಿ. ವ್ರತವನ್ನು ಗಾಳಿಗೆ ತೂರಿ ಸರ್ವ ಸೌಂದರ್ಯದ ಸಂಪದದ ಮುಂದೆ ಕ್ಷಣಿಕ ಸುಖಕ್ಕಾಗಿ ಶಾಶ್ವತವಾದ ಆತ್ಮವನ್ನು ಬಲಿಗೊಡುತ್ತಾನೆ. ಇಲ್ಲಿ ಅರ್ಜುನನ ಮನಸ್ಸು ಒಂದು ಪತಂಗದಂತೆ ಚಿತ್ರಿತವಾಗಿದೆ. ಸಾಮಾನ್ಯ ಸ್ತ್ರೀಯಲ್ಲಿ ಅನುರಕ್ತನಾಗಲು ಬಯಸದ ಪಾರ್ಥ ಸೌಂದರ್ಯದ ಮುಂದೆ ಶರಣಾಗಿ ಹೋಗಿರುತ್ತಾನೆ.

ಮಾಸ ಕಳೆದು ತನ್ನವರ ನೆನಪಾಗಲು ಚಿತ್ರಾಂಗದೆಗೆ ತಾನು ತೆರಳುವುದಾಗಿ ತಿಳಿಸುತ್ತಾನೆ. ಅವಳ ಪೂರ್ವಾಪರದ ಬಗ್ಗೆ ವಿಚಾರಿಸಿಕೊಳ್ಳುತ್ತಾನೆ. ಆದರೆ ಏಕೆ ಏನನ್ನು ಹೇಳದೆ ತನ್ನಿಂದ ತಿರಸ್ಕೃತಗೊಂಡ ಹೆಣ್ಣು ಇವಳೇ ಎಂಬ ಸತ್ಯವನ್ನು ಅವಳಿಂದ ಕೇಳಿ ತಿಳಿದು ಆಶ್ಚರ್ಯ ಚಕಿತನಾಗುತ್ತಾನೆ. ಸತ್ಯವನ್ನು ಹೇಳಿದ್ದರಿಂದಲೋ ಏನೋ ಅವಳ ಮೋಹ ಪ್ರೀತಿಯಾಗಿ ತಿರುಗುತ್ತದೆ. ತಾನು ಇನ್ನಾರು ತಿಂಗಳಿಗೆ ಮರಳಿ ಬರುವುದಾಗಿ ಹೇಳುತ್ತಾನೆ. ಆ ರಾತ್ರಿಯ ನಿದ್ರಾಸಮಯದಲ್ಲಿ ಅವಳನ್ನು ಬಿಟ್ಟು ತೆರಳುವಾಗ, ಅವಳ ಸಹಜ ಸಾಮಾನ್ಯ ರೂಪವನ್ನು ನೋಡಿ ವಿಸ್ಮಿತನಾದರೂ ತನಗೆ ಇಷ್ಟು ದಿನ ಪ್ರೇಮಸುಧೆಯನ್ನು ಧಾರೆಯೆರೆದ ಆಕೆಯನ್ನು ಪ್ರೀತಿಯಿಂದ ಮುದ್ದಿಸಿ ಅವಳ ಕೈಬೆರಳುಗಳಿಗೆ ಉಂಗುರವ ತೊಡಿಸಿ ಹೊರಟು ಹೋಗುತ್ತಾನೆ.

ಇಲ್ಲಿ ಅರ್ಜುನನು ಅವಳಿಂದ ಸುಖ ಪಡೆದು ತನ್ನಿಂದ ತಿರಸ್ಕೃತಗೊಂಡ ಹೆಣ್ಣು ಎಂದು ತಿಳಿದರೂ ಕೋಪಗೊಳ್ಳದೇ ಆಕೆಯಲ್ಲಿ ಪ್ರೇಮವನ್ನು ಉಳಿಸಿಕೊಳ್ಳುತ್ತಾನೆ.

ಮುಂದೆ ಅರ್ಜುನನು ನಮಗೆ ಕಾಣುವುದು ಯಾಗದ ಕುದುರೆಯ ನಿಮಿತ್ತ ಮಣಿಪುರಕ್ಕೆ ಬಂದಾಗಲೇ. ಮಣಿಪುರದರಸಿಯು ಕಥೆ ಕೇಳಿದ ಅರ್ಜುನ ಹಿಂದೆ ತನ್ನ ಮೋಹಿಸಿದ ಮೋಹನಾಂಗಿ ಇವಳೇ ಇರಬೇಕು ಎಂಬ ಸಂಶಯ ಬಂದು ಅವಳನ್ನು ನೋಡಲು ಮಾರುವೇಷದಲ್ಲಿ ಹೋಗುತ್ತಾನೆ. ಆ ರೂಪಕ್ಕೂ ಈ ರೂಪಕ್ಕೂ ಅಜಗಜಾಂತರದ ವ್ಯತ್ಯಾಸ ಅವಳೆಲ್ಲಿ! ಇವಳೆಲ್ಲಿ! ಸರ್ವಸೌಂದರ್ಯ ಸಾರವದು! ನಿಸ್ಸಾರ ರೂಪವಿದು ಎಂದು ಉದ್ಗಾರ ತೆಗೆಯುತ್ತಾನೆ. ತರುಳ ಚಂಚಲತೆಯ ಕನ್ಯೆಯೆಲ್ಲಿ? ತಾಯ್ತನದಿಂದ ತುಂಬಿ ತೋರುವ ಮಾತೆಯೆಲ್ಲಿ! ಎಲ್ಲಿಯದೆಲ್ಲಿಯ ಹೋಲಿಕೆ ಎಂದು ಸಮಾಧಾನ ಪಟ್ಟುಕೊಂಡು ಹೊರಟುಹೋಗುತ್ತಾನೆ.

ಬಭ್ರುವಾಹನನು ತನ್ನ ತಾಯಿಯ ಗುರು – ಪಾರ್ಥನೆಂದು ತಿಳಿದು ಯಾಗದ ಕುದುರೆಯನ್ನು ಬಿಡಲು ಒಪ್ಪಿ ಕಪ್ಪ ಕಾಣಿಕೆ ಸಮೇತ ಬಂದಾಗ ಅವನಿಗೆ ಪುರಸ್ಕರಿಸದೆ ತಿರಸ್ಕರಿಸಿ ಅವನನ್ನು ಅವಮಾನಿಸುತ್ತಾನೆ. ಇಲ್ಲಿ ಅರ್ಜುನನು ಬಭ್ರುವಾಹನ ಜೊತೆ ಅನುಚಿತವಾಗಿ ನಡೆದುಕೊಂಡು ಯುದ್ಧಕ್ಕೆ, ಬಭ್ರುವಾಹನನ ಕೋಪಕ್ಕೆ ಗುರಿಯಾಗುತ್ತಾನೆ. ಕದನವೇರ್ಪಟ್ಟು ಚಿತ್ರಾಂಗದೆಯು ಅಡ್ಡಿ ಬಂದು ಅರ್ಜುನನ ಪ್ರಾಣ ಉಳಿಸುತ್ತಾಳೆ. ಅದಕ್ಕೆ ಬದಲಾಗಿ ಆತ ಆಕೆಯ ತಲೆಯನ್ನು ತನ್ನ ತೊಡೆಯ ಮೇಲಿಟ್ಟು ಶುಶ್ರೂಷೆ ಮಾಡುತ್ತಾನೆ. ಅವಳಿಂದ ಬಭ್ರುವಾಹನ ತನ್ನ ಮಗನೆಂದು ತಿಳಿದು ಹರ್ಷವ್ಯಕ್ತಪಡಿಸುತ್ತಾನೆ. ಜೊತೆಗೆ ಚಿತ್ರಾಂಗದೆಯನ್ನು ಕಳೆದುಕೊಂಡು ದುಃಖಿಸುತ್ತಾನೆ.

ಚಿತ್ರಾಂಗದಾ ಕಾವ್ಯದಲ್ಲಿ ಅರ್ಜುನನು ಮುಖ್ಯವಾದ ಪಾತ್ರವಾಗಿದ್ದರೂ ಚಿತ್ರಾಂಗದೆಯ ವ್ಯಕ್ತಿತ್ವದೊಡನೆ ಅರ್ಜುನನ ವ್ಯಕ್ತಿತ್ವವನ್ನು ತೂಗುಹಾಕಿ ನೋಡಿದರೆ ತೂಕದ ವ್ಯಕ್ತಿಯಾಗಿ ಚಿತ್ರಾಂಗದೆ ಕಾಣಿಸಿಕೊಳ್ಳುತ್ತಾಳೆ. ಇಲ್ಲಿ ಕೇವಲ ತನ್ನ ಬಯಕೆಯನ್ನು ಈಡೇರಿಸಿಕೊಳ್ಳಲು ಬಂದ ಸಾಮಾನ್ಯ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ ಅರ್ಜುನ ಎಂದು ಕರೆಸಿಕೊಂಡ ಕುರುಕುಲ ಶ್ರೇಷ್ಠ ಸಂಭವ! ವ್ರತವನ್ನು ಗಾಳಿಗೆ ತೂರುವುದು ಎಂದರೇನು? ಬರಿಯ ಮಾತೆ? ಇನ್ನಾರು ತಿಂಗಳಿಗೆ ಬರುವೆನೆಂದು ಇನ್ನೆರಡೂ ತಿಂಗಳು ತಡವಾಗಿ ಬಂದು ಅವಳಿಗಾಗಿ ತಡಕಾಡುತ್ತಾನೆ. ತನ್ನ ಇನಿಯಳನ್ನು ಕಾಣದೆ ತಡಕಾಡಿ ಕಣ್ಣೀರು ಸುರಿಸಿ ಭಾರವಾದ ಹೃದಯದಿಂದ ಹಿಂತಿರುಗುತ್ತಾನೆ. ಇಲ್ಲಿ ಕೊಟ್ಟ ಮಾತಿನಲ್ಲಿ ಉಳಿಸಿಕೊಂಡ ವ್ಯಕ್ತಿಯಾಗಿ ಗೋಚರಿಸಿದರೂ ಸಮಯಕ್ಕೆ ಸರಿಯಾಗಿ ಬಾರದೆ ಇದ್ದದ್ದು ತಪ್ಪು. ಕೇವಲ ತಪ್ಪಿತಸ್ಥನ ಸ್ಥಾನದಲ್ಲಿ ನಿಲ್ಲಿಸಬೇಕೆಂಬುದೇನಿಲ್ಲಾ. ಮಾನವ ಸಹಜ ಗುಣಗಳಿಂದ ಆವೃತನಾಗಿರುವಂತೆ ಇಲ್ಲಿ ಅರ್ಜುನನ್ನು ಚಿತ್ರಿಸಲಾಗಿದೆ. ಅಲ್ಲಿ ಚಿತ್ರಾಂಗದೆಯನ್ನು ದೈವತ್ವಕ್ಕೆ ಹೋಲಿಸಿ ಚಿತ್ರಿಸಲಾಗಿದೆ.

ಬಭ್ರುವಾಹನ:

ಚಿತ್ರಾಂಗದ- ಅರ್ಜುನರ ಪ್ರೇಮದ ಸಾರಸರ್ವ ಶಿಶುವೆ ಬಭ್ರುವಾಹನ. ತಾಯಿ ಚಿತ್ರಾಂಗದೆಯಿಂದ ಸಕಲ ರಾಜ ವಿದ್ಯೆಗಳನ್ನು ಕಲಿತು ನೆರೆಯ ರಾಜ್ಯಗಳಿಗೆ ಸಿಂಹಸ್ವಪ್ನವಾಗಿದ್ದನು. ರಾಜ್ಯಸೂತ್ರವ ಹಿಡಿದು ರಾಷ್ಟ್ರದ ಸುಭೀಕ್ಷ ಪಥದಲ್ಲಿ ಸಾಗುವಂತೆ ಸಾಧನೆಗೈಯ್ದಿದ್ದನು. ಮಹಾಭಾರತದ ಯುದ್ಧಕ್ಕೆ ತಾನು ಹೋಗಲು ಹವಣಿಸುವ ಉತ್ಸಾಹವನ್ನು ತಾಯಿಯ ಮುಂದಿಡುತ್ತಾನೆ. ಮಣಿಪುರ ಕಲಶಕ್ಕೆ ಕೀರ್ತಿಯನ್ನು ತರಬೇಕೆಂದು ಬಯಸುತ್ತಾನೆ. ಆದರೆ ತಾಯಿಯ ಅನುಮತಿ ದೊರೆಯದೆ ಸುಮ್ಮ-ನಾಗುತ್ತಾನೆ. ಮಹಾಭಾರತದ ಯುದ್ಧ ಕಳೆದು ಅಶ್ವಮೇಧಯಾಯ ಪ್ರಾರಂಭ-ವಾಗುತ್ತದೆ. ಅಶ್ವವು ಮಣಿಪುರಕ್ಕೆ ಬಂದಾಗ ಅಶ್ವವನ್ನು ಕಟ್ಟಹಾಕಿ, ಮೂರು ಲೋಕದ ವೀರ ಪಾರ್ಥನೊಡನೆ ಕಾದಾಡುವ ಉತ್ಸಾಹ ಬಭ್ರುವಾಹನನಿಗೆ ಯಾಗದ ಕುದುರೆಯನ್ನು ಕಟ್ಟಿ ಹಾಕಿರುವ ಸಂಗತಿಯನ್ನು ತನ್ನ ತಾಯಿಗೆ ಹೇಳಲು ಹೋದಾಗ ತಾಯಿಯ ಉಪದೇಶದಿಂದ ಯುದ್ಧಕ್ಕೆ ಉತ್ಸುಕನಾಗಿದ್ದ ಬಭ್ರುವಾಹನ ಅವಳ ಆಣತಿಯಂತೆ ಯುದ್ಧವನ್ನು ಹಿಂತೆಗೆದುಕೊಂಢು ಯಾಗದ ಕುದುರೆಯನ್ನು ಬಿಡಲು ಹೋಗುತ್ತಾನೆ. ಕಪ್ಪಕಾಣಿಕೆ ಸಮೇತ ಅರ್ಜುನನ್ನು ಭೇಟಿ ಮಾಡಲು ಹೋಗುತ್ತಾನೆ. ಅಲ್ಲಿ ಪಾರ್ಥನಿಂದ ಅಪಮಾನಿತನಾಗಿ, ತಿರಸ್ಕೃತಗೊಳ್ಳುತ್ತಾನೆ. ತನ್ನ ಹುಟ್ಟಿನ ಬಗ್ಗೆ

ಹೀನಮಾನವಾಗಿ ಜರೆಯುತ್ತಿದ್ದ ಪಾರ್ಥನ ವಿರುದ್ಧ ಕೆಂಡಾಮಂಡಲವಾಗುತ್ತಾನೆ. ಅವನ ಮುಖವನ್ನು ದುರದುರನೇ ನೋಡಿ

"ಎಲವೆಲವೊ ನಯರುಚಿವಿಹೀನ, ಸಂಸ್ಕೃತಿ ಬಾಹಿರ, ಕಿರಾತ
ಜಯಮದಾಂದನೆ,ಪಾರ್ಥ, ಗೌರವವರಿಯೆಯೆಲಾ
ಧರ್ಮಜನ ಧರ್ಮಕಾರ್ಯದೊಳಿರ್ಪ ನೀನೆಂದು
ಮೇಗ ಗುರುವೆಂದೊರೆದ ಜನನಿಯರ್ಾತಿಯಂತೆ
ಬಂದು ನಾನೆರಮಾಡಿ ಮೋರೆ ತಿರುಗಿದೆಯಲಾ
ನೆಣಗೊಬ್ಬನಿಂ ಸೂರ್ತಿ! ಸಮರೋತ್ಸವಕೆ ಸುಗಿವು
ನಿನ್ನ ಬಲ್ಮೆಯ ಜಸದ ಹುಸಿವೆಳಗಿಗರೆ ಸೋಲ್ತು
ಸೋಲ್ಮೆಯಪಕೀರ್ತಿಯು ನುಸುಳಿಕೊಳಲೆಂದಳಸಿ
ಬಂದೆನೆಂದರಿಯದಿರೊ!"

ಎಂದು ಯುದ್ಧಭೂಮಿಗೆ ಆಹ್ವಾನಿಸುತ್ತಾನೆ. ಕದನಕಾಳಿಯ ಆಗಮನವಾಯಿತು. ರಣಕಹಳೆ ಬಾರಿಸುತ್ತಿದೆ. ನರ್ತನ ಪ್ರಾರಂಭ ಮಾಡಿದಳು ಕದನ ಕಾಳಿ ಹುಚ್ಚೆಂಬಂತೆ ನಲಿದು ಕುಣಿಯುತ್ತಿದ್ದಾಳೆ. ಅವಳ ನರ್ತನದಲ್ಲಿ ತಂದೆ ಮಕ್ಕಳು ಸೇರಿದಂತೆ ಎರಡೂ ಸೈನ್ಯವು ಹೋರಾಡುತ್ತಿವೆ. ರಕ್ತವು ಪ್ರವಾಹವಾಗುತ್ತಿದೆ. ಮಗನ ಬಾಣ ತಂದೆಯನ್ನು ಗುರಿಯಾಗಿಟ್ಟುಕೊಂಡಿದೆ. ಬಾಣಗಳ ಮಳೆಗಳನ್ನು ಎರಡೂ ಸೈನ್ಯಗಳು ಎದುರಿಸುತ್ತಿವೆ. ಬಂದಳು ತಾಯಿ ರಣರಂಗದ ಮಧ್ಯೆ ಪ್ರವೇಶಿಸಿ ಮಡಿದಳು. ಅವಳನ್ನು ಹಿಡಿಯಲು ಓಡೋಡಿ ಬಂದು ದುಃಖಿತನಾಗುವನು ಅವಳ ಶುಶ್ರೂಷೆಯ ಮರೆಸಿತ್ತು ಬಭ್ರುವಾಹನನದುಃಖ.

ಲಕ್ಷ್ಮೀಶನ ಬಭ್ರುವಾಹನನಿಗೆ ಹೋಲಿಸಿದರೆ ಕುವೆಂಪುರವರ ಬಭ್ರುವಾಹನ ಸ್ವಲ್ಪ ಕೆಳಗಿಳಿಯುತ್ತಾನೆ. ಅಲ್ಲಿ ತಂದೆಯೆಂದು ತಿಳಿದೂ ತಂದೆಯನ್ನು ಕೊಂದು ಜೀವತರಲು ಸಾಹಸ ಕಾರ್ಯ ಕೈಗೊಳ್ಳುತ್ತಾನೆ. ತಂದೆಗೆ ಜೀವ ಬರಿಸುತ್ತಾನೆ. ಇಲ್ಲಿ ತಂದೆ ಯಾರೆಂದು ತಿಳಿಯದೆ ಯುದ್ಧಮಾಡಿ, ತಾಯಿಯನ್ನು ಕಳೆದುಕೊಂಡು ದುರದೃಷ್ಟ ಮಗನಾಗಿ ಕಾಣಿಸಿಕೊಳ್ಳುತ್ತಾನೆ. ತಂದೆಯಿಲ್ಲದೆ, ತಾಯಿಯೊಂದಿಗೆ ಬೆಳೆದ ಬಭ್ರುವಾಹನ ತಂದೆ ಸಿಕ್ಕ ಮೇಲೆ ತಾಯಿಯನ್ನು ಕಳೆದುಕೊಂಡ ನತದೃಷ್ಟ.

ಶೌರ್ಯ, ಪರಾಕ್ರಮಕ್ಕೆ ತಾಯಿ-ತಂದೆಯನ್ನು ಮೀರಿಸಿದ ಮಗನಾಗಿ ಬೆಳೆದ ಬಭ್ರುವಾಹನ ತಾಯಿಯು ವಿಷಮ ಸ್ಥಿತಿಯಲ್ಲಿರುವಾಗ ಏನು ಮಾಡಬೇಕೆಂಬುದು

ತೋಚದೆ ಕೇವಲ ದುಃಖಿಸುತ್ತಾ ಕೂರುತ್ತಾನೆ. ಇದೊಂದನ್ನು ಬಿಟ್ಟರೆ ಉಳಿದೆಲ್ಲಾ ವಿಷಯಗಳಲ್ಲಿ ಬಭ್ರುವಾಹನನ ಪಾತ್ರ ಸಹಜ ರೀತಿಯಲ್ಲಿ ಮೂಡಿ ಬಂದಿದೆ.

ಇನ್ನೂ ಸ್ವಪ್ನ ದರ್ಶನದಲ್ಲಿ ಕಾಣಿಸಕೊಂಡ ಮದನ, ಸಮುದ್ರಮೂರ್ತಿ, ರುಚಿರಮೂರ್ತಿಗಳ ಸಂಭಾಷಣೆಯು ಅತಿಮಾನುಷತೆಯನ್ನು ಹೊಂದಿದ್ದರು ಕಾವ್ಯದಲ್ಲಿ ಉಚಿತವಾಗಿ ಬಂದಿದೆ. ಮನಸ್ಸಿನ ಬಯಕೆಗಳು ಸುಪ್ತಚೇತನವ ಸೇರಿ ಕನಸಾಗಿ ಕಾಡುವ ಮನೋವೈಜ್ಞಾನಿಕ ಹಿನ್ನಲೆಯಲ್ಲಿ ಕುವೆಂಪು ಇವುಗಳನ್ನು ತಮ್ಮ ದರ್ಶನ ಪ್ರತಿಭೆಯ ಮೂಲಕ ಕಾಣಿಸಿದ್ದಾರೆ. ಆದರೆ ಇವುಗಳ ಪರಿಣಾಮ ವಾಸ್ತವದಲ್ಲಿ ಅಸಂಭವ. ಆದರೂ ಮನಸ್ಸಿನ ಬಯಕೆಗಳು ಕನಸಿನಲ್ಲಿ ಗೋಚರವಾಗಿ ತನ್ನ ಈಡೇರಿಕೆಗಾಗಿ ಮನುಷ್ಯನನ್ನು ಪ್ರೇರೇಪಿಸುತ್ತವೆ. ಇವುಗಳನ್ನು ಸೇರಿಸಿ ಕುವೆಂಪುರವರು ಚಿತ್ರಾಂಗದಾ ಕಾವ್ಯದಲ್ಲಿ ಪಾತ್ರಗಳ ರಚನೆಯಲ್ಲಿ ಸುಂದರ ಕೌಶಲವನ್ನು ರಚಿಸಿದ್ದಾರೆ. ಅತಿಮಾನುಷತೆಯೊಂದನ್ನು ಬಿಟ್ಟರೆ ಉಳಿದೆಲ್ಲಾ ವಿಷಯಗಳಲ್ಲೂ ಸಹಜತೆ ಮನೆಮಾಡಿದೆ.

ಅಭಿಯಂತರ ಸಾಹುಕಾರನೊಬ್ಬ ಸುಂದರವಾದ ಮನೆಯನ್ನು ಕಟ್ಟಿಸಿ, ಅದಕ್ಕೆ ದೃಷ್ಟಿ ತಾಗದಿರಲೆಂದು ದೃಷ್ಟಿಚಿತ್ರವನ್ನು ಇಟ್ಟಂತೆ ಅಮಾನುಷತೆಯನ್ನು ತಂದಿರಿಸಿದ್ದಾರೆ. ಇದನ್ನು ಪರಂಪರೆಯಿಂದ ತಂದ ಸಂಪ್ರದಾಯ ಎನ್ನಬಹುದು.

ಅಧ್ಯಾಯ – ಮೂರು

ಚಿತ್ರಾಂಗದಾ – ಕಾವ್ಯ ವಿಮರ್ಶೆ

ಮಹಾಭಾರತದ ಅಶ್ವಮೇಧಿಕ ಪರ್ವದಲ್ಲಿ ಬರುವ ಅತಿಪುಟ್ಟ ಪಾತ್ರ ಚಿತ್ರಾಂಗದೆ. ಈ ಪಾತ್ರಕ್ಕೆ ಪೋಷಣೆ ನೀಡಿ ಮಹತ್ತಾಗಿ ಬೆಳೆಸಿರುವ ಕಾವ್ಯ 'ಚಿತ್ರಾಂಗದಾ'. ವ್ಯಾಸರಲ್ಲಿ ಮಿಂಚಿ ಮರೆಯಾಗುವ ಪಾತ್ರವನ್ನು ಲಕ್ಷ್ಮೀಶನು ವೀರಮಾತೆಯಂತೆ ಚಿತ್ರಿಸಿದ್ದಾನೆ. ರವೀಂದ್ರರು ಹಲವು ಬದಲಾವಣೆಗಳನ್ನು ಮಾಡಿಕೊಂಡು ಶೃಂಗಾರ ರೂಪಿಣಿಯನ್ನಾಗಿ ಚಿತ್ರಿಸಿದ್ದರೆ, ಕುವೆಂಪುರವರು ಆಕೆಯ ಜೀವನದ ಪೂರ್ಣ ವ್ಯಕ್ತಿತ್ವವನ್ನು ಈ ಚಿತ್ರಾಂಗದಾ ಖಂಡಕಾವ್ಯದ ಮೂಲಕ ನೀಡಿದ್ದಾರೆ.

ಶ್ರೀ ಕುವೆಂಪುರವರು ಮಹಾಭಾರತಕ್ಕೆ ಸಂಬಂಧಪಟ್ಟಂತೆ ಶ್ಮಶಾನ ಕುರುಕ್ಷೇತ್ರ ಬೆರಳ್ಗೆ ಕೊರಳ್ ಚಂದ್ರಹಾಸ ಯಮನಸೋಲು ಎಂಬ ನಾಲ್ಕು ನಾಟಕಗಳನ್ನು ರಚಿಸಿ, ಚಿತ್ರಾಂಗದಾ ಎಂಬ ಖಂಡಕಾವ್ಯವನ್ನು ಬರೆದಿದ್ದಾರೆ. ಪಂಪ, ರನ್ನ, ಕುಮಾರವ್ಯಾಸ, ಲಕ್ಷ್ಮೀಶರಂತೆ ತಮ್ಮ ತಮ್ಮ ಯುಗಧರ್ಮಕ್ಕನುಗುಣವಾಗಿ ಮಹಾಭಾರತದ ಮಹಾವೃಕ್ಷದಲ್ಲಿನ ಹಣ್ಣನ್ನು ತಿಂದು ಅದರ ಬೀಜದಿಂದ ತಮ್ಮ ಪ್ರತಿಭೆಗನುಗುಣವಾಗಿ ತಮ್ಮ ಕಾವ್ಯಕೃಷಿಯನ್ನು ಮಾಡಿದ್ದಾರೆ, ಬೆಳೆಸಿದ್ದಾರೆ. ಅದನ್ನೇ ಅನುಸರಿಸಿರುವ ಕುವೆಂಪುರವರು ಸಹ ಇಂದಿನ ಯುಗಧರ್ಮಕ್ಕೆ ಅನುಗುಣವಾಗಿ ತಮ್ಮ ದರ್ಶನ ಪ್ರತಿಭೆಯ ಬಲದಿಂದ ಈ ಚಿತ್ರಾಂಗದಾ ಮತ್ತು ರಾಮಾಯಣದರ್ಶನಂ ಎಂಬ ಮಹಾ ಕಾವ್ಯಗಳನ್ನು ರಚಿಸಿದ್ದಾರೆ. ಚಿತ್ರಾಂಗದಾ ಕಾವ್ಯವನ್ನು ರಚಿಸುವಾಗ ಮಹಾಕಾವ್ಯವನ್ನಾಗಿ ಮಾಡಬೇಕೆಂಬ ಹೆಬ್ಬಯಕೆಯ ಕವಿಗಿತ್ತು. ಮಹಾಕಾವ್ಯಕ್ಕೆ ಬೇಕಾದ ಮಹತ್ತಿದ್ದರೂ ಬೃಹತ್ತಿಲ್ಲದೆ ಮಹಾಕಾವ್ಯದ ಶ್ರೇಣಿಗೆ ಸೇರದಿದ್ದರೂ ಉತ್ತಮ ರಸವತ್ತಾದ ಕಾವ್ಯವಾಗಿದೆ.

ಕೆಲವು ವಿದ್ವಾಂಸರುಗಳು ಚಿತ್ರಾಂಗದಾ ಖಂಡಕಾವ್ಯವನ್ನು ಕುರಿತು ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಅಭಿವ್ಯಕ್ತಿಸಿದ್ದಾರೆ. ತಮ್ಮ ಅಂತರಚಕ್ಷುವಿನ ಮೂಲಕ ಕಾವ್ಯದ ಆಳ ಅಗಲಗಳ ಪರಿಧಿಯನ್ನು ಕಂಡುಕೊಂಡಿದ್ದಾರೆ.

ಕವಿ ಪೌರಾಣಿಕ ಕಥಾವಸ್ತುವೊಂದನ್ನು ಆಯ್ಕೆ ಮಾಡಿಕೊಂಡು ಪಾತ್ರಗಳಿಗೆ ಹೊಸಚೈತನ್ಯವಿತ್ತಿದ್ದಾರೆ. ಪರಂಪರೆಯನ್ನು ಕೈಬಿಡದೆ ಪರಿಪಾಲಿಸಿಕೊಂಡು ಬಂದ ಯುಗದ ಕವಿಯಾಗಿದ್ದಾರೆ. ಇನ್ನೂ ಕಾವ್ಯದ ಭಾಷೆಯಾಗಲೀ, ಶೈಲಿಯಾಗಲಿ, ಛಂದಸ್ಸುಗಳಲ್ಲೂ ಹೊಸತನವನ್ನು ಮೆರೆದಿದ್ದಾರೆ. ಪ್ರಕೃತಿಯನ್ನು ಕಾವ್ಯದಲ್ಲಿ ವೇದಿಕೆಯಾಗಿಸಿಕೊಂಡಿದ್ದಾರೆ. ವರ್ಣನೆಗಳ ಪ್ರಪಂಚಕ್ಕೆ ಕಾಲಿಟ್ಟರೆ ಅದ್ವಿತೀಯ–

ವೆನಿಸುತ್ತವೆ. ಪಾತ್ರಗಳ ಮೂಲಕ ಇಂದಿನ ಕಾಲಮಾನಕ್ಕೆ ತಕ್ಕಂತೆ ಮನೋ-ಧರ್ಮಕ್ಕನುಗುಣವಾಗಿ ಜೀವ ತುಂಬಿದ್ದಾರೆ. ಚಿತ್ರಾಂಗದಾ ಪಾತ್ರದ ಮೂಲಕ ಮಹಾಭಾರತದ ಮೌಲ್ಯಗಳಲ್ಲೊಂದಾದ ಮಾನವಸಹಜ ಪ್ರೇಮ, ತ್ಯಾಗ, ವೀರತೆಗಳನ್ನು ಸಾಕ್ಷಾತ್ಕರಿಸಿದ್ದಾರೆ.

ಕುವೆಂಪು ಅವರೇ ಹೇಳುವಂತೆ ರವೀಂದ್ರರ ನಾಟಕದ ಚರಿತ್ರೆಯನ್ನು ಪೂರ್ವ ಚಿತ್ರಾಂಗದಾ, ಲಕ್ಷ್ಮೀಶನ ಚಿತ್ರಾಂಗದೆಯನ್ನು ಉತ್ತರ ಚಿತ್ರಾಂಗದಾ ಎಂದು ವಿಭಾಗಿಸಿಕೊಂಡಿರುವುದೇಕೆ? ಎಂಬುದು ಕಾವ್ಯದ ಒಳಹೊಕ್ಕು ನೋಡಿದಾಗ ಅರಿವಾಗುತ್ತದೆ. ಮೊದಲ ಮೂರು ಪರ್ವಗಳಲ್ಲಿ ರವೀಂದ್ರರ ಚಿತ್ರಾಳನ್ನು ಕೆಲವು ಮಾರ್ಪಾಡುಗಳನ್ನು ಮಾಡಿ ಪೂರ್ವ ಚಿತ್ರಾಂಗದೆಯನ್ನು ಚಿತ್ರಿಸಿದ್ದಾರೆ. ರವೀಂದ್ರರ ಪ್ರಕಾರ ಒಂದು ಸಂವತ್ಸರದ ಅವಧಿಯಲ್ಲಿ ಅರ್ಜುನ-ಚಿತ್ರಾಂಗದೆ ಇಬ್ಬರು ಜೊತೆ ಇರುತ್ತಾರೆ. ಈ ಕಾಲದಲ್ಲಿ ಅವರನ್ನು ಯಾರು ಅರಸುವುದಿಲ್ಲವೇ? ಒಂದು ವರ್ಷಗಳ ಕಾಲ ಅರ್ಜುನನಿಗೆ ತನ್ನ ಕರ್ತವ್ಯ ಮರೆತು ಇರಲು ಸಾಧ್ಯವೇ? ಎಂಬೆಲ್ಲಾ ಸಂಶಯಗಳು ಬರುತ್ತವೆ. ಕುವೆಂಪು ಒಂದು ವರ್ಷದ ಅವಧಿಯನ್ನು ಒಂದು ಮಾಸದ ಅವಧಿಗೆ ಇಳಿಸಿದ್ದಾರೆ. ಏಕೆಂದರೆ ಒಂದು ಸಂವತ್ಸರದ ಅವಧಿಯ ಸೌಂದರ್ಯವು ಪ್ರಣಯವು ನೀರಸವನ್ನುಂಟು ಮಾಡಬಹುದು. ಆದ್ದರಿಂದ ಈ ಬದಲಾವಣೆ ಒಪ್ಪತಕ್ಕದ್ದೇ. ಒಂದು ವರ್ಷ ಕಳೆದ ನಂತರ ಅರ್ಜುನನು ಚಿತ್ರಾಂಗದೆಯ ನಿಜವಾದ ಪರಿಚಯವನ್ನು ಕೇಳಿ "ಪ್ರಿಯೆ ಪೂರ್ಣವಾಯ್ತೆನ್ನ ಪ್ರಾಣಪಾತ್ರೆ!" ಎನ್ನುತ್ತಾನೆ. ಇಲ್ಲಿಗೆ ನಾಟಕ ಮುಗಿಯುತ್ತದೆ. ಆದರೆ ಕುವೆಂಪುರವರು ಕಥೆಯನ್ನು ಅಲ್ಲಿಗೆ ಮುಗಿಸದೆ ಚಿತ್ರಾಂಗದೆಯ ಮುಂದಿನ ಜೀವನಕ್ಕೆ ವಿರಾಮವಿಟ್ಟಿದ್ದಾರೆ. ಇಲ್ಲಿ ಆಕೆಯು ಅರ್ಜುನನಿಗೆ ತಾನು ಯಾರೆಂದು ಹೇಳದೆ ಗರ್ಭಿತ ರಹಸ್ಯೆಯಾಗುಳಿಯುತ್ತಾಳೆ. ಕಾರಣ ತಾನೊಬ್ಬ ರಾಜಕುಮಾರಿ, ಅಷ್ಟೇಕೆ ತಾಯಿ ತಂದೆಯರ ಅಪ್ಪಣೆ ಪಡೆಯದೆ ನಡೆದ ಗಾಂಧರ್ವ ವಿವಾಹಕ್ಕೆ ಹೆದರಿ ಮುಂದಿನ ತನ್ನ ಜೀವನದ ಭಯಂಕರ ಸನ್ನಿವೇಶಗಳನ್ನು ನೆನೆದು ನಡುಗುತ್ತಾಳೆ. ಇದು ನಮ್ಮ ಭಾರತೀಯ ಸಂಸ್ಕೃತಿಗೆ ವಿರೋಧವಾದರೂ ಇಂದಿಗೂ ಸಮಾಜದಲ್ಲಿ ಮಾನ್ಯತೆ ಪಡೆವ ನಡವಳಿಕೆಯಲ್ಲ. ತಾನು ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತವೆಂಬಂತೆ ಜೀವನ ನೌಕೆಯಲ್ಲಿ ಏಕಾಂಗಿಯಾಗಿ ತನ್ನ ಇನಿಯನ ನೆನಪೊಂದನ್ನು ಉಳಿಸಿಕೊಂಡು ತ್ಯಾಗದ ಸವಿಯಲ್ಲಿ ತೇಲುತ್ತಾಳೆ.

ಲಕ್ಷ್ಮೀಶನಲ್ಲಿ ತಂದೆ ಮಗನ ಭೀಕರ ಕದನದಲ್ಲಿ ಅರ್ಜುನ ಸಾವಿಗೀಡಾಗುತ್ತಾನೆ. ಅವನಿಗಿದ್ದ ಶಾಪದ ಕಾರಣದಿಂದ ಮಗನ ಕೈಯಿಂದಲೇ ಸಾವು ತಂದುಕೊಳ್ಳುತ್ತಾನೆ. ಮುಂದೆ ಅತಿಮಾನುಷ ಶಕ್ತಿಗಳ ಸಹಾಯದಿಂದ ಸಂಜೀವಕ ಮಣಿಯಿಂದ ಬದುಕಿ

ಬರುತ್ತಾನೆ. ಇಲ್ಲಿ ಚಿತ್ರಾಂಗದೆಯು ತನ್ನಿನಿಯನ ಸಾವಿನ ನಂತರ ಬಂದು ಮಗನಿಗೆ ಜರೆದು ಗೋಳಾಡುತ್ತಾಳೆ. ನಂತರ ಜೀವ ಬಂದು ಎಲ್ಲರೂ ಸೇರಿ ಕಥೆಸುಖಾಂತ–ವಾಗುತ್ತದೆ.

ಕುವೆಂಪು ಅರ್ಜುನನ್ನು ಸಾವಿನ ದವಡೆಯಿಂದ ತಪ್ಪಿಸಿ ಚಿತ್ರಾಂಗದೆಯನ್ನು ಬಲಿಕೊಟ್ಟಿರುವುದೇಕೆ? ಎಂಬ ಪ್ರಶ್ನೆ ಏಳುತ್ತದೆ. ಚಿತ್ರಾಂಗದಾ ಪಾತ್ರದ ಮೂಲಕ ತ್ಯಾಗ, ಪ್ರೇಮ, ತಪಸ್ಸುಗಳ ಮೌಲ್ಯಗಳನ್ನು ಉತ್ತುಂಗಕ್ಕೇರಿಸಲು ಸಾವು ಅನಿರೀಕ್ಷಿತವೇ? ಆಕೆಯು ಬದುಕುಳಿದಿದ್ದರೆ ಮೌಲ್ಯಗಳು ಉಳಿಯುತ್ತಿರಲಿಲ್ಲವೇ ಎಂಬ ಪ್ರಶ್ನೆಮೂಡುತ್ತದೆ. ಲಕ್ಷ್ಮೀಶನಂತೆ ಎಲ್ಲರನ್ನು ಬದುಕಿಸಿ ಉಳಿಸಿ ಕಥೆಯನ್ನು ಸುಖಾಂತ ಮಾಡಬಹುದಾಗಿತ್ತು. ಆದರೆ ಚಿತ್ರಾಂಗದಾ ಕಥೆ ಸಾವಿನಿಂದ ದುರಂತವಾಗಿದೆ. ದುರಂತವೆಂದರೆ ಸಾವು ಮಾತ್ರವೇ ಉಳಿದುದೆಲ್ಲದರಲ್ಲಿಯೂ ಸುಖಾಂತಕ್ಕಿಂತಲೂ ಒಂದು ಕೈ ಮೇಲೆ. ತ್ಯಾಗಮಯಿಯಾಗಿ, ಪ್ರೇಮಮಯಿಯಾಗಿ, ತಪಸ್ವಿನಿಯಾಗಿ ಎಲ್ಲರ ಮನದಲ್ಲಿ ಉಳಿದಿರುವ ಚಿತ್ರಾಂಗದಾ ಕಾವ್ಯ ಸ್ಮರಣಾರ್ಹವಾದುದು.

ಅಂತು ಕವಿವರ್ಯರು ಚಿತ್ರಾಂಗದೆಯ ಪಾತ್ರದ ಮೂಲಕ ಅದ್ಭುತ ರಮ್ಯ ಜೀವನದ ಜೊತೆಗೆ ಕರ್ಮಜೀವನವನ್ನು ಪರಿಣಾಮಕಾರಕ ರೀತಿಯಲ್ಲಿ ಚಿತ್ರಿಸಿ **'ನೂತನಕಲಾಕೃತಿ'**[೧]ಯನ್ನು ಕನ್ನಡಕ್ಕೆ ಸಲ್ಲಿಸಿದ್ದಾರೆ. ವಸ್ತು, ರೀತಿ ಇವುಗಳ ಮೂಲಕ ಭಾವನಾತ್ಮಕವಾದ ಸಂಬಂಧವನ್ನು ಚಿತ್ರಾಂಗದಾ ಖಂಡಕಾವ್ಯದಲ್ಲಿ ಕಂಡರಿಸಿದ್ದಾರೆ.

"ಅಯೋಧ್ಯೆಯಧಿಪತಿ ಹರಿಶ್ಚಂದ್ರನಿಗೆ ಸತ್ಯವೇ ತಪಸ್ಸಾದಂತೆ ದುರ್ಯೋಧನನಿಗೆ ಛಲತಪಸ್ಸಾದಂತೆ ಕರ್ಣನಿಗೆ ದಾನ ತಪಸ್ಸಾದಂತೆ ಊರ್ಮಿಳೆಗೆ ನಿರೀಕ್ಷಣೆಯ ತಪಸ್ಸಾದಂತೆ ಚಿತ್ರಾಂಗದೆಗೆ ಪ್ರೇಮವೇ ತಪಸ್ಸಾಗಿಪ್ರೇಮತಪಸ್ವಿನಿಯಾಗಿದ್ದಾಳೆ."[೨] ಕುವೆಂಪು ಅವರ ಚಿತ್ರಾಂಗದಾ ಕಾವ್ಯವು ಅತಿಮಾನುಷತೆಯಿಂದ ಹೊರತಾಗೇನಿಲ್ಲಾ ಅವುಗಳಲ್ಲಿ

(೧) ಚಿತ್ರಾಂಗದೆಯು ಸೌಂದರ್ಯ ಸಂಪಾದಿಸುವುದು,

(೨) ಸಮುದ್ರಮೂರ್ತಿಯಿಂದ ಜೀವನಪ್ರೀತಿಯ ಉಪದೇಶ,

(೩) ತಂದೆ ಮಕ್ಕಳ ಘೋರ ಕದನದಲ್ಲಿ ರುಚಿರ ಮೂರ್ತಿ ಸಂದೇಶ.

---

೧. ಸ.ಸ.ಮಾಳ್ವಡ, ನೂತನ ಕಲಾಕೃತಿ(ಲೇಖನ) ಚಿತ್ರಾಂಗದ ಸಮೀಕ್ಷೆ, ಸಂ: ಎಂ.ಸಿ.ವಸಂತಕುಮಾರ್, ಪುಟ. ೨೧.

೨. ವಿಜಯ ಭಾರತಿ, ಪ್ರೇಮತಪಸ್ವಿನಿ(ಲೇಖನ), ಚಿತ್ರಾಂಗದಾ ಸಮೀಕ್ಷೆ, ಸಂ: ಎಂ.ಸಿ.ವಸಂತ ಕುಮಾರ್, ಪುಟ. ೫೩.

ಇವೆಲ್ಲವೂ ಅದ್ಭುತ ಪವಾಡಗಳನ್ನು ಮೆರೆದಿವೆ. ಇಲ್ಲಿ ಕವಿದರ್ಶನ ಪ್ರತಿಭೆಯ ಮೂಲಕ ಸ್ವಪ್ನದರ್ಶನವನ್ನು ಮಾಡಿಸುವುದು ಮನೋವೈಜ್ಞಾನಿಕ ಭೂಮಿಕೆಯಲ್ಲಿ ದೃಢಪಡಿಸಿರುವುದು ತಿಳಿಯುತ್ತದೆ. ಸೌಂದರ್ಯ ಸಂಪಾದನೆ ಠಾಕೂರರ ಚಿತ್ರಾಂಗದ–ದಲ್ಲಿರುವಂತೆ ಬಂದಿದೆಯಾದರೂ ಉಳಿದ ಎರಡು ಪವಾಡವೆಂದರೆ, ಚಿತ್ರಾಂಗದೆ ವಿರಹದಿಂದ ನೊಂದು ಅರ್ಜುನನು ಕೊಟ್ಟ ವಚನದಂತೆ ಬಾರದಿರಲು ದುಃಖಿತಳಾಗಿ ಸಾವಿಗಣಿಯಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಹವಣಿಸುತ್ತಿರುವ ಸಮಯದಲ್ಲಿ ಸಮುದ್ರ ಮೂರ್ತಿಯು ಪ್ರತ್ಯಕ್ಷವಾಗಿ ಆಕೆಗೆ ಜೀವನ ಪ್ರೀತಿಯನ್ನು ಕಲಿಸುತ್ತದೆ. ವಿರಹಕ್ಕೆ ಕೊಲೆ ಮದ್ದಲ್ಲ ಎಂದು ಹೇಳಿ ಮುಂದೆ ನಿನ್ನಿನಿಯನ ದರ್ಶನವಾಗುತ್ತದೆ. ನಿಮ್ಮಿಬ್ಬರ ಪ್ರಣಯಸಾರ ಸರ್ವಸ್ವವಾದ ಶಿಶುವಿನ ಪಾಲನೆಯ ಜವಾಬ್ದಾರಿಯನ್ನು ನಿಭಾಯಿಸುವಂತೆ ಉಪದೇಶಿಸುತ್ತದೆ. ಮತ್ತೊಂದು ಪವಾಡ ಸದೃಶವೆಂದರೆ ಯುದ್ಧಸನ್ನಿವೇಶದಲ್ಲಿ ಚಿತ್ರಾಂಗದೆಯು ಧ್ಯಾನದಲ್ಲಿರುವಾಗ ದಿವ್ಯಾಕೃತಿಯು ಕಾಣಿಸಿಕೊಂಡು,

"ಹೋಗು ನಡೆ ಬೇಗದಲಿ;
ತಳುವಿದರೆ ಬೀಳುವುದು ಪಾರ್ಥನ ಕಳೇಬರಂ
ರಣಧರೆಗೆ; ತೊಡಗಿದೆ ನಿಶಾಯುದ್ಧಮಿಾರಾತ್ರಿ;
ನಿನ್ನ ಹೃದಯದ ಬಲವನಿತ್ತು ರಣದೇವತೆಗೆ
ಕೆರಳ್ದ ಬಿದಿಯಂ ತಣಿಸಿ ಪತಿಸುತರ್ಗಿರ್ವರ್ಗೆ
ನೀಂ ಶುಭಂಕರಿಯಾಗು ನಡೆ ಹೋಗು ಬೇಗದಲಿ" (ಸಾಲು. ೨೩೩೩–೩೮)

ಈ ಎರಡೂ ಪವಾಡ ದೃಶ್ಯಗಳು ಕವಿಯ ಸ್ವತಂತ್ರ ಸೃಷ್ಟಿಯವು. ಈ ಕಥಾವಸ್ತು ಧೋರಣೆಗೆ ದ್ಯೋತಕವಾಗಿದೆ. ಒಂದು ಮೂರ್ತಿ ಬದುಕು ಎಂದು ಜೀವನ ಪ್ರೀತಿಯನ್ನು ಕಲಿಸಿ ಉಪದೇಶಿದರೆ ಮತ್ತೊಂದು ಸಾವಿಗಣಿಯಾಗಿ ಅಮರಳಾಗು ಎಂದು ಸಂದೇಶವಿಡುತ್ತದೆ. ಒಟ್ಟಿನಲ್ಲಿ ಈ ಆಕಸ್ಮಿಕ ಅತಿಮಾನುಷತೆ ಪವಾಡಗಳು ಕಾವ್ಯಕ್ಕೆ ಉಚಿತವಾಗಿಯೇ ಇವೆ.

ಚಿತ್ರಾಂಗದಾ ಪೂರ್ವ ಜೀವನವು ಶೃಂಗಾರ ರಸಭರಿತವಾಗಿದ್ದರೆ ಉತ್ತರ ಜೀವನ ಕರುಣಾರಸಪೂರಿತವಾಗಿದೆ. ಅಲ್ಲಿ ಶೃಂಗಾರಪೂರ್ಣ ಪ್ರಣಯಿನಿಯಾಗಿರುವ ಚಿತ್ರಾಂಗದೆ. ಮುಂದೆ ವೀರಮಾತೆಯಾಗಿ, ಪ್ರೇಮಮಯಿಯಾಗಿ, ತ್ಯಾಗಮಯಿಯಾಗಿ, ತಪಸ್ವಿಯಾಗಿದ್ದಾಳೆ. ಪೂರ್ವ ಚಿತ್ರಾಂಗದೆಯಲ್ಲಿ ಅರ್ಜುನನ ಪ್ರಿಯೆಯಾಗಿ ಕಾಣಿಸಿಕೊಂಡಾಗ ಇದ್ದ ಬಾಲಿಶ ವರ್ತನೆ ಕೋಪದಲ್ಲಿ ಕಿಡಿಕಾರುವ ಮಾತುಗಳು

ಕ್ರಮೇಣ ಕರಗಿ ಸಾಧ್ವಿಯಂತಾಗಿ ಮಗನಿಗೆ ವೀರ ಮಾತೆಯಾಗಿ ಸರ್ವರ ದೃಷ್ಟಿಯಲ್ಲಿ ತ್ಯಾಗದೇವತೆಯಾಗುಳಿಯುತ್ತಾಳೆ. ಅವಳಲ್ಲಿ ಅಂತಸ್ಸತ್ವ ಎಷ್ಟರಮಟ್ಟಿನದು ಎಂದು ನಾವು ಅಳೆಯಲಾಗದು.

ಮಹಾಭಾರತದ ಯುದ್ಧ ಪ್ರಾರಂಭವಾದಾಗ ತಾನು ತಪಸ್ಸನ್ನು ಆಚರಿಸುವ ವ್ರತವನ್ನು ಕೈಗೊಳ್ಳುತ್ತಾಳೆ. ಮಗನು ಏತಕ್ಕಾಗಿ ಎಂದು ಕೇಳಲು, ಚಿತ್ರಾಂಗದೆ

"ಪಾರ್ಥಂಗೆ ಗೆಲಮಕ್ಕೆ!
ಅರ್ಜುನಗೆ ಸೊಗಮಕ್ಕೆ! ಜಯವಧು ಸವತಿಯಕ್ಕೆ!
ಧರ್ಮಸಂಸ್ಥಾಪಕಂ ದೇವಕಿನಂದನಗೆ
ನಿತ್ಯಮಂಗಳಮಕ್ಕೆ! ಲೋಕಕ್ಕೆ ಶಾಂತಿಯಕ್ಕೆ!"

ಎಂದು ಉತ್ತರ ಹೇಳುತ್ತಾಳೆ. ಎಲ್ಲಿಯೂ ಯಾರ ಮುಂದೆಯೂ ತನ್ನ ಪತಿ ಅರ್ಜುನ ಎಂದು ಹೇಳದೆ ಗರ್ಭಿತ ರಹಸ್ಯೆಯಾದ ಚಿತ್ರ ಆ ರಹಸ್ಯೆಯನ್ನು ಬಹಿರಂಗಗೊಳಿಸುವಲ್ಲಿ ತನ್ನನ್ನೇ ಅರ್ಪಿಸಿಕೊಳ್ಳುತ್ತಾಳೆ. "ಪತಿಸುತರಲ್ಲಿ ಯಾರು ಜೀವಕಳೆದುಕೊಂಡಿದ್ದರೂ ಚಿತ್ರಾಂಗದೆಗೆ ದೊಡ್ಡ ಆಘಾತವಾಗುತ್ತಿತ್ತು. ಇದಲ್ಲದೆ ಅರ್ಜುನನ ಸಾವಿನಿಂದದೊದಗುವ ವಿಧವೆ ಬಾಳಿಗಿಂತಲೂ ಮುತ್ತೈದೆಯಾಗಿ ಬಾಳುವ, ಮುತ್ತೈದೆಯಾಗಿಯೇ ಸಾಯುವ ಭಾರತೀಯ ಸ್ತ್ರೀ ಮನೋಧರ್ಮದ ಘಟನೆಯನ್ನು ವಿಶಿಷ್ಟವಾಗಿಸಿದೆ"[೧] ಆದರೂ ಇಲ್ಲಿ ಪಾರ್ಥನ ಪಾಲಿಗೆ ಅತಿಹೆಚ್ಚು ತಪ್ಪುಗಳ ಪಟ್ಟಿ ಇದ್ದರೂ, ಕೇವಲ ಒಂದು ತಪ್ಪಿನಿಂದ ಚಿತ್ರಾಂಗದೆಗೆ ಏಕೆ ಶಿಕ್ಷೆ ಪಶ್ಚಾತ್ತಾಪ ಪಾರ್ಥನಿಗೆ ಇಲ್ಲವೇ? ಎಂಬ ಪ್ರಶ್ನೆ ಎದುರಾಗುತ್ತದೆ. ಇಲ್ಲಿ ಚಿತ್ರಾಂಗದೆಯ ವ್ಯಕ್ತಿತ್ವದ ಉನ್ನತಿಗಾಗಿ ಆಕೆಯನ್ನು ಪ್ರಾಯಶ್ಚಿತದಲ್ಲಿ ಮುಳುಗಿಸಿ ಅವಳನ್ನು ಉಜ್ವಲಗೊಳಿಸಿದ್ದಾರೆ. ಅರ್ಜುನನು ಮನಸ್ಸು ಮಾಡಿದ್ದರೆ ತಾನೊಲಿದ ಪ್ರಿಯೆ ಯಾರೆಂಬುದನ್ನು ಗೊತ್ತುಮಾಡಿಕೊಂಡು ಮದುವೆ ಮಾಡಿಕೊಳ್ಳಬಹುದಿತ್ತು. ಆದರೆ ಹಾಗಾಗದೆ ಕಥೆ ಬೇರೆ ತಿರುವನ್ನು ಪಡೆದುಕೊಂಡಿದೆ.

ಠಾಕೂರರ, ಲಕ್ಷ್ಮೀಶನ ಚಿತ್ರಾಂಗದೆಗಿಂತ ನಮ್ಮ ಕುವೆಂಪು ಚಿತ್ರಾಂಗದಾ, ಆಕೆಯ ಜೀವನದ ಪರಿಪೂರ್ಣ ವ್ಯಕ್ತಿತ್ವವನ್ನು ಅಭಿವ್ಯಕ್ತಿಸುವ ಕಲಾಕೃತಿಯಾಗಿವೆ. ಕವಿಗಳೇ ಹೇಳುವಂತೆ "ಅವುಗಳಿಂದ ಮೂಡಿ ಸೃಷ್ಟಿಯಾಗಿದ್ದಾಳೆ. ಕಲಾಕೃತಿ–ಯಾಗಿದ್ದಾಳೆ" ಸತೀತ್ವ ಮಾತೃತ್ವಗಳ ಅಪೂರ್ವ ಸಂಗಮಮೂರ್ತಿಯಾಗಿದ್ದಾಳೆ.

---

೧. ರಾಗೌ, ವಿಶಿಷ್ಟತೆ(ಲೇಖನ) ಚಿತ್ರಾಂಗದಾ ಸಮೀಕ್ಷೆ, ಸಂ: ಎಂ.ಸಿ.ವಸಂತಕುಮಾರ್, ಪು. ೧೩೪.

ಇನ್ನೂ ಕೃತಿಯ ಭಾಷೆ, ಶೈಲಿ, ಛಂದಸ್ಸು, ಮಹೋಪಮೆ ವರ್ಣನೆಗಳು ಪ್ರಕೃತಿ ಚಿತ್ರಣದ ವಿಷಯಕ್ಕೆ ಬಂದರೆ ಅದರಲ್ಲೂ ನಾವೀನ್ಯತೆಯನ್ನು ಸಾಧಿಸಿದ್ದಾರೆ. ಹೊಸ ಹೊಸ ಆವಿಷ್ಕಾರಗಳನ್ನು ಕಾಣುವ ವಿಜ್ಞಾನಿಯಂತೆ ಕವಿ. ಕಾವ್ಯದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿ ಯಶಸ್ವಿಯಾಗಿದ್ದಾರೆ. ಮಾಲೆ ಮಾಲೆಯಾಗಿ ಬರುವ ಉಪಮೆಗಳಿಂದಲೂ ಕನ್ನಡಕ್ಕೆ ವಿಶಿಷ್ಟವೂ ನವ ಪ್ರಯತ್ನವು ಆದ ಮಹೋಪಮೆ-ಗಳಿಂದಲೂ ಚಿತ್ರಾಂಗದಾ ಶ್ರೇಷ್ಠ ಕಾವ್ಯವಾಗಿವೆ. "ಆಧುನಿಕ ಕನ್ನಡ ಕವಿ ಕುಲೋತ್ತುಂಗರಾದ ಶ್ರೀಕುವೆಂಪು ಅವರು ತಮ್ಮ ಸಂಪದ್ಯುಕ್ತವಾದ ಅನುಭವ ಭಂಡಾರದ ನೆರವಿನಿಂದ ಹಲವಾರು ಶ್ರೇಷ್ಠ ಮಹೋಪಮೆಗಳನ್ನು ನಿರ್ಮಾಣ ಮಾಡಿದ್ದಾರೆ. ಕೆಲವು ಮಹೋಪಮೆಗಳು ಕವಿಯ ವಿಶಾಲ ಲೋಕದ ಜ್ಞಾನಾನುಭವಗಳಿಂದ ಹುಟ್ಟು ಪಡೆದಿವೆ. ಆಧ್ಯಾತ್ಮಿಕ ಪ್ರಪಂಚಕ್ಕೆ ಕರೆದೊಯ್ಯುವ ಮಹೋಪಮೆಗಳುಂಟು, ಕಲ್ಪನಾವಿಲಾಸದ ಕುಸುರಿಗಳೂ ಉಂಟು. ಈ ಮಹೋಪಮೆಗಳು ಪಾಶ್ಚಾತ್ಯಮಾದರಿಯವೇ ಹೊರತು ಭಾವಸಾಮಾಗ್ರಿಯಲ್ಲ ಕವಿಯದೇ. ಅಪರಿಚಿತ ಪರಕೀಯ ಸುಪರಿಚಿತ ಸ್ವಕೀಯವಾಗಿವೆ"[೧] ಈ ಕಾವ್ಯದಲ್ಲಿ ಏಳು ಮಹೋಪಮೆಗಳನ್ನು ಕಾಣುತ್ತೇವೆ. ವಿಸ್ತಾರವಾದ ಮಹೋಪಮೆಗಳಿಂದ ಕಾವ್ಯಕ್ಕೆ ಹೆಚ್ಚಿನ ಶೋಭೆ ಬಂದಿದೆ. ಕುವೆಂಪು ಅವರ ಶೈಲಿಯೂ ಭೋರ್ಗರೆದು ಹರಿವ ನದಿಯಂತೆ ಇದ್ದರೆ ಮತ್ತೊಮ್ಮೆ ಶಾಂತ ಸರೋವರದಂತೆ. ಹಾಗೆ ಅವರು ಬಳಸುವ ಶಬ್ದ ಚಿತ್ರಗಳು ವರ್ಣರಂಜಿತವಾಗಿರುತ್ತದೆ. ಉದಾ: ಸಂಸ್ಕೃತ ಭೂಯಿಷ್ಠ ಶೈಲಿಯಲ್ಲಿ ರಭಸವಾಗಿ ಹರಿಯುವ ಈ ಸಾಲುಗಳನ್ನು ನೋಡಬಹುದು.

"ಮೇಘಾದ್ರಿ ಮುದ್ರಿತ ಸುನೀಲ ಜಲ ಕಲ್ಲೋಲ
ಸಮ್ಮಥನ ಸಂಜಾತ ಮೌಕ್ತಿಕ್ತಾಫೇನಮಯ
ತಾಂಡವ ತರಂಗಾಟ್ಟಹಾಸ ಸಂಭ್ರಮ ಮತ್ತು
ಕಾಸಾರಮೆಸೆದತ್ತನಂತ ವಿಸ್ತಾರ ಭವ್ಯಂ!"

ಕಾವ್ಯದಲ್ಲಿ ಉಪಮಾ ರೂಪಕ ಅಲಂಕಾರಗಳು ಶೈಲಿಗೆ ಮೆರಗುಕೊಟ್ಟಂತಿವೆ. ವರ್ಣನೆಗಳಲ್ಲಿ ಪ್ರಕೃತಿಯ ವರ್ಣನೆಯಲ್ಲೂ ಸಹ ಶಬ್ದಗಳ ಚಿತ್ರಗಳ ಮೂಲಕ, ಕ್ರಿಯೆಗಳ ಮೂಲಕ ಪ್ರಕೃತಿದೇವಿಯನ್ನು ಕರೆದು ತಂದು ನಾಟ್ಯವಾಡಿಸಿದ್ದಾರೆ. ಗಾಯನ ಹಾಡಿಸಿದ್ದಾರೆ. ಕಾವ್ಯದಲ್ಲಿ ಬರುವ ಸೂರ್ಯೋದಯ, ಸೂರ್ಯಸ್ತಮ, ಕಾಸಾರ,

---

೧. ಎಂ.ವಿ.ಸೀತಾರಾಮಯ್ಯ, ಛಂದಸ್ಸು(ಲೇಖನ), ಚಿತ್ರಾಂಗದಾ ಸಮೀಕ್ಷೆ, ಸಂ:ಎಂ.ಸಿ.ವಸಂತಕುಮಾರ್, ಪು.೧೫೬.

ದ್ವೀಪ, ಮಣಲೂರು, ಸಾಗರ ಸಮುದ್ರಮೂರುತಿ, ಬಿರುಗಾಳಿ ರಣಭೂಮಿ ಇವುಗಳ ಬಣ್ಣನೆಯಿಂದ ಕಾವ್ಯ ಸೌಂದರ್ಯ ಇಮ್ಮಡಿಯಾಗಿದೆ.

ಛಂದಸ್ಸಿನ ವಿಚಾರದಲ್ಲೂ ಕೂಡ ಕುವೆಂಪು ಪಾಶ್ಚಾತ್ಯರ 'ಬ್ಲಾಂಕ್‌ವರ್ಸ್' (Blank verse) ನ ರೂಪವನ್ನು ನಮ್ಮ ಕನ್ನಡ ಸಾಹಿತ್ಯದಲ್ಲಿ ಇದ್ದ ಲಲಿತರಗಳೆಯನ್ನು ಕೆಲವು ಸೌಲಭ್ಯಗಳನ್ನು ಜೊತೆಗೂಡಿಸಿ ಸರಳರಗಳೆಯ ಹೊಸ ಬಗೆಯೊಂದನ್ನು ರೂಪಿಸಿಕೊಳ್ಳಲಾಯಿತು. ಇದನ್ನೇ ಕವಿ ಮಹಾಛಂದಸ್ಸು ಎಂದು ಕರೆದಿದ್ದಾರೆ.

ಕನ್ನಡ ಸಾಹಿತ್ಯ ಸರಸ್ವತಿಗೆ ಮುಡಿಯ ಹೂವು ಎಂಬಂತೆ ಕವಿ ಚಿತ್ರಾಂಗದಾ ಕಾವ್ಯವನ್ನು ಕಟ್ಟಿದ್ದಾರೆ. ಅನೇಕ ವಿದ್ವಾಂಸರು ತಮ್ಮ ತಮ್ಮ ದೃಷ್ಟಿಕೋನದಲ್ಲಿ ವಿಮರ್ಶಿಸಿದ್ದಾರೆ. ಉತ್ತಮ ಸಾಹಿತ್ಯಕೃತಿಗಳನ್ನು ಹಲವು ದೃಷ್ಟಿಕೋನಗಳಿಂದ ನೋಡುವ ವಿಮರ್ಶಾತ್ಮಕ ಬರವಣಿಗೆಯು ನಮ್ಮ ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬರಬೇಕು. ಒಂದು ಕೃತಿಯ ಕುರಿತು ಒಬ್ಬನೇ ವಿಮರ್ಶಕನಿಗಿಂತ ಆತನ ಏಕಮುಖ ಬರಹಕ್ಕಿಂತ ಹಲವಾರು ವಿಮರ್ಶಕರ ಬಹುಮುಖ ನಿಲುವುಗಳು ನಿಜವಾದ ಮೌಲ್ಯನಿರ್ಣಯಕ್ಕೆ ಹೆಚ್ಚು ಸಹಾಯಕಾರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಚಿತ್ರಾಂಗದಾ ಕಾವ್ಯವು ಬೃಹತ್ ಅಲ್ಲದಿದ್ದರೂ ಮಹತ್ವದ ಕಾವ್ಯವಾಗಿದೆ.

ಅಧ್ಯಾಯ - ನಾಲ್ಕು

ಭಾಷೆ, ಶೈಲಿ ಮತ್ತು ಛಂದಸ್ಸು

ಭಾಷೆ:

"ಭಾಷೆ ಮನುಷ್ಯನನ್ನು ಪ್ರಾಣಿಗಳಿಂದ ಎತ್ತರಕ್ಕೇರಿಸಿರುವ ಅಂಶಗಳಲ್ಲಿ ಒಂದು. ಆಡುವ ಮಾತನ್ನು ವಿವಿಧ ವಿನ್ಯಾಸಗಳಲ್ಲಿ ಪ್ರಯೋಗಿಸಿ ಸೋಲುಗೆಲುವುಗಳಲ್ಲಿ ನಲಿದು ನಲಿಸಿ ಬೌದ್ಧಿಕ ಮಾನಸಿಕ ಪ್ರಗತಿಯಲ್ಲಿ ಇಷ್ಟೋ ಮೈಲಿಗಲ್ಲುಗಳನ್ನು ನೆಟ್ಟು ಮರದಿಂದ ಬೊಂಬೆ ಮಾಡಿದಂತೆ ವರ್ಣದಿಂದ ಚಿತ್ರಬರೆದಂತೆ ಕಲ್ಲಿನಿಂದ ಶಿಲ್ಪ ಕೆತ್ತಿದಂತೆ ಶಬ್ದಗಳಿಂದ ವಾಗ್ ವಸನಗಳನ್ನು ನೇಯತ್ತೊಡಗಿತು. ಮಾನವಮತಿ ಭಾಷೆಯ ಸಾರ್ಥಕ ಸಮರ್ಪಕ ಬಳಕೆ ಸಾಹಿತಿಯ ಸಾಧನೆ ಸಿದ್ಧಿಗಳನ್ನು ಅವಲಂಬಿಸಿದೆ".[೧]

ಶ್ರೀ ಕುವೆಂಪು ಅವರು ಸಂಸ್ಕೃತ ಮತ್ತು ಹಳಗನ್ನಡ, ನಡುಗನ್ನಡ ಮಹಾಕಾವ್ಯಗಳ ಹೃದ್ಯವಾದ ಅಭ್ಯಾಸವನ್ನು ಮಾಡಿದವರು; ಅಲ್ಲಿನ ಭಾಷಾ ಶೈಲಿಯನ್ನು ಅಭ್ಯಾಸ ಮಾಡಿದವರು. ಈ ಕಾವ್ಯದ ಬಗೆಗೆ ಬಳಸಿರುವ ಭಾಷೆ ಹಳಗನ್ನಡ, ನಡುಗನ್ನಡ, ಹೊಸಗನ್ನಡಗಳ ಸಮ್ಮಿಶ್ರಣವಿದ್ದರೂ ಹಳೆಗನ್ನಡಕ್ಕೆ ಹೆಚ್ಚಿನ ಪ್ರೀತಿ ತೋರಿದ್ದಾರೆ. ಭಾಷೆಯೂ ಕಷ್ಟವಾಗದೆ ಸರಾಗವಾದ ಓದಿಗೆ ಹೊಂದಿಕೊಂಡಂತಿದೆ.

ಸಂಸ್ಕೃತ ಭೂಯಿಷ್ಠ ಪದಗಳನ್ನು ಬಳಸಿದ್ದಾರೆ. ಅದು ಅಂದಿನ ಸಂಸ್ಕೃತದ ಪ್ರಭಾವವೇ ಕಾರಣ, ಇವರ ಭಾಷಾಶೈಲಿಯೂ ಒಮ್ಮೆ ಭೋರ್ಗರೆದು ತುಂಬಿ ಹರಿವ ನದಿಯಂತಿದ್ದರೆ ಮತ್ತೊಮ್ಮೆ ಶಾಂತ ಸರೋವರದಂತೆ ನಿರ್ಮಲವಾಗಿರುತ್ತದೆ. ಮತ್ತೊಮ್ಮೆ ಸಿಡಿಲು ಗುಡುಗುಗಳ ಆರ್ಭಟ ಮತ್ತೊಮ್ಮೆ ಕೊಳಲ ದನಿಯಂತೆ ಇಂಪು.

"ಶ್ರೀ ಕುವೆಂಪು ಕಾವ್ಯದ ಅಥವಾ ಸಾಹಿತ್ಯ ಭಾಷೆಯ ಬಳಕೆಯನ್ನು ಕುರಿತು ಹೇಳುವಾಗ ಪ್ರಸ್ತಾಪಿಸುವ' 'ಭಾವೋಪಯೋಗಿ' ಮತ್ತು 'ಲೋಕೋಪಯೋಗಿ' ಎಂಬ ಪರಿಕಲ್ಪನೆಗಳು ಧ್ವನಿ ಸಿದ್ಧಾಂತದ 'ಅಬಿದಾ' ಲಕ್ಷಣಾ ಮತ್ತು ವ್ಯಂಜನಾ ವೃತ್ತಿಗಳನ್ನು ಒಂದು ರೀತಿಯಲ್ಲಿ ವ್ಯಾಖ್ಯಾನಿಸುವ ಹೊಸ ವಿಧಾನವಾಗಿದೆ. ಈ ಎರಡು ಪರಿಭಾಷೆಗಳು ಕನ್ನಡದಲ್ಲಿ ಹೊಸವೆಂಬುದು ನಿಜವಾದರೂ ಈ ಪರಿಕಲ್ಪನೆಗಳಿಗೆ ಕುವೆಂಪು ಅವರಿಗೆ ದೊರೆತ ಪ್ರೇರಣೆ ಐ.ಎ.ರೀಚರ್ಡ್ಸ್‌ನಿಂದ.

ಕುವೆಂಪು ಅವರು ಬಳಸುವ ಲೋಕೋಪಯೋಗಿ ಮತ್ತು ಭಾವೋಪಯೋಗಿ ಎಂಬ ಈ ಎರಡು ಪರಿಭಾಷೆಗಳಲ್ಲಿ ಎರಡನೆಯದು motive use ಎನ್ನುವುದಕ್ಕೆ

---

೧. ಎಂ.ರಾಮಕೃಷ್ಣ, ಶೈಲಿ(ಲೇಖನ) ಚಿತ್ರಾಂಗದಾ ಸಮೀಕ್ಷೆ, ಪು. ೧೫೬.

ಸಂವಾದಿಯಾಗಿಲ್ಲ. ಅದರ ಬದಲು ಅವರ 'ಲೋಕೋಪಯೋಗಿ' ಎಂಬ ಪರಿಭಾಷೆಯನ್ನು ಮಾಡಿಕೊಳ್ಳುತ್ತಾರೆ. ಯಾಕೆಂದರೆ ಲೋಕದಲ್ಲಾಗಲಿ, ಶಾಸ್ತ್ರದಲ್ಲಾಗಲಿ ಭಾಷೆಯ ಬಳಕೆ ಹೆಚ್ಚು ಕಡಮೆ ಉದ್ದೇಶಿತವಾದ ಅರ್ಥಕ್ಕೆ ಬದ್ಧವಾಗಿರುತ್ತದೆ. "ಭಾಷೆ ಲೋಕೋಪಯೋಗಿಯಾದಾಗ ಅದು ಲೋಕ ಸಂವಾದವನ್ನು ನಿರೀಕ್ಷಿಸುತ್ತದೆ. ಭಾವೋಪಯೋಗಿಯಾದಾಗ ಅದು ಮುಖ್ಯವಾಗಿ ಭಾವಸಂವಾದವನ್ನು ಅಪೇಕ್ಷಿಸುತ್ತದೆ." ಕಾವ್ಯಭಾಷೆಯ ಪ್ರಯೋಜನ ಅದರ ಭಾವೋಪಯೋಗದಲ್ಲಿದೆ. ಅದರ ಸತ್ಯ ಲೋಕಸತ್ಯವಲ್ಲ, ಭಾವಸತ್ಯ. ಅದರಿಂದ ನಾವು ನಿರೀಕ್ಷಿಸಬೇಕಾದದ್ದು ಭಾವ ಸಂವಾದವನ್ನೇ ಹೊರತು ಲೋಕಸಂವಾದವನ್ನಲ್ಲ. ಭಾಷೆಯ ಒಂದು ಉಪಯೋಗವನ್ನು ಅದರ ಇನ್ನೊಂದು ಉಪಯೋಗದಲ್ಲಿ ಕಾಣಬಯಸಿದರೆ ದಿಕ್ಕು ತಪ್ಪಿದಂತಾಗಿ ಸೇರಬೇಕಾದ ಗುರಿಯನ್ನೇ ನಾವು ಸೇರುವುದಿಲ್ಲ. ಭಾವೋಪಯೋಗಿ ಭಾಷೆಯ ಗುರಿ ಎಂದರೆ ಕವಿಯ ವಿವಕ್ಷೆ ಸಹೃದಯದಲ್ಲಿ ಒಂದು ಚಿತ್ರ ಭಂಗಿಯಲ್ಲಿ ಪ್ರಚೋದಿಸಿ ಅವನಲ್ಲೊಂದು ಸಮರ್ಪಕ ಪ್ರಮಾಣದ ಭಾವ ಸಂಚಾರವನ್ನುಂಟು ಮಾಡುವುದೇ ಆಗಿದೆ. ಧ್ವನಿ ಪ್ರಸ್ಥಾನದವರ ಮಾತಿನಲ್ಲಿ ಹೇಳುವುದಾದರೆ ಭಾವೋಪಯೋಗಿಯಾದ ಭಾಷೆಯ ಪ್ರಯೋಜನ ಅದರ ಪ್ರತಿಯಾಮಾನರ್ಥದಲ್ಲಿ ಮಾತ್ರ ನಿಹಿತವಾಗುತ್ತದೆ."[೧]

ಕುವೆಂಪುರವರ ಚಿತ್ರಾಂಗದಾ ಕಾವ್ಯವು ಸರಸ್ವತಿಯ ಕೈಯಲ್ಲಿ ಹಿಡಿದ ವೀಣೆಯನ್ನು ನುಡಿಸಿದಂತೆ ರಾಗ ಮಧುರವಾಗಿ ಸಾಗಿದ ಸಂಗೀತದ ಸುಧೆ. ಪ್ರಾರಂಭದಲ್ಲಿ ಸರಸ್ವತಿಯ ಸ್ತುತಿಯನ್ನು ಆಡಿ 'ಏಳು' ವೀಣೆಯೇ ಏಳು? ಹೇಳು ಮುಂದಿನ ಕಥೆಯ ಹೇ ಅಮೃತ ಭಾಷಿಣಿಯೇ, ಎಂದು ಪ್ರಾರ್ಥಿಸಿಕೊಳ್ಳುತ್ತಾರೆ. ಕಾವ್ಯವು ಉದ್ದಕ್ಕೂ ತನ್ನದೇ ಆದ ಸಂಗೀತ ಶೈಲಿಯಲ್ಲಿ ಸಾಗುತ್ತದೆ.

---

೧. ಜಿ.ಎಸ್. ಶಿವರುದ್ರಪ್ಪ, ಕುವೆಂಪು ಕೃತಿವಿಮರ್ಶೆ, ಪು. ೯೬೫

ಶೈಲಿ:

ಶೈಲಿ ಎಂಬ ಶಬ್ದ Style ಎನ್ನುವುದಕ್ಕೆ ಸಂವಾದಿಯಾಗಿ ಬಳಕೆಗೆ ಬಂದಿದೆ. ಈ ಬಗ್ಗೆ ಪಾಶ್ಚಾತ್ಯರಲ್ಲಿ ಅನೇಕ ವ್ಯಾಖ್ಯಾನಗಳಿವೆ. ಹಾಗೆಯೇ ನಮ್ಮ ಭಾರತೀಯ ಕಾವ್ಯ ಮೀಮಾಂಸಕರಲ್ಲಿಯೂ ವಿವರಣೆಗಳಿವೆ. ಉದಾ: ರುದ್ರಟ ಹೇಳುವಂತೆ ಶೈಲಿ ಎನ್ನುವುದಕ್ಕೆ ಭಾವಾನುಸಾರವಾಗಿ ಕವಿಯ ರೀತಿಯ ಸಹಸ್ರ ವಸ್ತು ಭೂಮಿಯ ಏರಿಳಿತಕ್ಕೆ ಅನುಸಾರವಾಗಿ ಹರಿಯುತ್ತದೆ.

Pope "ಆಲೋಚನೆಯ ಉಡಿಗೆಯ ಶೈಲಿ."

ಹಾಬ್ಸ್: "ಲಾವಣ್ಯವೇ ಶೈಲಿ."

ಕಾರ್ಲೆಲ್; "ಶೈಲಿ ಲೇಖಕನ ಚರ್ಮದಂತೆ."

ಹೀಗೆ ಸಾಹಿತ್ಯದ ವಿಚಾರದಲ್ಲಿ ಅಮೂರ್ತ ಸಂಗತಿಗಳು ಸದಾ ವಿವಾದಸ್ಪದವೇ.

ಕುವೆಂಪು ಸಾಹಿತ್ಯದ ಒಟ್ಟಾರೆ ನೋಟದಲ್ಲಿ ಗದ್ಯದಲ್ಲಿ ಹೇಗೋ ಹಾಗೆಯೇ ಪದ್ಯದಲ್ಲಿ, ಕಾವ್ಯದಲ್ಲಿ ತಮ್ಮದೇ ಆದ ಶೈಲಿಯೊಂದನ್ನು ಅಳವಡಿಸಿಕೊಂಡಿರುವುದು ತಿಳಿಯುತ್ತದೆ. ಈ ಶೈಲಿ ಭಾಷೆಯಲ್ಲಿ ಮಾತ್ರವಲ್ಲ ಭಾವದಲ್ಲಿಯೂ ಸಹ ಅಡಗಿರುವುದನ್ನು ಕಾಣಬಹುದು. ಸಂಸ್ಕೃತಪದವಾದರೂ ಸರಿ ಕನ್ನಡಪದವಾದರೂ ಸರಿ. ಒಮ್ಮೆ ರಭಸದಿಂದ ಉಕ್ಕಿ ಹರಿವ ನದಿಯಂತೆ ಇರುವ ಭಾಷೆ ಒಮ್ಮೊಮ್ಮೆ ಶಾಂತ ಸರೋವರದಷ್ಟು ಸರಳವಾಗಿ ಸಾಗುತ್ತದೆ. ಭಾವವು ಸಹ ಇದಕ್ಕೆ ಹೊರತೇನಲ್ಲ ಭಾವದ ತೀವ್ರತೆಯೂ ಒಮ್ಮೊಮ್ಮೆ ರಭಸವಾಗಲು ಬಳಸುವ ಶೈಲಿ ಗುಡುಗು ಸಿಡಿಲಿನಂತೆ ಆರ್ಭಟಿಸುತ್ತದೆ. ಮತ್ತೊಮ್ಮೆ ಕೋಮಲವಾಗಿರುತ್ತದೆ. ಕುವೆಂಪು ಅವರ ಸಾಹಿತ್ಯದಲ್ಲಿ ತಮ್ಮದೇ ಆದ ಶೈಲಿಯಲ್ಲಿ ಪದಗಳ ಬಂಧ ವಾಕ್ಯದ ಜೋಡಣೆ ಪುಟಪುಟಗಳಾಗಿ ಬೆಳೆಸುತ್ತಾ ಒಮ್ಮೆ ಆಳವಾಗಿ ಬಗ್ಗಿಸಿ ಮತ್ತೊಮ್ಮೆ ಮೇಲಿಂದ ಧುಮುಕಿಸಿ ಮಗದೊಮ್ಮೆ (ರಭಸವಾಗಿ) ವಾಚಕರ ಮನಸ್ಸಿನಲ್ಲಿ ತಮ್ಮದೇ ಆದ ಛಾಪನ್ನು ಕೊರೆದು ರಭಸವಾಗಿ ಹರಿಸುತ್ತಾರೆ.

ಚಿತ್ರಾಂಗದಾ ಕಾವ್ಯದ ಶೈಲಿಯನ್ನು ನೋಡಿದಾಗ ಹಳಗನ್ನಡ ಶಬ್ದಗಳು ಸಂಸ್ಕೃತ ಪದಗಳು ಹೊಸಗನ್ನಡ ಪದಗಳ ಮಿಶ್ರಣವಿದೆ. ಭಾವ ಸಂಭೋದಿಸುವ ಕ್ರಮ, ಸಂಭಾಷಣಾ ವಿಧಾನ, ಉಪಮೆಗಳನ್ನು ಬಳಸಿಕೊಂಡಿರುವ ಬಗೆ, ಪ್ರಕೃತಿ ವರ್ಣನೆ ಅದರಲ್ಲೂ ಇವುಗಳ ಜೊತೆಗೆ ಬೆಸೆದುಕೊಂಡು ಬಂದಿರುವ ತಾತ್ವಿಕ ಹಿನ್ನಲೆ ಇವುಗಳ ಸಹಾಯದಿಂದ ಇದು ಕುವೆಂಪುರವರ ಕೃತಿ ಎಂದು ಗುರುತಿಸಬಹುದು.

ಪ್ರಾರಂಭದಲ್ಲಿ ಸಂಸ್ಕೃತ ಭಾಷೆಯ ಪ್ರಭಾವದಿಂದ ಸಂಸ್ಕೃತ ಭೂಯಿಷ್ಠ ಪದಗಳನ್ನು ಬಳಸಿದ್ದಾರೆ. ಅಂದಿನ ಕಾಲಕ್ಕೆ ಅದು ತಕ್ಕುದಾಗಿತ್ತು. ಚಿತ್ರಾಂಗದಾ ಕಾವ್ಯದ ಆರಂಭದಲ್ಲಿ ಸರಸ್ವತಿ ಪ್ರಾರ್ಥನೆ ಇದೆ.

ಬ್ರಹ್ಮಮಾನಸ ಮಹದ್‌ಗರ್ಭ ಸಂಭವೇ ವಿರಾಟ್
ಪ್ರಭುವೇ ಭವ್ಯಾನಂದ ವಿಭವೆ ಶಾರದೆವರದೆ
ಭಾವ ಚಿಂತಾಖನಿಯೇ ಶಿಖಿವಾಹನೆಯೇ ವಾಣಿ...

ಈ ಪದಗಳನ್ನು ನೋಡಿದಾಗ ಮಹತ್ವವಾದುದನ್ನು ವರ್ಣಿಸಲು ಸಂಸ್ಕೃತ ಭಾಷಾ ಪ್ರಭಾವದಿಂದ ವರ್ಣನೆಗಾಗಲಿ ಪ್ರಾರ್ಥನೆಗಾಗಲಿ ಸಂಸ್ಕೃತ ಬಳಸಿಕೊಂಡಂತಿದೆ. ಕಾರಣ ಅಂದಿನ ಸಂಸ್ಕೃತ ಭಾಷೆಯ ಪ್ರಭಾವ ಸಂಸ್ಕೃತ ಪದಗಳ ಬಳಕೆ ಹೆಚ್ಚಾಗುತ್ತಿದ್ದಂತೆ ಅದರ ಭಾಷೆ ಕಡಿಮೆಯಾಗಿ ಕನ್ನಡಕ್ಕಿಳಿದು ಬಂದಿದೆ. ಕವಿ ಇದು ಸಂಸ್ಕೃತ ಮತ್ತು ಅದು ಕನ್ನಡ ಎಂದು ವಿಭಾಗಿಸಿಲ್ಲ. ಶಬ್ದ ಭಂಡಾರದಲ್ಲಿನ ಎಲ್ಲಾ ಪದಗಳನ್ನು ಸಹಜ ಪ್ರತಿಭೆಯ ಬಲದಿಂದ ತಂದಿಲ್ಲಿ ನಾಟ್ಯವಾಡಿಸಿದ್ದಾರೆ.

ಪದ್ಯಗಳನ್ನು, ಕಾವ್ಯಗಳನ್ನು ಓದುವಾಗ ಒಂದು ರೀತಿಯ ಏಕತಾನತೆ ಕಾಣುತ್ತದೆ. ಅದು ಪದ್ಯವೂ ಒಂದೇ ಓಟದಲ್ಲಿ ಸಿಕ್ಕಿದಾಗ ಉದಾ:

"ಸವಿಗನಸೆ ಸಂಚರಿಸಲೆಳಸಿದುದೊ ಎಂಬೊಲಾ
ಮೃದುಗಮನೆ ಹರಿಣನೇತ್ರೆ ಲತಾಂಗಿ ನಳಿನಮುಖಿ
ಹೂವುಗಳಿಗೆ ಹೂವೆಂಬ ಭ್ರಾಂತಿಯ ಪುಟ್ಟಿಸುತೆ"

ಇಲ್ಲಿ ಮೊದಲ ಮತ್ತು ಮೂರನೆಯ ಚರಣಗಳಲ್ಲಿ ಏಕತಾನತೆ ಕಂಡುಬರುತ್ತದೆ. ಆದರೆ ಎರಡನೆಯ ಸಾಲು ತೊಡರಿದಂತೆ ಆಗುತ್ತದೆ. ರಭಸವಾಗಿ ಹರಿಯುವ ನದಿಗೆ ಅಣೆಕಟ್ಟು ಕಟ್ಟಿದಂತೆ ವಾಕ್ಯಗಳ ಲಾಲಿತ್ಯ ಒಮ್ಮೆ ಏರಿದಂತೆ ಮತ್ತೊಮ್ಮೆ ಇಳಿದಂತೆ ಅನಿಸುತ್ತದೆ.

ಕುವೆಂಪುರವರು ಒಮ್ಮೆ ಅಚ್ಚಕನ್ನಡದ ಹಲವಾರು ಸಾಲುಗಳು ಪುಂಖಾನುಪುಂಖವಾಗಿ ಬಂದರೆ ಇನ್ನೂ ಹಲವು ಚರಣಗಳು ಸಂಪೂರ್ಣವಾಗಿ ಸಂಸ್ಕೃತ ಶಬ್ದಗಳಾಗಿವೆ.

ಉದಾ: "ಕರಿಮುಗಿಲ್ಬಬ್ಬ ದಿಂದ್ಗೊಗೆವ ಮರಿಮಿಂಚೆನಲ್
ತಿರಿಕವಣೆಯ ಪಳಂಚುವ ರತ್ನಶಿಲೆಯಂತೆ"

ಇಲ್ಲಿ 'ರತ್ನಶಿಲೆ'ಎಂಬ ಪದ ಸಂಸ್ಕೃತ ಪದ, ಬಿಟ್ಟರೆ ಉಳಿದುದೆಲ್ಲವು ಕನ್ನಡ ಪದಗಳು.

ಕುವೆಂಪುರವರ ಶೈಲಿಯ ಮತ್ತೊಂದು ವಿಶೇಷವೆಂದರೆ ಶಬ್ದಕ್ರಿಯೆಗಳಿಗೆ ತಕ್ಕ ಪದಗಳ ಆವಾಹನೆ.

ಉದಾ: ನೆಗೆದು ಹಳ್ಳವ ದಾಟಿ ಕೊಳ್ಳ ಕೊಳ್ಳವ ಧುಮುಕಿ
ಮುಳ್ಳು ಹೊದರೊಳು ನುಗ್ಗಿ ಮೈ ಬಟ್ಟೆ ಗೀರುತೆ

ಭಾವ ಭಾಷೆಗಳ ಬಳಕೆ ಮತ್ತೊಂದು ಶೈಲಿ ಇದರಿಂದ ಹೇಳುವ ಪದಗಳ ಶಬ್ದಗಳು ಕಣ್ಣಿನ ಮುಂದೆ ಬಂದು ನಿಂತು ಉತ್ತಮ ಚಕ್ರದ ಕಲ್ಪನೆಯಾಗುತ್ತದೆ. ಆಗ ಹೃದಯ ಸಂವಾದ ಸಮರ್ಪಕವಾಗಿ ಸಾಗುತ್ತದೆ.

ಉದಾ: ಹೂವಿನಲಿ ಬಳ್ಳಿಯಲಿ ತರು ಶರೀರದ ನಾಡಿ
ನಾಡಿಯಲಿ ಖಗಮೃಗಗಳ ಪ್ರಾಣಪಾತ್ರದಲಿ

ಪಾತ್ರಗಳ ವರ್ಣನೆಯಲ್ಲಿಯೂ ಸಹ ಕುವೆಂಪು ತಮ್ಮದೇ ಆದ ಶೈಲಿಯನ್ನು ಉಳಿಸಿಕೊಂಡಿದ್ದಾರೆ. ಆ ಪಾತ್ರಗಳ ಭಾವಹನ್ನು ಹಿಡಿದಿಡುಕೊಡುವಲ್ಲಿ ಬಳಸಿರುವ ಭಾಷಾ ಶೈಲಿಯನ್ನು ಈ ಕೆಳಗಿನಂತೆ ಕಾಣಬಹುದು. ಮನ್ಮಥನಿಂದ ವರ ಪಡೆದ ನಂತರ ಚಿತ್ರಾಂಗದೆ ತನ್ನಾಂಗಗಳನ್ನು ನೋಡಿಕೊಳ್ಳುತ್ತಾ ಇರುವ ಸನ್ನಿವೇಶ ಇಲ್ಲಿ ಆಕೆಯ ಭಾವವನ್ನು ಕವಿ ಈ ಶಬ್ದ ಶೈಲಿಯಲ್ಲಿ ಕೊಟ್ಟಿದ್ದಾರೆ.

"ತನಗೆ ತಾನನ್ಯೆವೋಲ್! ಮೊಗಕೆನ್ನೆ ಕಿವಿ ಕಣ್ಣು
ಹುಬ್ಬು ಚೆಂದುಟಿ ಬಾಯ್ ಫಿಸಳ್ ಮೂಗು ಹಣೆಕುರುಳ್
ಒಂದೊಂದುಮುಂ ನೋಡಿ ನೋಡಿ ಹಿಗ್ಗಿದಳಂತೆ"

ಮತ್ತೊಂದು ಉದಾಹರಣೆ ಚಿತ್ರಾಂಗದೆ ತನ್ನನ್ನು ತಾನು ಸರೋವರದ ತಿಳಿನೀರಿನ ಬಿಂಬದಲ್ಲಿ ನೋಡಿಕೊಳ್ಳುವ ಪ್ರಸಂಗ.

"ಪ್ರಾತಃ ಸರೋವರದ ಸಲೀಲ ದರ್ಪಣದಲ್ಲಿ ತನ್ನ ತಾಂ
ದರ್ಶಿಸುವಂತೆ ಬೆಚ್ಚಿದಳ್ ಪ್ರತಿನೆಳಲ ಸೊಬಗಿಗಚ್ಚರಿವಟ್ಟು

ಮಾತಿಗೆ ಪ್ರತಿವಾದವನ್ನು ಕೊಡುವ ಶೈಲಿಯೂ ಕುವೆಂಪುರವರ ಕಾವ್ಯದಲ್ಲಿದೆ 'ಯತಿಪತಿ'ಥೇ ಬಿಜಯಗೈ' ಎಂದು ಹೇಳಿದ ಚಿತ್ರಾಂಗದೆಗೆ 'ಕುಸುಮಕೋಮಲೆ ನಾನಾ ಯತಿಯಲ್ಲ ಕ್ಷತ್ರಿಯಂ" ಈ ಸಂದರ್ಭದಲ್ಲಿನ ಚಿತ್ರಾಂಗದೆಯು ಅರ್ಜುನನ ಸ್ಥಿತಿಯನ್ನು ಕಂಡು ಸಂತೋಷಿಸಿದಳು. ಅರ್ಥನು ಅವಳ ಪ್ರೇಮಕ್ಕಾಗಿ ಕಡುಬಡವ-

ನಂತಾದನು ಎಂಬ ಮಾತುಗಳಲ್ಲಿ ಈ ಸಂದರ್ಭ ಸ್ವಾರಸ್ಯಕರ ಶೈಲಿಯಲ್ಲಿ ಮೂಡಿಬಂದಿದೆ.

ಪ್ರಕೃತಿ ವರ್ಣನೆಯಲ್ಲಂತೂ ಅವರ ಶೈಲಿಯ ವಿಶಿಷ್ಟತೆಯನ್ನು ನೋಡಬಹುದು. ಅವರು ಪ್ರಕೃತಿಯನ್ನು ಅತಿ ಹತ್ತಿರದಿಂದ ಕಂಡು ಅನುಭವಿಸಿದ್ದರು. ಅವರ ಪ್ರಕೃತಿಯಲ್ಲಿ ಹುಲ್ಲು ಕಡ್ಡಿಯಿಂದ ಹಿಡಿದು ಮಳೆ ಬಿಸಿಲು ಸೂರ್ಯೋದಯವೆಲ್ಲವೂ ವರ್ಣನೆಗೆ ಒಳಪಡುವ ಅಂಶಗಳು. ಪ್ರತಿಯೊಂದು ಜಡವಸ್ತುವೂ ಕುವೆಂಪು ಪ್ರಕೃತಿಯಲ್ಲಿ ಚೇತನವನ್ನು ಪಡೆದುಕೊಳ್ಳುತ್ತದೆ. ಪ್ರಕೃತಿಯನ್ನು ಉಪಮೇ ಮೂಲಕ ವರ್ಣಿಸುವಾಗ ನಮ್ಮ ಮುಂದೆ ಚಿತ್ರಗಳ ಗರಿ ಬಿಚ್ಚಿಕೊಳ್ಳುತ್ತದೆ. ಅವರು ಪ್ರಕೃತಿಯಲ್ಲಿ ಸೂರ್ಯೋದಯದ ವರ್ಣನೆ ಮಾಡುವಾಗ ಜಗತ್ತಿನ ಸಮಸ್ತವೂ ಕಣ್ಣಮುಂದೆ ಬಂದು ನಿಲ್ಲುತ್ತದೆ. ಅಂತಹ ಶಬ್ದಗಳನ್ನು ಬಳಸುತ್ತಾರೆ.

ಉದಾ: ಚೈತ್ರ ಪ್ರಭಾತದಲಿ ಪೂರ್ವ ದಿಕ್ತಟದಲಿ
ಉದಯನದಿ ಬೆಳ್ವೊನ್ನಲ್ ಪ್ರವಹಿಸಿ ಜಗಂಗಳಿಗೆ
.... ಕಂಗೊಳಿಸುತಿರೆ, ಎಂದು ವರ್ಣಿಸುತ್ತಾರೆ.

ಅತಿ ಭೀಕರವಾದ ನಿಶಾವೇಳೆಯನ್ನು ವರ್ಣನೆಗೆ ತರುವಾಗ ಅದರಲ್ಲೂ ಅರಣ್ಯದೊಳಗೆ ಹೆದರಿಕೆಯನ್ನುಂಟು ಮಾಡುವಂತೆ ವರ್ಣನೆ ಮಾಡುತ್ತಾರೆ.

"ನಡುವಗಲ ಮಾರ್ತಾಂಡನುರವಣೆ
....
..................ಸ್ವಚ್ಛಂದದಿಂ ಎಂಬ ಶಬ್ದಗಳನ್ನು ತೋರುತ್ತಾರೆ.

ನಾಟಕೀಯ ಶೈಲಿಯ ಸಂಭಾಷಣೆಯನ್ನು ಕುವೆಂಪುರವರ ಕಾವ್ಯದಲ್ಲಿ ಕಾಣಬಹುದು. ಇಲ್ಲಿ ಬರುವ ಪಾತ್ರಗಳು ಕಡಿಮೆ. ಆದರೂ ಸಂದರ್ಭ ಸಿಕ್ಕಾಗ ಬಂದಿರುವ ಸಂಭಾಷಣೆ ನಾಟಕದ ರೀತಿಯಲ್ಲಿ ಸಾಗಿವೆ.

ಅರ್ಜುನ: "ಆರು ನೀನಲೆ ತರುಣ?
ನುಡಿ ಅಂಜದಿರು ನಾವು ಮುನಿವ ಮುನಿವರಲ್ಲ" ಅದಕ್ಕೆ ಪ್ರತಿಯಾಗಿ

ಚಿತ್ರಾಂಗದೆ; "ಅಂಜುವವರಾವಲ್ಲ, ಅಂಜಿಕೆಯ ಕಂಡಿಲ್ಲ" ಎಂದುತ್ತರಿಸುತ್ತಾಳೆ.

ಮತ್ತೊಂದು ಸಂದರ್ಭ,

ಅರ್ಜುನ: ಬದುಕಿನಲಿ ರಾಣಿಯರೊ ಕದನ ಸಮ್ಮುಖದಲ್ಲಿ
ಬದುಕಿಪ ಗುರಾಣಿಯರೊ! ಸ್ತ್ರೀದಳಂ? ಸೋಜಿಗಂ!

ಬಬ್ರುವಾಹನ: "................................... ಎಲವೆಲವೊ
ನಯರುಚಿ ವಿಹೀನ ಸಂಸ್ಕೃತಿ ಬಾಹಿರ ಕಿರಾತ
ಜಯ ಮದಾಂಧನೆ ಪಾರ್ಥ ಗೌರವವರಿಯೆಯಲಾ"

ಯುದ್ಧ ವರ್ಣನೆಯಲ್ಲಿ ಬಳಸುವ ಶೈಲಿಯನ್ನು ಗಮನಿಸೋಣ. ಇಲ್ಲಿ ಬಳಸುವ ಪ್ರತಿಯೊಂದ ಶಬ್ದವೂ ನಮ್ಮ ಮುಂದೆ ಯುದ್ಧ ನಡೆಯುತ್ತಿದೆ ಏನೋ ಎಂದು ಭಾಸವಾಗುತ್ತದೆ.

ಉದಾ: "ಪ್ರಲಯ ರೌದ್ರಾಭೀಲ ಶೂಲಧರ ಧೂರ್ಜಟಿಯ
ತಾಂಡವ ಸಮಯ ಚಂಡ ಡಮರು ಡಿಂಡಿಮದಂತೆ
ಮೊಳಗಿದುದು ರಣಭೇರಿ! ಮೇರು ಮಾರ್ದನಿ ಬೀರಿ"

ಒಂದೇ ಶಬ್ದ ಹಲವು ಬಾರಿ ಪುನರಾವರ್ತನೆಯಾಗುವುದು ಅದು ಸನ್ನಿವೇಶಕ್ಕೆ ತಕ್ಕಂತೆ ಆ ಪದ ಅರ್ಥದ ಭಾವ ತೀವ್ರತೆಯನ್ನು ಹೆಚ್ಚಿಸುವುದು, ಇಲ್ಲಿ ಮತ್ತೊಂದು ಶೈಲಿಯನ್ನು ಕಾವ್ಯದಲ್ಲಿ ಕಾಣಬಹುದು. ಇಲ್ಲಿ ಪುರಾವರ್ತನೆಗೊಳ್ಳುವ ಶಬ್ದ ಬೇಸರವನ್ನು ತರಿಸುವುದಿಲ್ಲ.

ಉದಾ: ಬೆಳಗಾದುದು ದಿನ, ಪುಲಕಿತ ಕುತೂಹಲದ
ಶುಭದಿನ, ಇನಿಯನೈತರುವ ಅವಧಿಯ ದಿನಂ
ಷಣ್ಮಾಸದ ನಿರೀಕ್ಷಣಂ ಫಲಿಸುವಾ ದಿನಂ
ಚಿತ್ರಾಂಗದೆಯ ಜೀವನೋದ್ವಿಗ್ನ ಜಿಹ್ವೆಯಲಿ
ಬೇವುಬೆಲ್ಲದದಿನಂ: ಬೆಳಗಾದುದಾ ದಿನಂ!

ಕುವೆಂಪುರವರ ಕಾವ್ಯದಲ್ಲಿನ ಮತ್ತೊಂದು ಶೈಲಿ ಎಂದರೆ ಪರ್ವಗಳ ಕೊನೆಯ ಸಾಲುಗಳಲ್ಲಿ ಹಿಡಿದಿಟ್ಟಿರುವ ಧ್ವನಿ. ಇಲ್ಲಿ ಅವರು ತಮ್ಮ ದರ್ಶನವನ್ನು ಕಾಣಿಸುವುದರ ಮೂಲಕ ಅರ್ಥಪೂರ್ಣವಾದ ಭಾವ ಸಂಪತ್ತುಗಳನ್ನು ಹಿಡಿದಿಟ್ಟುಕೊಂಡಿದ್ದಾರೆ.

ಉದಾ: ೧) ....ಸುತ್ತಲುಂ ಮೆರೆದತ್ತು
ಚೈತ್ರೋದಯದ ವಿಪುಲ ಸಂಪತ್ತು ಆದೋಡೇನಾ
ಕನ್ಯೆಯಾತ್ಮವದಿತ್ತನಂತ ದಾರಿದ್ರ್ಯದೋಲ್!

೨) ....ಹಬ್ಬಿತ್ತು ಸ್ವಾಪ್ನಿಕ ವಿಪಿನ
ಚಂದ್ರಿಕಾ ಸಾಂದ್ರಮಾಯೆ! ಹಾಡುತಿರ್ದುದು ತೇನೆ!

೩) ಮೊಗಕೆ ಮೊಗಮೆರ್ದೆಗೆ ಎರ್ದೆಯಿಟ್ಟು ಆಲಿಂಗನದ
ಸುಖ ಲಹರಿಯಲಿ ತೇಲಿ-ಕರಗಿತು ಕಡೆಯರಾತ್ರಿ!

೪) ರೋಷದುಃಖ ದ್ವಂದ್ವದಲಿ ಬೆಂದು ಮಣಿಪುರಕೆ
ಪಿಂತಿರುಗಿ ಬಂದಳತಿಭೀಷಣ ಮನಃ ಸ್ಥಿತಿಯಲಿ!

೫) ದುಃಶಕುನ ಗರ್ಭಿತ ವಿಕೃತ ವಿಕಟರವದಿಂದೆ!

೬) ಮೆರದುದಾ ಮೂಕಶೋಕದ ಶಿಲೆಯ ಸಂಗೀತೆ!

ಮೊದಲ ಪರ್ವದಲ್ಲಿ, ರತಿ ಕಲಾಭ್ಯಾಸವಿಲ್ಲದೆ ಪಾರ್ಥನಿಂದ ತಿರಸ್ಕರಸಲ್ಪಟ್ಟು ದುಃಖಿತಳಾದ ಚಿತ್ರಾಂಗದೆ ತನಗೆ ಸಕಲ ರಾಜಸಂಪತ್ತು ಇದ್ದರೇನು ತನಗೆ ರತಿ ಸೌಂದರ್ಯವಿಲ್ಲದಿದ್ದ ಮೇಲೆ, ಇಲ್ಲಿ ಕವಿ ಕೊಟ್ಟಿರುವ ಧ್ವನಿ ಸೊಗಸಾಗಿದೆ. ಅದನ್ನು ಪ್ರಕೃತಿಯ ಜೊತೆ ಹೋಲಿಸಿರುವ ಉಪಮೆ ಸಹಜವಾಗಿ ಮೂಡಿಬಂದಿದೆ.

ಎರಡನೇ ಪರ್ವದ ಕೊನೆಯಲ್ಲಿ, ಮನ್ಮಥನಿಂದ ವರಪಡೆದು ತನಗಾದ ಮಧುರಾನುಭವದಿಂದ ಎಚ್ಚೆತ್ತ ಚಿತ್ರಾಂಗದೆ ಹೊರಗೆ ನೋಡವಳು. ಅವಳ ಮನಸ್ಸಿನ ಸಂತೋಷವನ್ನು ತೇನೆ ಹಕ್ಕಿಯ ಹಾಡಿಗೆ ಹೋಲಿಸುತ್ತಾರೆ.

ಮೂರನೇ ಪರ್ವದ ಕೊನೆಯಲ್ಲಿ, ಅರ್ಜುನ ಚಿತ್ರಾಂಗದೆಯು ಸುಖ ಲಹರಿಯಲ್ಲಿ ತೇಲುತ್ತಿರಲು ಕರಗಿತು ಕಡೆಯ ರಾತ್ರಿ ಎನ್ನುತ್ತಾರೆ. ಇಲ್ಲಿ ಅರ್ಜುನ ಚಿತ್ರಾಂಗದೆಯರ ಅಗಲಿಕೆಯನ್ನು ಸೂಚಿಸುತ್ತದೆ.

ನಾಲ್ಕನೆ ಪರ್ವದಲ್ಲಿ, ಅರ್ಜುನ ಕೊಟ್ಟ ವಚನ ನೆನೆದು ಕಾದು ಕಾದು ಸಾಕಾಗಿ ರೋಸಿ ದುಃಖದಲ್ಲಿ ಬೆಂದು ಅತಿ ಭೀಷಣ ಮನಸ್ಥಿತಿಯಲಿ ಹಿಂತಿರುಗುವಳು. ಇಲ್ಲಿಯ ದ್ವಂದ್ವತೆ ಅತಿಭೀಷಣತೆಯು ಆಕೆ ಕೈಗೊಳ್ಳುವ ಅಕಾರ್ಯಕ್ಕೆ ಮುನ್ಸೂಚನೆ-ಯಂತಿದೆ.

ಐದನೇ ಪರ್ವದಲ್ಲಿ ಕಡೆಯ ಚರಣ 'ದುಃಶಕುನ ಗರ್ಭಿತ ವಿಕೃತ ವಿಕಟರವದಿಂದೆ!" ಇಲ್ಲಿ ಪ್ರಕೃತಿಯಲ್ಲಿ ಗೋಚರಿಸುವ ಅಪಶಕುನಗಳ ಮೂಲಕ ಮುಂದಾಗುವ ಯುದ್ಧದ ಭೀಕರತೆಯನ್ನು ಈ ಶಬ್ದಗಳ ಮೂಲಕ ಹೇಳಿದ್ದಾರೆ.

ಕಡೆಯ ಪದ್ಯದಲ್ಲಿ ಚಿತ್ರಾಂಗದೆಯ ನೆನಪಿನಲ್ಲಿ ಮಣಿಪುರದ ಜನತೆ ಸ್ಮಾರಕವೊಂದನ್ನು ಕಟ್ಟಿಸುತ್ತಾರೆ. ಈ ಸಂದರ್ಭದ ಕಡೆಯ ವಾಕ್ಯಗಳು ಮೆರೆದುದಾ ಮೂಕ ಶೋಕ ಶಿಲೆಯ ಸಂಗೀತ' ಸಹೃದಯನ ಮನ ಕರಗಿಸುವಂತದ್ದು. ಶಿಲೆಗಳು ಸಂಗೀತವ ಹಾಡಿದಂತೆ ಮೂಕ ಶೋಕದ ಸಂಗೀತವನ್ನು ಹಾಡಿ ಮೆರೆದಿತ್ತು ಆ ಶಿಲೆ.

ಕುವೆಂಪುರವರ ಕಾವ್ಯ ಶೈಲಿಯನ್ನು ಕುರಿತು ಹೇಳಿದಷ್ಟು ಉಳಿದಿರುತ್ತದೆ. ಮಹಾಕವಿಗಳ ವೈಶಿಷ್ಟ್ಯವೇರಿದ ಈ ರೀತಿ ಶಸ್ತ್ರಕ್ರಿಯೆ ಮಾಡಿ ತೋರಿಸುವುದಕ್ಕಿಂತ ಸಹೃದಯರನ್ನು ಓದಿ ತನ್ಮಯರಾಗಲು ಆಹ್ವಾನಿಸುವುದೊಳಿತು. ಕಾವ್ಯ ಒಂದು ಜೀವಂತ ಮೂರ್ತಿ ಆದ್ದರಿಂದಲೇ ಸೌಂದರ್ಯ ದರ್ಶನಕ್ಕೆ ಪೂರ್ಣ ದೃಷ್ಟಿ ಅವಶ್ಯ. ಶೈಲಿಯ ಬಗ್ಗೆ ಹೇಳುಬಹುದಾದ ಸುಂದರ ವಾಕ್ಯದೊಂದಿಗೆ ಕಾವ್ಯದ ಸನ್ನಿಧಿಗೆ ಹೋಗೋಣ " Style is that by which one parsonality moves another" ಕುವೆಂಪು ಶೈಲಿ ಅಂತಹುದು.[೧]

ಕಾವ್ಯದಲ್ಲಿ ಉಪಮಾ ರೂಪಕ ಅಲಂಕಾರಗಳಿಂದ ಶೈಲಿಗೆ ಹೊಸ ಸೊಬಗು ಬಂದಿದೆ. ಮದನನಿಂದ ವರವನ್ನು ಪಡೆದ ಮೇಲೆ "ಬತ್ತಿದ ಸರೋವರಕೆ ಹೊಸ ನೀರು ಬರುವಂತೆ" ಹೊಸ ಆಸೆ ಚಿತ್ರಾಂಗದೆಯ ಹೃದಯದಲ್ಲಿ ಮೂಡಿತು. 'ಕವಿಯ ಮುಗಿಲ್ಗಬ್ಬದಿಂದೊಗೆವ ಮರಿ ಮಿಂಚೆನೆಲ್" ಕನಸಿನ ಜಿಂಕೆಮರಿ ಓಡಿತು. ಇಂಥ ಅನೇಕ ಉಪಮಾನಗಳು ಅರ್ಥಗರ್ಭಿತವಾಗಿ ಭಾವಪೂರ್ಣವಾಗಿ ಮೂಡಿವೆ. ಇವು ಕುವೆಂಪು ಅವರ ಶೈಲಿಗೆ ಕಿರೀಟವಿಟ್ಟಂತೆ.

ಕುವೆಂಪುರವರ ಶೈಲಿಯ ಶಬ್ದಗಳ, ವರ್ಣರಂಜಿತವಾಕ್ಯಗಳ, ಕ್ರಿಯೆಗಳ ಮೂಲಕ ಭಾವನೆಗಳನ್ನು, ಪ್ರಕೃತಿಯನ್ನು, ಪಾತ್ರಗಳನ್ನು ತಮ್ಮದೇ ವಿಶಿಷ್ಟ ರೀತಿಯಲ್ಲಿ ಬಳಸಿದ್ದಾರೆ. ಭಾಷೆ ಭಾವಗಳನ್ನು ಸಂದರ್ಭಕ್ಕೆ ತಕ್ಕಂತೆ ಪದಗಳ ಲಾಲಿತ್ಯವನ್ನು ಸ್ವಾರಸ್ಯಕವಾಗಿ ಬಳಸಿದ್ದಾರೆ ಕವಿ.

ಚಿತ್ರಾಂಗದಾ ಖಂಡಕಾವ್ಯವನ್ನು ಸರಳ ರಗಳೆಯಲ್ಲಿ ಬರೆದಿರುವ ಕವಿ. ಇದನ್ನು 'ಮಹಾಛಂದಸ್ಸು' ಎಂದು ಕರೆದಿದ್ದಾರೆ. ಈ ಮಹಾಛಂದಸ್ಸು ಎಂಬುದು ಪಾಶ್ಚಾತ್ಯದ ಸಾಹಿತ್ಯದ ಪ್ರಭಾವ ಅದರ ವಸ್ತು ಮತ್ತು ರೀತಿಗಳಲ್ಲಿ ಕಂಡುಬರುತ್ತವೆ. ಪಾಶ್ಚಾತ್ಯ ಸಾಹಿತಿಗಳ ಪ್ರಭಾವ ಸಮಕಾಲೀನ ನಮ್ಮ ಕವಿಗಳ ಮೇಲೆ ಸಹಜವಾಗಿ ಉಂಟಾಗಿವೆ. ಕುವೆಂಪುರವರು ಸಹ ತಮ್ಮ ಕಥನ ಕವಿತೆ, ನಾಟಕ, ದೀರ್ಘ ಮತ್ತು ಖಂಡ ಕಾವ್ಯಗಳಲ್ಲಿ ಬ್ಲಾಂಕ್ ವರ್ಸ್ ಅನ್ನು ಪ್ರಯೋಗಿಸಿದ್ದಾರೆ. ಈಗಾಗಲೇ ನಮ್ಮ ಛಂದಸ್ಸಿನಲ್ಲೇ ಇರುವ ಲಲಿತ ರಗಳೆಯನ್ನು ಆರಿಸಿಕೊಂಡು ಕೆಲವು ನಿಯಮಗಳನ್ನು ಜತೆಗೂಡಿಸಿ 'ಸರಳರಗಳೆ'ಯೆಂಬ ಹೊಸ ವಿಧವೊಂದನ್ನು ಸೃಷ್ಟಿಸಿದ್ದಾರೆ. ಮುಂದೆ ಇದೇ ಮಹಾಛಂದಸ್ಸಾಗಿ ಪರಿವರ್ತನೆಯಾಯಿತು.

---

೧. ಎಂ.ರಾಮುಕೃಷ್ಣ, ಶೈಲಿ(ಲೇಖನ), ಚಿತ್ರಾಂಗದಾ ಸಮೀಕ್ಷೆ, ಪು. ೧೯೩

ಚಿತ್ರಾಂಗದಾ ಮತ್ತು ಶ್ರೀರಾಮಾಯಣ ದರ್ಶನಂ ಈ ಮಹಾಕಾವ್ಯಗಳನ್ನು ಮಹಾ ಛಂದಸ್ಸಿನಲ್ಲಿ ರಚಿಸಲಾಗಿದೆ. ಕವಿ ಲಲಿತರಗಳೆಯ ಕೆಲವು ನಿಯಮಗಳನ್ನು ಸಡಿಲಸಿಕೊಂಡಿದ್ದಾರೆ. ಅವೆಂದರೆ

೧) ಲಲಿತ ರಗಳೆಯಲ್ಲಿ ಜೊಡಿಸಾಲುಗಳು ಸಾಮಾನ್ಯ. ಆದರೆ ಕುವೆಂಪು ಅದನ್ನು ಕೈಬಿಟ್ಟಿದ್ದಾರೆ.

೨) ಆದಿ, ಅಂತ್ಯ ಪ್ರಾಸವು ಇರಲೇಬೇಕೆಂಬ ನಿಯಮವಿಲ್ಲ

೩) ಐದು ಮಾತ್ರೆಯ ಗಣಗಳು ಇದ್ದು ಮಾತ್ರಾ ಸಂಖ್ಯೆಯಲ್ಲಿ ಹೆಚ್ಚು ಕಡಿಮೆಗಳೆಂಬುದು ಲಲಿತ ರಗಳೆಯಲ್ಲಿ ಇರುವುದಿಲ್ಲ ಆದರೆ ಮಹಾ ಛಂದಸ್ಸಿನಲ್ಲಿ ಮಾತ್ರಾಸಂಖ್ಯೆಯಲ್ಲಿ ವ್ಯತ್ಯಾಸವಿದೆ.

೪) ಭಾಷೆ ನಡುಗನ್ನಡವಾಗಿದ್ದುದು ಹೊಸಗನ್ನಡವಾಗಿದೆ. ಐದೈದು ಮಾತ್ರೆಯ ಗಣಗಳು ಲಲಿತ ರಗಳೆಯ ನಿಯಮದಂತೆ ಬಂದರೂ ತುಂಬಾ ವಿರಳವಾಗಿ ಒಂದೋ ಎರಡೋ ಮಾತ್ರೆಗಳು ಹೆಚ್ಚಾಗಿ ಕಾಣಿಸಿಕೊಂಡು ಮಹಾಛಂದಸ್ಸು ಎಂದು ಕರೆಸಿಕೊಂಡಿದೆ. ಭಾವದ ಗತಿಯು ನಿರಾತಂಕವಾಗಿಸಾಗಿದೆ. ಈ ಛಂದಸ್ಸಿನ ಕಟ್ಟಡವೋ ಪಂಚ ಮಾತ್ರಕ ಗಣಗಳಿಂದ ಕೂಡಿದ ಘಟಕವಾಗಿದ್ದು ಆ ಗಣ ಘಟಕದಲ್ಲಿ ಕಂಡುಬರುವ ಸ್ವಾತಂತ್ರ್ಯ, ಸಂಯಮ ಮತ್ತು ಕೌಶಲ ಯಶಸ್ಸನ್ನು ಕಂಡಿವೆ.

"ಶ್ರೀ ಕುವೆಂಪು ಅವರಲ್ಲಿ ಹಲವು ಶಕ್ತಿಗಳು ಸಮುಚ್ಚಯಗೊಂಡಿರುವುದರಿಂದ ಸರಳ ರಗಳೆ ತನ್ನ 'ರಗಳೆಯತನ'ವನ್ನು ಬಿಟ್ಟುಕೊಟ್ಟು ಮಹಾ ಛಂದಸ್ಸಾಗಿ ಪರಿವರ್ತಿತವಾಗುವುದು ಸಾಧ್ಯವಾಗಿದೆ. ಆ ಶಕ್ತಿ ಸಮುಚ್ಚಯದ ಮುಖ್ಯಾಂಶಗಳು ಎರಡು ಒಂದು, ದೀಪ್ತಭಾವಸ್ಥಿತಿಯ ಧಾರಣಪಟುತ್ವ: ಇನ್ನೊಂದು ಭವ್ಯ ಶೈಲಿಯ ಉಪಾಸನೆಯಿಂದ ಲಬ್ಧವಾದ ಭಾಷಾ ಪ್ರಭುತ್ವ ನಿತ್ಯ ಜಾಗೃತವಾದ ರಸಸ್ಫೂರ್ತಿ ಅವರ ಕಾವ್ಯರಚನೋತ್ಸಾಹವನ್ನು ಒಂದಿನಿತು ಕೂಡ ಕುಗ್ಗದಂತೆ ನೋಡಿಕೊಳ್ಳುತ್ತಿರುತ್ತವೆ. ಅದು ವಸ್ತು ನಿರ್ಮಾಣ ಕ್ಷಮವೂ ನವೋನವ. ಕಲ್ಪನ ಚತುರವೂ ರಸಲಿಪ್ತವೂ ಆದ ಕವಿಚೇತನದ ಮೂಲಶಕ್ತಿ. ಆ ಕಾರಣ ಕಾವ್ಯ ನಿರ್ವಹಣೆಯಲ್ಲಿ ಶುಷ್ಕತೆ ಜಡತೆಗಳು ಮೈ ದೋರದೆ ಉತ್ಕಟ ಭಾವಶಕ್ತಿಯ ವಿಲಾಸವನ್ನು ನಾವು ಕಾಣುತ್ತೇವೆ. ರಸಾವೇಶದ ರೆಕ್ಕೆಗಳನ್ನು ಬಿಚ್ಚಿ ವಿವಿಧ ವರ್ಣಮಯ ಕಾವ್ಯಾನುಭವದ ವಿಫುಲಾವಕಾಶವನ್ನು ಅನಾಯಾಸವಾಗಿ ಎನ್ನುವಂತೆ ಈಜಿಕೊಂಡು ಹೋಗುತ್ತದೆ ಕವಿ ಶಕ್ತಿ."[೧]

---

೧. ಟಿ.ವಿ.ವೆಂಕಟಾಚಲಶಾಸ್ತ್ರೀ, ಛಂದಸ್ಸು(ಲೇಖನ), ಚಿತ್ರಾಂಗದಾ ಸಮೀಕ್ಷೆ, ಪು. ೧೮೦

ಕಾವ್ಯದಲ್ಲಿ ಛಂದಸ್ಸು ಮೂಲ ಸರಳರಗಳೆಯದು. ಪ್ರಧಾನವಾಗಿ ೫ ಮಾತ್ರೆಯ ೪ ಗಣಗಳ ನಡಿಗೆ ಆದರೆ ೫+೫ ಮಾತ್ರೆಗಳು ಕಾವ್ಯದ ಉದ್ದಕ್ಕೂ ಬಂದರೆ ಬೇಸರವಾಗದೆ ಇರದು. ಇದನ್ನು ಅರಿತ ಕವಿ ಕಾವ್ಯದ ನಡಿಗೆಯಲ್ಲಿ ಷಟ್ಪದಿ ಅನುಷ್ಟುಬ್ ತ್ರಿಪದಿ ಇತ್ಯಾದಿ ಛಂದಸ್ಸುಗಳ ಲಯವನ್ನು ಅಲ್ಲಲ್ಲಿ ತಂದು ಛಂದಸ್ಸಿನಲ್ಲಿ ಹೊಸ ಶಕ್ತಿಯನ್ನು ಸೌಂದರ್ಯವನ್ನು ತೋರಿಸಿದ್ದಾರೆ.

ಉದಾ: "ಇರುಳು ಕಳಿದುದು ಉದಯ ಚೂಡದಲಿ ಮೂಡಿದಳು ಇಲ್ಲಿ ೫ ಮಾತ್ರೆಯ ಗಣಗಳೆ ಮೂಲವಾದರೂ ಗಣಗಳನ್ನು ವಿಭಜಿಸುವಾಗ ಇರುಳು ಕಳೆ/ದುದು ಉದಯ/ಎಂದು ವಿಂಗಡಿಸಲಾಗುವುದಿಲ್ಲ. ಇಲ್ಲಿ ೩+೫+೩ ಮಾತ್ರೆಯ ಗಣಗಳನ್ನಾಗಿ ವಿಂಗಡಿಸಬಹುದು. ಐದು ಮಾತ್ರೆಯ ೨ ಗಣಗಳಿಗೆ ಬದಲಾಗಿ ೩+೫+೩ ಮಾತ್ರೆಯ ಗಣಗಳು ಒಂದು ಹೊಸ ಸೊಬಗು ಬಂದಿವೆ.

ಅಧ್ಯಾಯ – ಐದು

ಮಹೋಪಮೆಗಳು

ಪಾಶ್ಚಾತ್ಯ ಮಹಾಕಾವ್ಯಗಳಲ್ಲಿ ಕಾಣುವ ಮಹೋಪಮೆಗಳನ್ನು ಈ ಕಾವ್ಯದಲ್ಲಿ ಯಶಸ್ವಿಯಾಗಿ ಪ್ರಯೋಗಿಸಿದೆ. ಮಹೋಪಮೆಯ ವಿಷಯವನ್ನು ಇಲ್ಲಿಯೇ ಪ್ರಸ್ತಾಪಿಸುವುದು ಉಚಿತವೆಂದು ತೋರುತ್ತದೆ. "ಪಾಶ್ಚಾತ್ಯ ಮಹಾಕಾವ್ಯಗಳಲ್ಲಿ ಕಾಣಿಸಿಕೊಳ್ಳುವ Homeric simile or Epic simile ಎಂದು ಹೆಸರಿಸಲಾಗುವ ಬೃಹತ್‌ಗಾತ್ರದ ಉಪಮೆಗಳನ್ನು ಕುವೆಂಪು 'ಮಹೋಪಮೆ' ಎಂದು ಕನ್ನಡದಲ್ಲಿ ನಾಮಕರಣ ಮಾಡಿ ಮಹೋಪಮೆಯ ಲಕ್ಷಣವನ್ನೂ ಬರೆದುದಲ್ಲದೆ ತಮ್ಮ ಮಹಾಕಾವ್ಯದಲ್ಲಿ ಅದರ ಲಕ್ಷ್ಯವನ್ನೂ ನಿರ್ಮಿಸಿದ್ದಾರೆ. 'ಮಹೋಪಮೆ ಎಂದರೆ ಮಹತ್ತಾದ ಉಪಮೆ .. ಉಪಮೆ ಮಾಡುವ ಕೆಲಸವನ್ನೇ ಮಾಡುತ್ತದೆ, ಮಹೋಪಮೆ ಇನ್ನೂ ಬೃಹತ್ತಾಗಿ ಇನ್ನೂ ಮಹತ್ತಾಗಿ, ಪರಿಣಾಮಕಾರಿ ರಮಣೀಯತೆಯೆ ಅಗ್ರಗಣ್ಯ ಫಲ ಮತ್ತು ಪರಮಗಮ್ಯ. ಅವಯವಸಾದೃಶ್ಯ ಇರಬಹುದು, ಇಲ್ಲದಿರಬಹುದು. ಸಂಸ್ಕಾರಗಳನ್ನು ಉದ್ದೀಪನಗೊಳಿಸಿ ತನ್ನ ಕಾರ್ಯ ಸಾಧನೆ ಮಾಡಿಕೊಳ್ಳುತ್ತದೆ. ಸಂಸ್ಕಾರಗಳನ್ನು ಹೊಸದಾಗಿ ಸೃಷ್ಟಿಸಲು ಪ್ರಯತ್ನಿಸಿತ್ತದೆ." ಮಹೋಪಮೆಯನ್ನು ಕುರಿತ ಲಕ್ಷಣಗಳನ್ನು ಕುವೆಂಪು ಅವರು ಮಿಲ್ಟನ್, ಡಾಂಟೆ, ಹೋಮರ್ ಅವರ ಮಹಾಕಾವ್ಯಗಳಿಂದ ಆಯ್ದ ಮಹೋಪಮೆಗಳ ನಿದರ್ಶನದ ಮೂಲಕ ಸ್ಪಷ್ಟಪಡಿಸುತ್ತಾರೆ. ಅಷ್ಟೇ ಅಲ್ಲ ನಮ್ಮ ಪ್ರಾಚೀನ ಕನ್ನಡ ಕಾವ್ಯ ಪರಂಪರೆಯಲ್ಲಿಯೂ ಮಹೋಪಮೆಯ ಸಾಧ್ಯತೆಯುಳ್ಳ ಕಾವ್ಯೋಕ್ತಿಗಳು ಇರುವುವು ಎಂಬುದನ್ನು ನಿರ್ದೇಶಿಸುತ್ತಾರೆ. ತಮ್ಮ ಚಿತ್ರಾಂಗದಾ ಹಾಗೂ ಶ್ರೀರಾಮಾಯಣದರ್ಶನಂ ಕಾವ್ಯದಲ್ಲಿ ಕುವೆಂಪು ಅವರೇ ಇಂತಹ ಮಹೋಪಮೆಗಳನ್ನು ಮೊಟ್ಟಮೊದಲಿಗೆ ನಿರ್ಮಿಸಿದ್ದಾರೆ. ಮಹೋಪಮೆ ಮುಖ್ಯವಾಗಿ ಮಹಾಕಾವ್ಯಗಳಲ್ಲಿ ಒಪ್ಪುವಂತೆ ಬೇರೆಯ ಕಾವ್ಯ ಪ್ರಕಾರಗಳಿಗೆ ಒಪ್ಪುವುದಿಲ್ಲ. ಯಾಕೆಂದರೆ 'ಗರುಡಗಂಬವಿರಬೇಕಾದದ್ದು ಗುಡಿಯ ಮುಂದೆ. ಕೊಟ್ಟಿಗೆಯಲ್ಲಿ ಅದನ್ನು ನೆಟ್ಟು ಅದಕ್ಕೆ ದನದ ದಾವಣಿ ಕಟ್ಟಿದರೆ?'"[೧]

ಮಹೋಪಮೆಯ ಲಕ್ಷಣ ವಿವರಗಳನ್ನು ಈ ರೀತಿ ಹೇಳಬಹುದು.

೧) ಭಾವಕೋಶ ಸಂಪತ್ತು:– "ಭಾವಕೋಶವೆಂದರೆ ಪದದ ಅರ್ಥವನ್ನು ಕೇಂದ್ರ ಬಿಂದುವಾಗುಳ್ಳ ರಾಗಾನುಭವಗಳ ನಿಷ್ಕೃಷ್ಟ ತೀರವಿಲ್ಲದ ಅಸ್ಪಷ್ಟ ಪಾರಾವಾರ ಅಥವಾ ಪರಿವೇಷ. ಭಾವಕೋಶವು ವ್ಯಕ್ತಿಯ ಸ್ವಯಂ ಅನುಭವದಿಂದ ಮಾತ್ರ

---

೧. ಜಿ.ಎಸ್.ಶಿವರುದ್ರಪ್ಪ, ಕುವೆಂಪು ಕೃತಿ ವಿಮರ್ಶೆ, ಕು.ಕ.ಅ.ಸಂ, ೨೦೦೬, ಪುಟ. ೯೭೪

ವೃದ್ಧಿಯಾಗುತ್ತದೆ. ಅದು ಎಷ್ಟು ಪುಷ್ಟಿಗೊಂಡರೆ ಅಷ್ಟೂ ಹೆಚ್ಚಾಗುತ್ತದೆ. ರಸಗ್ರಹಣಕಾರಿಯಾದ ಸೂಕ್ಷ್ಮ ಬುದ್ಧಿ ಮತ್ತು ರಸಾನುಭವಕಾರಿಯಾದ ಹೃದಯಾ ಶಕ್ತಿ. ಉಪಮಾ ಅಲಂಕಾರವು ಒಂದು ರಸವತ್ತಾದ ಸಾಧನ, ಈ ಭಾವಕೋಶ ಸಂಪತ್ತಿಗೆ"[೧]

ಕುವೆಂಪು ಅಲಂಕಾರ ಶಾಸ್ತ್ರದಲ್ಲಿ ಇಲ್ಲದ ಕೆಲವು ಉಪಮಾ ಪ್ರಭೇದಗಳನ್ನು ಹೇಳುತ್ತಾರೆ. ಅವೆಂದರೆ

ಅ) ಗುಣೋಪಮೆ

ಆ) ರೂಪೋಪಮೆ,

ಇ) ಭಾವೋಪಮೆ

ಈ) ಮಹೋಪಮೆ. ಇದು ಪಾಶ್ಚಾತ್ಯದಿಂದ ಪಡೆದದ್ದು.

೨) ದೀರ್ಘತೆ ಅಥವಾ ವಿಸ್ತಾರತೆ ಅಥವಾ ಬೃಹತ್ತು (ವಿವರವಾದ ವರ್ಣನೆಯಿಂದ ಕೂಡಿದ)

೩) ರಸವತ್ತಾದುದು

೪) ನವಸೃಷ್ಟಿ

೫) ಮಹತ್ತು (ಎಲ್ಲ ಗುಣಗಳಿಂದ ಘಟಿತವಾದ)

ಶ್ರೀ ಕುವೆಂಪು ಅವರ ಮಹೋಪಮೆಯ ಪ್ರಯೋಗ ಕೌಶಲವು ಚಿತ್ರಾಂಗದಾ ಕಾವ್ಯದಲ್ಲಿ ಪ್ರಥಮ ಪ್ರಯತ್ನವಾದರೂ ಸಾಧಿಸಬೇಕಾದ ಸಿದ್ಧಿಯನ್ನು ಸಾಧಿಸಿವೆ. ಈ ಪ್ರಯತ್ನ ಸಫಲಕಾರಿಯಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ಚಿತ್ರಾಂಗದಾ ಖಂಡ ಕಾವ್ಯಕ್ಕೆ ದೊರಕಿರಬಹುದಾದ ಯಶಸ್ಸಿನ ಬಹುಪಾಲು ಮಹೋಪಮೆಗಳಿಗೆ ಸಲ್ಲಬೇಕು ಇಲ್ಲಿ ಮಹೋಪಮೆಯು ಹುಟ್ಟಿ ವಿಸ್ತಾರವಾಗಿ, ಎತ್ತರವಾಗಿ ಬೆಳೆದು ಸುಂದರ ಹೂವುಗಳಿಂದ ಕಂಗೊಳಿಸುತ್ತಿವೆ. ಈ ಮಹೋಪಮೆಯ ಬಳ್ಳಿ ರಾಮಾಯಣದರ್ಶನಂನಲ್ಲಿ ಇನ್ನೂ ಎತ್ತರಕ್ಕೆ ಹಬ್ಬಿ ಹೂವುಗಳ ಜೊತೆ ಸಿಹಿ ಹಣ್ಣುಗಳನ್ನು ಬಿಟ್ಟಿವೆ. ಇಂದು ಆ ಹೂವು ಹಣ್ಣುಗಳ ಸವಿಅನುಭವವನ್ನು ಪಡೆಯುತ್ತಿರುವವರು ಬಹಳ.

ಕೆಲವೊಂದು ಮಹೋಪಮೆಗಳನ್ನು ಸಂದರ್ಭ ಸಹಿತ ವಿವರಿಸಬಹುದು.

---

೧. ಜಿ.ಎಸ್.ಶಿವರುದ್ರಪ್ಪ, ಕುವೆಂಪು ಕೃತಿ ವಿಮರ್ಶೆ, ಕುಕಸಂ, ೨೦೦೩, ಪುಟ. ೯೭೪

ಕನಸಿನಲಿ ರಾಜಕುಮಾರಿ ಚಿತ್ರಾಂಗದೆ ಜಿಂಕೆಯಮರಿಯೊಂದನ್ನು ಬೆನ್ನಟ್ಟುತ್ತಾಳೆ. ರತ್ನಶಿಲೆಯಂತೆ ಮಿಂಚುವ ಹಾಗೆ ಇದ್ದ ಜಿಂಕೆಯನ್ನೇ ಹಿಡಿದೇ ಹಿಡಿವೆನೆಂಬ ಆತುರದಿ ಅದರ ಹಿಂದೆ ಓಡುತ್ತಾಳೆ. ಇಲ್ಲಿ ಬಳಸಿರುವ ಉಪಮೆ ಆಕೆಯ ಮನಸ್ಥಿತಿಯನ್ನು ಕವಿ ಈ ರೀತಿ ಹೇಳುತ್ತಾರೆ. ಚೈತ್ರ ಪ್ರಭಾತದ ಕಾಲದಲ್ಲಿ ಮಲೆಯ ಹೂವಿನ ತೋಟದಲಿ ಬಣ್ಣದ ಬಣ್ಣದ ಹೂವಿನ ನಡುವೆ ಹೂವಿನಿಂದ ಹೂವಿಗೆ ಮಕರಂದ ಹೀರಿ ಹಾರುವ ಬಣ್ಣದ ಚಿಟ್ಟೆಯನ್ನು ಹಿಡಿಯಲು ಸೋತ ಭಾಲಕಿಯಂತೆ, ರಾಮನಂ ಮೋಹಿಸಿದ ಮಾರೀಚನಂದಲಿ ಸಿಕ್ಕಿತ್ತೇನೋ ಎಂಬಂತೆ ಮಿಂಚಿ ಮಿಂಚಿ ಮರೆಯಾಗುವ ಜಿಂಕೆ ಹೀಗೆ ಚಿತ್ರಾಂಗದಾ ಮನಸ್ಥಿತಿಯನ್ನು ಅರ್ಥೈಸಲು ಕವಿ ಕೊಟ್ಟಿರುವುದು ಧ್ವನಿಪೂರ್ಣ-ವಾದ ಉಪಮೆ. ತನ್ನ ಜೀವನದ ಅರ್ಜುನನ್ನು ಬೆನ್ನಲ್ಲೆ ಬೇಟೆಯಾಡುವ ರೀತಿ.

ಮತ್ತೊಂದು ಸಂದರ್ಭ ಅರ್ಜುನ ತನ್ನ ಪರಿಚಯ ಮಾಡಿಕೊಂಡು ಹೊರಟುಹೋಗುತ್ತಾನೆ. ನಂತರ ಅವನೊಡನೆ ಅದುವರೆಗೂ ನಡೆದುಕೊಂಡ ರೀತಿ ಮತ್ತು ತನ್ನೊಲುಮೆ ಮೂರ್ತಿ ಈತನೇ ಎಂದು ತಿಳಿದ ಕೂಡಲೇ ಚಿತ್ರಾಂಗದೆಯು ನಾಚಿಕೆ ಭಯಗಳಿಂದ ಕುಸಿದು ತನ್ನ ಕಣ್ಣನ್ನು ತಾನೆ ನಂಬಲಾರದೆ ಬೆಪ್ಪುಬೆರಗಾದಳು. ಕೆಚ್ಚೆದೆಯ ವೀರ ಬೇಟೆಗಾರ ಬೇಟೆಗಾಗಿ ಕಾದು ಕಾದು ಸಾಕಾಗಿ ನಿದ್ದೆಯಲ್ಲಿ ಮುಳುಗಿರಲು ಕರಡಿಯೊಂದು ಆತನ ಮುಖದ ಮೇಲೆ ಮುಖವಿಟ್ಟು ನೋಡುತ್ತಿರಲು ಬಿಸಿಯುಸಿರು ಮುಖಕೆ ತಾಗಲು ಬೇಟೆಗಾರ ಎಚ್ಚೆತ್ತು ಕಣ್ಣುಬಿಟ್ಟಾಗ ಆ ಕರಡಿ ಓಡಿ ಹೋಗುತ್ತದೆ. ಕರಡಿ ಹೋದ ಕಡೆ ಮಂಕಾಗಿ ನೋಡುವನು. ಕಿರಾತಕಲಿಯ ಹೋಲಿಕೆಯೊಂದಿಗೆ ಈ ಸಂದರ್ಭದ ಸ್ಥಿತಿಯನ್ನು ಹಾಸ್ಯ ಚಿತ್ರದ ಮೂಲಕ ಸುಂದರ ಮಹೋಪಮೆಯೊಂದಿಗೆ ಕಟ್ಟಿಕೊಟ್ಟಿದ್ದಾರೆ. ಇಲ್ಲಿನ ಹಾಸ್ಯ ಚಿತ್ರ. ಚಿತ್ರಾಂಗದೆಯ ಶೋಚನೀಯ ಸ್ಥಿತಿಯನ್ನು ವಿವರಿಸಲು ಪೋಷಕವಾಗಿ ನಿಲ್ಲುತ್ತದೆ.

ಮಗದೊಂದು ಸಂದರ್ಭ, ಮೊದಲ ದರ್ಶನದಿಂದ ಅವಮಾನಿತಳಾಗಿ ಬಂದ ಚಿತ್ರಾಂಗದೆ ಸರ್ವಾಲಂಕಾರ ಧಾರಿಯಾಗಿ ಅರ್ಜುನನ್ನು ಅರಸಿ ಹೋಗುತ್ತಾಳೆ. ಅವಳ ಹೃದಯವು "ಪ್ರೇಮ ಕಾತರ ಪೂರ್ಣರಾಕೆಯ ಹೃದಯನೌಕೆ! ಕಾಮಿನಿ ಕಿರೀಟಯಿಂ ಇಂತರಸಿ ಅಲೆಯುತಿರೆ", ಅರ್ಜುನ ದರ್ಶನದಿಂದ ಪಡೆದ ಸಂತೋಷವನ್ನು ನಾವಿಕನಿಗೆ ಹೋಲಿಸಿದ್ದಾರೆ. ಅವನನ್ನು ಪಡೆವೆನೆಂಬ ಅವಳ ಮನಸ್ಸನ್ನು,

"ಶರಧಿ ಪರಿವೃತ ಧರಾಮಮಂಡಲವ ಸುತ್ತಿ ತಾಂ
ಪೊಸದೇಶಗಳ ಕಂಡುಹಿಡಿವೆನೆಂಬುಲ್ಲಸದಿ

ಸಾಹಸದ ನಾವಿಕಂ ತನ್ನ ಹಡಗಿನ ಪಡೆಯ
ಕೂಡಿ ತೊಡಗುವನು ಪಾರಾವಾರ ಯಾತ್ರೆಯುಂ"....
(ಸಾಲು ೫೭೦-೫೭೪)

೪) ಅರ್ಜುನನಿಂದ ತಿರಸ್ಕೃತಗೊಂಡು ದುಃಖಿತಳಾದ ಚಿತ್ರಾಂಗದೆ ಮದನನನ್ನು ಪ್ರಾರ್ಥಿಸುತ್ತಾಳೆ. ಸ್ವಪ್ನದರ್ಶನದಲ್ಲಿ 'ಮಧುರ ಮದನ ಮೂರ್ತಿ' ಮೂರ್ತಿಯನ್ನು ಕಂಡು ಕಾರ್ಮುಗಿಲನ್ನು ಕಂಡು ಉಬ್ಬಿ ಕುಣಿವ ನವಿಲಿನ ರೀತಿ ಅವಳ ಹೃದಯ ನಲಿದಿತ್ತು.

"ನೀರೊಡಲ ಕಾರ್ಮುಗಿಲು ಕರ್ರಗ್ಗಬ್ಬುತ ಹಬ್ಬಿ
ತೇಲಿ ಬರೆ ಕಂಡದಂ ಸೋಗೆ ನವಿಲುನ್ಮದದಿ
ಗರಗಣ್ಗಳಂ ಕೆದರುತಟ್ಟಹಾಸದಿ ಕೇಗಿ,
ವರ್ಷಾಗಮನಕುರ್ಬಿ ನರ್ತನಂಗೈವಂತೆ
ಚಿತ್ರಾಂಗದೆಯ ಹೃದಯ ನಲದುಲಿದು ನರ್ತಿಸಿತು"
(ಸಾಲು ೭೧೬-೭೨೦)

ಇಲ್ಲಿ ಅವಳಿಗಾದ ಸಂತೋಷವನ್ನು ಕವಿ ನವಿಲಿನ ಹೋಲಿಕೆಯ ಮಹೋಪಮೆಯನ್ನು ಕೊಟ್ಟಿದ್ದಾರೆ.

೫) ಚಿತ್ರಾಂಗದೆಯ ಸೌಂದರ್ಯಕ್ಕೆ ಬಗೆಸ್ಸೋತ ಪಾರ್ಥನನ್ನು ಕುರಿತು ಚಿತ್ರಾಂಗದೆ

"............................... ನೀನಾ ಮಿಗವಸುಳೆಯೋಲೆ
ಕುರುಡುಮೋಹದೊಳದ್ದಿ ಮರುಳ್ಗೊಂಡು ನುಗ್ಗುತಿಹೆ!
ನಶ್ವರದ ಪೂಜೆಗೆ ಚಿರಂತನವ ಬಲಿಗೊಡಲು
ಹವಣಿಸುತ್ತಿಹೆ ಪ್ರೇಮಮಲ್ತು; ಕಾಮದ ಚಿಹ್ನೆ
ಇದು ಕಣಾ!................" (ಸಾಲು ೧೦೭೩-೭೯)

ಎಂದು ಹೇಳುತ್ತಾಳೆ.

ಈ ಸಂದರ್ಭದಲ್ಲಿ ಭೀಷ್ಮಪಣಿ ನೇತ್ರ ಸೂತ್ರದಿ ನೆಳೆಯುತಿರೆ ಬಿಗಿದು ಜಿಂಕೆಮರಿ ಬಿಡಿಸಿಕೊಳ್ಳಲು ಹವಣಿಸಿ ಬಿಡಿಸಿಕೊಳ್ಳಲಾರದೆಯೆ ಸಿಲುಕಿತು. ಇಲ್ಲಿ ಬಳಸಿರುವ ಮಹೋ ಉಪಮೆ ಚಿಕ್ಕದಾದರೂ ಕವಿ ಬಳಸಿರುವ ರೀತಿ ವಿಶಿಷ್ಟವಾಗಿದೆ.

೬) ಅರ್ಜುನನು ಚಿತ್ರಾಂಗದೆಯನ್ನು ಅಗಲಿದಾಗ ಚಿತ್ರಾಂಗದೆಗೆ ಉಂಟಾದ ವಿರಹ ವೇದನೆಯನ್ನು ಗಂಡು ನವಿಲನ್ನು ಕಳೆದುಕೊಂಡ ಹಣ್ಣು ನವಿಲಿನ ಸ್ಥಿತಿಯಂತೆ ಅವಳ

ಮನಃಸ್ಥಿತಿಯ ವಿವರ ಕೊಡುತ್ತಾರೆ. ಇಲ್ಲಿ ಚಿತ್ರಾಂಗದೆಯ ವಿರಹವು ಕಾಮದಿಂದ ಪ್ರೇಮಕ್ಕೆ ತಿರುಗಿದ ದರ್ಶನವನ್ನು ಕಾಣಿಸುತ್ತಾರೆ.

೭) ಇಲ್ಲಿ ಬಳಸುವ ಮಹೋಪಮೆ ಪ್ರಕೃತಿಯ ವ್ಯಾಪಾರವನ್ನು ಚಿತ್ರಾಂಗದೆಯ ಮನಃಸ್ಥಿತಿಗೆ ಹೋಲಿಸಿದ್ದಾರೆ. ಇಲ್ಲಿ ಪ್ರತಿ ಪ್ರಾಣಿ, ಪಕ್ಷಿ ಸಂಕುಲಗಳ ವಿರಹ ವೇದನೆಯಲ್ಲಿ ಅವುಗಳನ್ನು ವರ್ತನೆಗಳನ್ನು ಚಿತ್ರಾಂಗದೆಗೆ ಹೋಲಿಸಿದ್ದಾರೆ.

೮) ಈ ಸನ್ನಿವೇಶದಲ್ಲಿ ಬಳಕೆಗೊಂಡಿರುವ ಮಹೋಪಮೆ ಸುಂದರವಾದ, ಭಾವನಾತ್ಮಕವಾದ ಗೀತೆ. ತನ್ನನ್ನು ಅಗಲಿ ಹೋದ ಇನಿಯನನ್ನು ನೆನೆದು ಚಿತ್ರಾಂಗದೆ ಉನ್ಮತ್ತೆಯಂತೆ ತನ್ನ ಕೈಯ ಬೆರಳಿನ ಉಂಗುರವನ್ನು ನೋಡಿಕೊಂಡಳು. ಈ ಸಂದರ್ಭದ ಮಹೋಪಮೆ ಬೃಹತ್ತಾಗಿ ಮೂಡಿಬಂದಿದೆ.

ಕೃತ್ತಿಕೆಯ
ತಿಂಗಳಲಿ, ವಿಪಿನಪರಿವೃತ ವಿಪುಲವಿಸ್ತರದ
ಗದ್ದೆಕೋಗಿನಲಿ, ಹಳದಿಯ ಪೈರು ಬೆಳೆಬೆಳೆದು
ಹಬ್ಬಿಯಿರೆ ಶಾಲಿವನ ವನಧಿಯ ಸುವಿಸ್ತೀರ್ಣ
ಲಂಬಾಯಮಾನ ಸೈಕತವೇಲೆಯನು ಹೋಲಿ,
....
ಬರದೆ! ಪ್ರಾಣಪ್ರಿಯಾಣ್ಮನಂ
ಕಾಣದಿರೆ ಪೊತ್ತುವುದು ಹರಣದುರಿ. ಸುತ್ತುತಿರೆ
ಹುಚ್ಚುಗಿಚ್ಚೇರಿ ಕರೆಕರೆದು ಪತಿವಿಹಗನಂ
ಶೋಕಾತಿಭಾರದಿಂದಾ ಕೇಕಿ, ಮುಚ್ಚುವುದು
ಮೆಲ್ಲನೆ ಭುವನಲಿಪ್ಸು ಬದ್ಧಭ್ರುಕುಟಿ ರಾತ್ರಿ!

(ಸಾಲು ೧೪೩೦–೧೫೦೭)

ಈ ಸಂದರ್ಭದಲ್ಲಿ ಚಿತ್ರಾಂಗದೆ ಕೈಯ ಬೆರಳಿನ ಉಂಗುರವ ನೋಡಿಕೊಳ್ಳುವ ಪ್ರಸಂಗದಲ್ಲಿ ಕವಿ ರಾಮಾಯಣದ ರಾಮಸೀತೆಯ ಅಗಲಿಕೆಯ ಸಂದರ್ಭವನ್ನು ನೆನಪಿಸುತ್ತಾರೆ.

ಅರ್ಜುನನು ಕೊಟ್ಟ ವಚನದಂತೆ ಷಟ್ ಮಾಸಗಳು ಕಳೆದು ಚಿತ್ರಾಂಗದೆ ಅರ್ಜುನನ್ನು ಕಾಣಲು ಹೋಗುವಾಗ ಕೊಟ್ಟಿರುವ ಉಪಮೆ ಚಿಕ್ಕದಾದರೂ ಸೊಗಸಾಗಿದ್ದೆ. ಜಡವೇಷ ಮೇಘರತಿ ಸಹ್ಯಗಿರಿ ಮನ್ಮಥನನ್ನು ನೆನೆದು ಆಲಂಗಿಸುವ ಸುಂದರ ಕಲ್ಪನೆ ಚಿತ್ರಣವಿದೆ.

"ಆಧುನಿಕ ಕನ್ನಡ ಕವಿಕುಲೋತ್ತುಂಗರಾದ ಶ್ರೀ ಕುವೆಂಪು ಅವರು ತಮ್ಮ ಸಂಪದ್ಯುಕ್ತವಾದ ಅನುಭವ ಭಂಡಾರದ ನೆರವಿನಿಂದ ಹಲವಾರು ಶ್ರೇಷ್ಠ ಮಹೋಪಮೆಗಳನ್ನು ನಿರ್ಮಾಣ ಮಾಡಿದ್ದಾರೆ. ಈ ಮಹೋಪಮೆಗಳ ಮಾದರಿ ಪಾಶ್ಚಾತ್ಯರದ್ದೇ ಹೊರತು ಭಾವ ಸಾಮಗ್ರಿಯೆಲ್ಲ ಕವಿಗಳದೇ. ಕವಿಯ ಈ ಹಿರಿಯ ಕಾಣಿಕೆಗಾಗಿ ಕನ್ನಡ ಲೋಕದ ಕೃತಜ್ಞತೆ ಅವರಿಗೆ ಸಲ್ಲುತ್ತದೆ."[೧]

ಮಾಲೆ ಮಾಲೆಯಾಗಿ ಇರುವ ಮಹೋಪಮೆಯು ಕನ್ನಡದಲ್ಲಿ ಮೊತ್ತ ಮೊದಲ ಸಾಹಸ. ಪ್ರಕೃತಿ ವರ್ಣನೆಯು ಜೊತೆ ಜೊತೆ ಸಾಗಿ ನಮ್ಮ ಮುಂದೆ ಕಣ್ಣಿಗೆ ಕಟ್ಟುತ್ತದೆ.

ಜಿಂಕೆಯನ್ನು ಬೇಟೆಯಾಡುವಾಗ ಬಂದಿರುವ ಉಪಮೆ ಕರಡಿಯನ್ನೊ ಕಳೆದುಕೊಂಡ ಕಿರಾತನ ಪ್ರಸಂಗದ ಹೋಲಿಕೆ. ನೌಕಾಸ್ವಾಮಿಯ ಪ್ರಸಂಗದ ವರ್ಣನೆ.

ಹೆಣ್ಣು ಮಯೂರದ ವಿರಹದ ವರ್ಣನೆ, ಆರು ತಿಂಗಳು ಕಳೆದು ಅರ್ಜುನನ್ನು ಕಾಣಲು ಹೋದಾಗ ಜಡವೇಷ ಮೇಷರತಿಯು ಹೋಲಿಕೆಗಳು ಇಲ್ಲಿ ರಸವತ್ತಾದ ಶೃಂಗಾರಪೂರ್ಣ ಮಹೋಪಮೆಗಳಾಗಿವೆ.

---

೧. ಎಂ.ಪಿ.ಸೀತಾರಾಮಯ್ಯ, ಮಹೋಪಮೆಗಳು(ಲೇಖನ) ಚಿತ್ರಾಂಗದ ಸಮೀಕ್ಷೆ, ಪು. ೧೫೬

ಅಧ್ಯಾಯ – ಆರು

ಕಾವ್ಯದಲ್ಲಿ ಪ್ರಕೃತಿ ಮತ್ತು ದರ್ಶನ

ಒಂದು ರೀತಿಯಲ್ಲಿ 'ಚಿತ್ರಾಂಗದಾ' ಪ್ರಕೃತಿ ಕಾವ್ಯ ಇಲ್ಲಿ ಬರುವ ಎಲ್ಲಾ ವರ್ಣನೆ, ಮಹೋಪಮೆಗಳು ಕಥೆಯ ನೆಲಗಟ್ಟು, ಪಾತ್ರಗಳ ರಂಗ ಎಲ್ಲವೂ ಪ್ರಕೃತಿಯ ಚಿತ್ರಗಳೇ ಚಿತ್ರಾಂಗದಾ ಕಥೆಯು ಪ್ರಕೃತಿಯ ವೇದಿಕೆಯಲ್ಲಿ ನಿಂತಿದೆ. ಮಾನವ ಸ್ವಭಾವದ ರೂಪುರೇಷೆಗಳು ಪ್ರಕೃತಿಯ ಒಡಲಲ್ಲಿ ಅಡಗಿವೆ ಎಂಬಂತೆ ಕವಿ ಚಿತ್ರಿಸಿದ್ದಾರೆ. ಪ್ರಕೃತಿಯಲ್ಲಿನ ದೈನಂದಿನ ವ್ಯಾಪಾರದ ಜೊತೆಗೆ ಮನೋವ್ಯಾಪಾರವನ್ನು ಸಮೀಕರಿಸಿದ್ದಾರೆ. ಮನುಷ್ಯನ ದುಃಖ ದುಮ್ಮಾನಗಳಿಗೆ, ಸಂತೋಷ ಆಶ್ಚರ್ಯಗಳಿಗೆ ಪ್ರತಿಬಿಂಬದಂತೆ ಪ್ರಕೃತಿ. ಪ್ರಕೃತಿಯಲ್ಲಿನ ಆಗುಹೋಗುಗಳನ್ನು ಅತಿಸೂಕ್ಷ್ಮ ರೀತಿಯಲ್ಲಿ ಗಮನಿಸಿ ಅವುಗಳಿಗೆ ತಕ್ಕರೀತಿಯ ಸಂವೇದನೆಯನ್ನು ಪ್ರಕೃತಿಯಿಂದಲೇ ಪಡೆಯುವ ಪ್ರಯತ್ನಮಾಡಿದ್ದಾರೆ. ಮಲೆನಾಡಿನಂತಹ ರಮ್ಯ ಪ್ರಕೃತಿ ತಾಣದಲ್ಲಿ ಬೆಳೆದ ಪ್ರಕೃತಿಯ ಕಂದ ಕುವೆಂಪು. ಪ್ರಕೃತಿಯಲ್ಲಿನ ಗರಿಕೆಯಿಂದ ಹಿಡಿದು ಗಗನದ ಮಳೆ, ಮೋಡಗಳ ಬೆಳವಣಿಗೆ, ಬದಲಾವಣೆಗಳನ್ನು ಅತೀ ಹತ್ತಿರದಲ್ಲೇ ಕಂಡುಕೊಂಡಿದ್ದರು. ಅಷ್ಟೇ ಚೆನ್ನಾಗಿ ಮಾನವ ಸ್ವಭಾವಗಳನ್ನು ಅಭ್ಯಾಸಿಸಿದವರು.

ಪ್ರಾರಂಭದಲ್ಲಿ ಸರಸ್ವತಿಯನ್ನು ಸ್ಮರಿಸಿ, ಸ್ತುತಿಸಿದ ಕವಿ ವಾಲ್ಮೀಕಿ, ವ್ಯಾಸ, ಪಂಪ, ರನ್ನರನ್ನು ನೆನೆಯುತ್ತಾ ಕೃಪೆಯನ್ನು ಬೇಡುತ್ತಾ ವೀಣಾವಾಣಿಯನ್ನು ಪ್ರಾರ್ಥಿಸುತ್ತಾರೆ. ಈ ವೀಣಾಪಾಣಿಯೊಂದಿಗೆ ಕವಿಯ ಸಂಭಾಷಣೆ ಪ್ರಾರಂಭವಾಗುತ್ತದೆ. ಇಲ್ಲಿಂದ ಕವಿಯ ಪಯಣ ಪ್ರಕೃತಿಯ ಜೊತೆಜೊತೆಗೆ ಸಾಗುತ್ತದೆ. ಈ ಅಧ್ಯಾಯದಲ್ಲಿ ಪ್ರಕೃತಿಯ ವರ್ಣನೆಯನ್ನು ಕಥಾ ಸಂದರ್ಭದ ಮೂಲಕ ವಿವರಿಸಲಾಗಿದೆ. ಜೊತೆಗೆ ಕವಿಯ ದರ್ಶನವನ್ನು ಕಾಣಬಹುದು.

ಸಂಜೆಯ ವೇಳೆಯಲಿ ಸೂರ್ಯನ ಅಸ್ತಂಗತವನ್ನು, ಕತ್ತಲೆಯ ಆಗಮನವನ್ನು,

"ದಿವಸಮಣಿ ಪಶ್ಚಿಮಾಂಬುದಿಗ್ಗಿಳಿಯೆ ಕತ್ತಲೆಯ
ಪಾಳೆಯಂ ಬೀಡುಬಿಡೆ ಧಾತ್ರಿಯಂ; ಮೈದೋರೆ
ತಾರೆಗಳ್ ನಿಶೆಯ ವಸನದ ಕಾಂತಿಕುಸುಮಗಳ್" (ಸಾಲು ೩೪–೩೬)

ಎಂದು ಬಣ್ಣಿಸುತ್ತಾರೆ. ಮೃಗಯಾ ವಿನೋದಕ್ಕಾಗಿ ಅರಣ್ಯಕ್ಕೆ ಬಂದಿದ್ದ ರಾಜಕುಮಾರಿ ಚಿತ್ರಾಂಗದೆ ಬಲು ಬಳಲಿದಂತಾಗಿ ದೇಗುಲದ ಬಳಿಯಿದ್ದ ಕೊಳದಲಿ ಮಿಂದು ಹಣ್ಣು–ಹಂಪಲು ತಿಂದು ಕಠಿಣ ಶಯ್ಯೆಯ ಮೇಳೆ ಪವಡಿಸುತ್ತಾಳೆ. ನಿದ್ರೆಯಲ್ಲಿ ಕವಿ

ದರ್ಶನದ ಮೂಲಕ ಸ್ವಪ್ನವನ್ನು ಕಾಣಿಸುತ್ತಾರೆ. ನಿರ್ಜನವಾದ ಅರಣ್ಯದಲ್ಲಿ ಭೀಕರತೆಯನ್ನು ಪ್ರತಿಬಿಂಬಿಸುವಂತೆ ಚಿತ್ರಿಸುತ್ತಾರೆ:

"ಬಲೋನ್ನತ ದೈತ್ಯ ಬಾಹುಗಳಂತೆ, ಸುತ್ತಲುಂ
ಭೀಮ ಭೀಷಣ ಕುಟಿಲ ಜಟಿಲ ವಿನ್ಯಾಸದಿಂ
ಶಾಖಾ ಮಹಾ ಶಾಖೆಗಳ ಬೀಸಿ ಸ್ವಚ್ಛಂದದಿಂ
ಬೆಳೆದಿರ್ದುವಲ್ಲಿ ಭೋಜೇಶ ಕುಲಕೀರ್ತಿಗಳ್
ಲಕ್ಷೋಪಲಕ್ಷವಾಗಿ. ಬಳ್ಳಿದಿಂಡುಗಳಲ್ಲಿ
ನಿಮಿರಿದವು ಜೋಲುತಿಹ ಹೆಬ್ಬಾವುಗಳ ಹೋಲಿ
ದೀರ್ಘ ವಕ್ರಾಕಾರದಲಿ" (ಸಾಲು ೫೯-೬೫)

ಕೈಯಲ್ಲಿ ಬಿಲ್ಲನ್ನು ಹಿಡಿದು ಬೇಟೆಗಾಗಿ ಅರಣ್ಯದಲ್ಲಿ ತಿರುಗುತ್ತಿರೆ ಕಂಡಿತೊಂದು ಹರಿಣ ಶಿಶು. ಇದನ್ನು ನೋಯಿಸದೆ ಹಿಡಿವೆನೆಂಬ ಆತುರದಿಂದ ಹಿಂಬಾಲಿಸುವಳು ಚಿತ್ರಾಂಗದೆ.

ಸೂರ್ಯೋದಯ ಕಾಲದಲ್ಲಿ ಅರಳುವ ಹೂವಿನ ಮಕರಂದವನ್ನು ಹೀರಲು ಬಂದ ಬಣ್ಣದ ಚಿಟ್ಟೆಯನ್ನು ಕಂಡು ಬಾಲೆಯೊಬ್ಬಳು ಮನಸೋತು ಹಿಡಿಯಲು ಹೋಗಿ ಸೋತು ಬೆನ್ನಟ್ಟುತ್ತಾಳೆ. ಇಲ್ಲಿ ಚಿತ್ರಾಂಗದೆಯು ಸಹ ಜಿಂಕೆಯನ್ನು ಅದೇ ರೀತಿ ಹಿಂಬಾಲಿಸುವಳು. ಚಿತ್ರಾಂಗದೆಯ ಜೀವನದ ಭವಿಷ್ಯವನ್ನು ಈ ಒಂದು ಸುಂದರ ಮಹೋಪಮೆಯ ಮೂಲಕ ತೋರಿಸಿದ್ದಾರೆ. ಜಿಂಕೆಯು ಇನ್ನೇನು ಕೈಗೆ ಸಿಗುತ್ತದೆ ಎನ್ನುವಷ್ಟು ಹತ್ತಿರದಲ್ಲಿ ಕಾಣಿಸಿಕೊಂಡು ಓಡುತ್ತದೆ. ಕೊಲ್ಲುವನೆಂದು ಗುರಿ ಇಟ್ಟು ನೋಡುವಳು ಆಶ್ಚರ್ಯ.

"ಅದ್ಭುತ ಪವಾಡಮಂ ಸಂದರ್ಶಿಸಿದ ವೀರ ವಿಜ್ಞಾನಿಯೋಲ್ ಬೆಪ್ಪು ಬೆರಗಾಗಿ"

ಕನಸಿನಲ್ಲಿಯೆ ಕಂಪಿಸುತ್ತಾ

ಮೇಘಾದ್ರಿ ಮುದ್ರಿತ ಸುನೀಲ ಜಲ ಕಲ್ಲೋಲ
ಸಮ್ಮಥನ ಸಂಜಾತ ಮೌಕ್ತಿಕಾಫೇನಮಯ
ತಾಂಡವ ತರಂಗಟ್ಟಹಾಸ ಸಂಭ್ರಮಮತ್ತ
ಕಾಸಾರಮೆಸೆದತ್ತನಂತ ವಿಸ್ತಾರ ಭವ್ಯಂ!
ವ್ಯೋಮ ದರ್ಪಣವೊಡೆದು ಮುರಿವೊಂದು ತಿರೆಗಿಳಿಯುತೇಂ
ದ್ರವಮಾಯ್ತೆ?"

ಬೃಹತ್ ವಿಸ್ತಾರವಾದ ಸರೋವರವನ್ನು ಕವಿ ಆಕೆಯ ಕನಸಿನಲಿ ಕಾಣಿಸುವುದರ ಜೊತೆಗೆ ಅದರ ಸೊಗಸನ್ನು ವರ್ಣಿಸುತ್ತಾರೆ. ಮತ್ತೊಂದು ಅದ್ಭುತವನ್ನು ಕಂಡಳೆಂಬಂತೆ ದ್ವೀಪ ಮಧ್ಯದ ಪುಷ್ಪರಂಗದೊಳ್ ಸುಂದರ ಮೋಹನಾಕೃತಿಯ ರುಕ್ಮರಾಗ ತಪಸ್ನಾತಮಾನವ ಮೂರ್ತಿಯನ್ನು ಕಾಣುತ್ತಾಳೆ. ಮೊದಲ ಬಾರಿಗೆ ತಾನು ಹೆಣ್ಣೆಂಬ ಲಜ್ಜೆಯ ಲಹರಿ ಹರಿಯಿತು ಆಕೆಯ ಹೃದಯದಲಿ.

ಸ್ವಪ್ನ ದರ್ಶನವಾದ ಬಳಿಕ ಕಾಡಿನಲ್ಲಿ ನಸುಕಿನ ವೇಳೆ ನಡೆದಾಡುತ್ತಿರಲು ಸೂರ್ಯೋದಯವಾಗುತ್ತದೆ." ರಂಜಿಸಿತು ಕಣ್ಗೆ

ಬಂಧುರ ದಿನೋದಯದ ದಿವ್ಯಪ್ರಭಾತ ಕಾವ್ಯಂ!
ಪಸುರ್ಗಡಲ ಪೆರ್ದೆರೆಗಳೋಲ್ ಸ್ಪರ್ದೆಯೊಳೆದ್ದು
ವೀಚಿ ವೀಚಿಗಳಾಗಿ ಪ್ರಾಚೀ ದಿಗಂತಮಂ
ತಬ್ಬಿ, ನಾನಾದೆಸೆಗೆ ಹಬ್ಬಿದ ವನಶ್ರೇಣಿ ತಾಂ
ಚಿತ್ರಾಂಗದೆಯ ಮನಕೆ ಚೆಲ್ವಾಯ್ತು."

ಸೂರ್ಯೋದಯದಿಂದ ಪ್ರಕೃತಿಯ ಪ್ರತಿ ಜಡ-ಚೈತನ್ಯಗಳು ತಮ್ಮ ತಮ್ಮ ಕೆಲಸ ಕಾರ್ಯಗಳನ್ನಾರಂಭಿಸಿದವು.

"ಕುಸುಮ ತತಿ ನಲಿಯೆ ನರುಗಂಪಿನಿಂ
ಮತ್ತ ಮಧುಪಂಗಳುಂ ಮತ್ತೆ ಭ್ರಮರಂಗಳಂ
ಹಿಂಡು ಹಿಂಡಾಗಿ ಹೂವೊಡಲ್ಲು ಹೊಲದೂಳಿಯಾಳ್
ಹೊರಳಿ ಹೊಂಬೊಗರೇರಿ, ಮಲರು ಮಲರಿಗೆ ಹಾರಿ
ಮಕರಂದ ಭಿಕ್ಷೆಯಂ ಬೇಡಿ ಕುಟಜಂಗಳಲಿ
ಝೇಂಕರಿಸಿದುವು ನಿತ್ಯಯಾತ್ರೆಯೋಂಕಾರಮಂ!"

ಇಂತಹ ಸುಂದರ ಪ್ರಕೃತಿಯನ್ನು ಆಸ್ವಾದಿಸುತ್ತಾ ನಡೆದಳು ಮಣಿಪುರದರಸಿ. ದೂರದಲ್ಲಿ ಕುಳಿತಿದ್ದ ಧ್ಯಾನಸ್ಥನಾಗಿದ್ದ ಮಾನವ ಪ್ರತಿಚ್ಛಾಯೆಯನ್ನು ಕಂಡಳು. ತಾನು ಕನಸಿನಲಿ ಕಂಡ ಮೋಹನಾಕೃತಿ ಇವನೇ ಎಂದು ಆಶ್ಚರ್ಯಪಡುತ್ತಾಳೆ. ಮತ್ತೊಮ್ಮೆ ನೆನಪಿಸಿತ್ತು ಆಕೆ ಹೆಣ್ಣೆಂಬುದನ್ನು ಆ ರೂಪ!

ಆ ಸುಂದರ ಮೋಹನ ಮೂರ್ತಿ ತನ್ನ ಒಲುಮೆಯ ಆರಾಧನಾ ಮೂರ್ತಿ ಅರ್ಜುನ ಎಂದು ತಿಳಿದ ಕೂಡಲೇ ಆಕೆಯ ಮನಸ್ಥಿತಿಯನ್ನು ಅವಳಲ್ಲಾಗುತ್ತಿರುವ ತುಮುಲಗಳನ್ನು ಕವಿ ಸಶಕ್ತವಾಗಿ ಹಿಡಿದಿಡುತ್ತಾರೆ. ಅವಳಿಗೆ ಗೊತ್ತಿಲ್ಲದ ರೀತಿಯಲ್ಲಿ

ಬಯಕೆಗಳು ಮೊಳಕೆಯೊಡೆಯುತ್ತವೆ. ಈ ಅನುಭವಗಳನ್ನು ಮಹೋಪಮೆಯ ಮೂಲಕ ಅರ್ಥೈಸುತ್ತಾರೆ.

"ಕೆಚ್ಚೆದೆಯ ಬೇಂಟೆಯ ಕಿರಾತಕಲಿ
ಪಶ್ಚಿಮಾದ್ರಿಯ ರುದ್ರಸಾಂದ್ರ ಭೀಷಣರುಂದ್ರ
ಘೋರ ವಿಪಿನಾಂತರದ ನಿಮ್ನೋನ್ನತಂಗಳಲಿ
ಬೆಳಗಿನಿಂ ಬೈಗನ್ನೆವರಮಲೆದು, ಕಾಣದಿರೆ
. . . .
ತೃಪ್ತ ಜಠರದ ಭೀಮ ಭೀಷ್ಮ ಭಲ್ಲುಕವೊಂದು
ಚರಿಸುತ್ತೈತಂದು ಕಾಣುತೆ ನರನಗಾತ್ರಮಂ
. . . .
ಮೊಗದ ಮೇಲಿದೆ ಹಿರಿಯ ಕೆರ್ರನೆ ಕರಡಿಮೋರೆ
....
ಬೇಡನಾದರೊ ತೆರೆದ ಕಣ್ಗಳ ಮುಚ್ಚಲಾರದೆ
ಕೂಗಲಾರದ ಚಲಿಸಲಾರದತಿ ವಿಸ್ಮಯದಿ
ಕಂಗೆಟ್ಟು ಮರವಟ್ಟು ಬಡಿದುದ್ದೆನೆ ಬಲ್‌ಗರು
ಮಿಳ್ಮಿಳನೆ ನೋಡುವನ್ ಕರಡಿ ಹೋದತ್ತಕಡೆ
ಮಂಕು ಮರುಳಾಗಿ!

ಹಾಗೆ ನೋಡುತ್ತಾ ನಿಲ್ಲುತ್ತಾಳೆ ಚಿತ್ರಾಂಗದೆ.

ಮನುಷ್ಯನ ಬಯಕೆ ಭಂಡಾರಗಳಿಗೆ ಪ್ರಕೃತಿಯ ಪ್ರತಿ ವಸ್ತುಗಳು ಉದಾಹರಣೆಯಾಗುತ್ತದೆ. ಚೈತ್ರೋದಯದ ವಿಫುಲ ಸಂಪತ್ತು ಸುತ್ತಲೂ ಇದ್ದರೇನು ಚಿತ್ರಾಂಗದೆಯ ಮನಸ್ಸು ಮಾತ್ರ ದಾರಿದ್ರ್ಯದಿಂದ ಕೂಡಿತ್ತು. ಇಲ್ಲಿ ಅವಳಿಗೆ ಸಕಲ ರಾಜ ಮರ್ಯಾದೆಗಳು ಏನೆಲ್ಲಾ ಇದ್ದರೂ ಅಂತಹ ಸುಂದರ ಪ್ರಾತಃ ಕಾಲದ ರಮಣೀಯತೆಗಳಾವುವು ಉಪಯೋಗಕ್ಕೆ ಬರಲಿಲ್ಲ. ಈ ಸಾಲುಗಳಲ್ಲಿ ಕವಿ ಆ ಪರ್ವದ ಧ್ವನಿಯನ್ನು ತುಂಬಿದ್ದಾರೆ.

ಸಂಜೆಯ ಬಿಸಿಲು ಆ ಬಿಸಿಲಿನ ಬಣ್ಣವು ಕೆಂಪಾಗಿ ರಂಗನ್ನೆರಚಿ ರಜನಿಗೆ ಆಹ್ವಾನವನ್ನಿತ್ತಿತ್ತು. ಅರ್ಜುನನ ಮನ ಗೆಲ್ಲಲು ಸರ್ವಾಲಂಕಾರ ಭೂಷಿತೆಯಾಗಿ, ಪ್ರಣಯ ಭಿಕ್ಷೆಯನ್ನು ಬೇಡುತ್ತಾಳೆ. ಅವಳನ್ನು ತಿರಸ್ಕರಿಸಿದ ಅರ್ಜುನ 'ನಿನ್ನೊಳಗೇನಿದೆ? ಎನಗೆಣೆಯಾಗಿ' ಎಂದು ಮೂದಲಿಸಿ ಬಿಡುತ್ತಾನೆ. ಪ್ರಣಯ ಭಂಗವಾಗಿ,

ಅವಮಾನಿತಳಾಗಿ ಮದನಹರನ ಕುರಿತು ಒಂದು ದಿನದಲ್ಲಿಯೇ ಯುಗದ ತಪವನ್ನಾಚರಿಸಿ ಮದನ ದರ್ಶನ ಪಡೆಯುತ್ತಾಳೆ.

'ಮುಗಿಲಿಗೆ ಮಳೆ ಬಿಲ್ಲೆಸೆಯುವಂತೆ', ಪ್ರತ್ಯಕ್ಷವಾಯಿತು ಮದನಮೂರ್ತಿ. ಅವಳ ಮನದಿಂಗಿತವನರಿತು ಒಂದು ತಿಂಗಳ ಸೌಂದರ್ಯವನ್ನು ದಯಪಾಲಿಸಿ, ರತಿ ಕಲಾಭ್ಯಾಸ ವಿದ್ಯೆಯನ್ನು ಧಾರೆಯೆರೆಯುತ್ತಾನೆ ಮದನ. ಮನ್ಮಥನ ಆಗಮನವನ್ನು ಕಾಡಿನ ದುಂಬಿ ನವಿಲುಗಳಿಗೆ ಹೋಲಿಸುತ್ತಾರೆ. "ಯೌವನದ ಕಂಗಳಿಗೆ ಮನ್ಮಥನು ಅಪರಿಚತನೆ? ಬಂಡುಣಿಗೆ ತಾವರೆಯ ಹೃದಯ ಕಳಶದ ಜೇನಿನೌತಣಕೆ ಕರೆಬೇಕೆ? ನೀರೊಡಲ ಕಾರ್ಮುಗಿಲ ಕಂಡ ಸೋಗೆ ನವಿಲಂತೆ ಹರ್ಷಚಿತ್ತವಾಯಿತು ಚಿತ್ರಾಂಗದೆಯ ಹೃದಯ. ಅವನ ವರವ ಕೇಳಿ ಆನಂದಿತಳಾದಳು. "ಬತ್ತಿದ ಸರೋವರಕೆ ಹೊಸ ನೀರು ಬರುವಂತೆ" ಕತ್ತಲೆಯ ಕಗ್ಗವಿಗೆ ನೇಸರುದಯಿಸುವಂತೆ.

ಅಂಗಜಮೋಹ ದೀಪಶಿಖಿಯಾಗಿ ವರ ಪಡೆದ ಚಿತ್ರಾಂಗದೆಯ ಮನ ತೇನೆ ಹಕ್ಕಿಯ ಹಾಗೆ ಹಾಡುತ್ತಿತ್ತು ಹೊರಗೆ ಬೆಳ್ದಿಂಗಳು ತುಂಬಿತ್ತು. ಈ ಸಾಲುಗಳು ಸಹ ಪರ್ವದ ಭಾವ ಸಂಪತ್ತನ್ನು ಹೊತ್ತು ಕೊಂಡಿದೆ.

ಚಿತ್ರೆ ಸರ್ವಾಂಗ ಸುಂದರಿಯಾಗಿ ಕಾಡಿನ ರಾಣಿ ತಾನೆಂಬಂತೆ ಮೆರೆದಳು ಪ್ರಕೃತಿಯ ಸೌಂದರ್ಯವನ್ನೆಲ್ಲಾ ತನ್ನಲ್ಲಿ ಅಡಗಿಸಿಟ್ಟುಕೊಂಡಿರುವಳೋ ಎಂಬಂತೆ ಮಿಂಚುತ್ತಿದ್ದಳು ಅವಳ ಸೌಂದರ್ಯವು ಲತೆಗಳಿಗೆ ಲತೆಯಂತೆ ಬಳಕುತ್ತಿತ್ತು.

ತಂಬೆಲರಿಗೆಲರಾಗಿ ಸುಳಿಯುತ್ತೆ, ವಸಂತಋತು ಧರೆಗಿಳಿದು ಬಂದು ಕಾನನವೆಲ್ಲಾ ಮಧು ಮಹೋತ್ಸವದ ತೆರದಿಂದ ರಾರಾಜಿಸುತ್ತದೆ. ಸರೋವರದ ಸಲೀಲ ದರ್ಪಣದಲ್ಲಿ ತನ್ನ ತಾನು ಕಂಡು, ತನ್ನ ರೂಪಕ್ಕೆ ತಾನೇ ಆಶ್ಚರ್ಯಪಟ್ಟುಕೊಂಡಳು. ಮುಂದೆ ಅರ್ಜುನನು ಅವಳ ಸೌಂದರ್ಯಕ್ಕೆ ಮನಸೋತು ಪ್ರೇಮಭಿಕ್ಷೆ ಕಾಡಿ ಬೇಡಿ ಪಡೆದನು ಇಬ್ಬರು ಪ್ರಣಯ ಸಮಾಗಮದಲ್ಲಿ ಒಂದಾಗುವರು. ಪ್ರಕೃತಿಯಲ್ಲಿ ಅವರಿಬ್ಬರೊಂದಾಗಿ ಬೆರೆತುಹೋದರು. ಬನವೆಲ್ಲಾ ರಾಸಲೀಲೆಯ ತಾಣವಾಯಿತು.

ಹೀಗೆ ಇವರಿಬ್ಬರ ಪ್ರೇಮ-ಕಾಮದಾಟಗಳು ಮಾಸದವರೆಗೆ ಸಮಯದ ಅರಿವಿಲ್ಲದೆ ಸಾಗುತ್ತಿರಲು, ಒಂದು ದಿನ ದಿವಸದವಸಾನದ ಸಮಯ ಚಿತ್ರಾಂಗದೆ ಹೂಗಳನ್ನು ಕಿತ್ತು ಪಾರ್ಥನಿಗೆ ಅಲಂಕರಿಸುತ್ತಾ, ಹಣ್ಣುಗಳನ್ನು ತಿನ್ನಿಸುತ್ತಿರುವಾಗ ಕ್ರೀಡೆಯಾಸಕ್ತಿಯಾಗಿ ಚಿತ್ರೆ, ಕುತ್ಕಿಲಚೂಡದ ತುಂಗ ಶೃಂಗರಂಗಕ್ಕೇರಿದಳು. ರಮಣೀಯವಾದ ದೃಶ್ಯ ವೈಶಾಲ್ಯವನ್ನು ಪಾರ್ಥನಿಗೆ ತೋರುವಳು. ಪರ್ವತದ

ವಿಸ್ತಾರತೆ ಗಗನದವರೆಗೂ ಹಬ್ಬಿವೆಯೇನೊ ಎಂಬಂತೆ ಇದ್ದ ಆ ದೃಶ್ಯವನ್ನು ತೋರುವಳು ಅದಕಂಡು ಅರ್ಜುನ ಖಿನ್ನನಾಗುವನು.

ಚಿತ್ರಾಂಗದೆಯು ಅರ್ಜುನನು ಅಗಲುವ ಸಮಯ ಅತಿಭಾರ ಹೃದಯದಲಿ ಇರ್ವರು ಪ್ರಣಯ ಪ್ರಯತ್ನದಿಂದ ಕಂಬನಿ ಸೂಸಿದರು. ಆ ಆಲಿಂಗನದಿ ಸುಖಲಹರಿಯಲಿ ತೇಲಿದರು. ಕರಗಿತು ಕಡೆಯ ರಾತ್ರಿ.

ಮುಂದಿನ ವಿರಹಕ್ಕೆ ಕೊಟ್ಟಿರುವ ಧ್ವನಿ, ಅರ್ಥ ಪರಂಪರೆಯನ್ನು ಈ ವಾಕ್ಯಗಳು ಸಾರುತ್ತಿವೆ, ಮೂರನೆಯ ಪರ್ವದ ಈ ಕಡೆಯ ಸಾಲುಗಳು.

ಅರ್ಜುನನು ತನ್ನನ್ನಗಲಿ ಹೋಗಿರುವುದನ್ನು ಕಂಡು ಚಿತ್ರಾಂಗದೆಯು ವಿರಹದಲಿ ನೊಂದ ಹಕ್ಕಿಯಂತಾದಳು ಅದುವರೆಗೂ ಅವಳ ಹೃದಯ ಪ್ರಕೃತಿ ಹಚ್ಚ ಹಸಿರಾಗಿದ್ದು, ವಿರಹದಿಂದಾಗಿ ಬೆಂದ ಬೆಂಗಾಡಾಯಿತು. ಪ್ರಕೃತಿಯ ವೈಭವವು ಬೇಕಿರಲಿಲ್ಲ ಅವಳಿಗೆ. ಇನಿಯನಿಲ್ಲದಿರೆ ಶೂನ್ಯವಾಯಿತು ಜಗತ್ತು.

ಅದುವರೆಗಿನ ಚಿತ್ರಾಂಗದೆಯ ಕಾಮ ಪ್ರೇಮವಾಗಿ ಪರಿವರ್ತಿತವಾಯಿತು. ಕೃತ್ತಿಕೆಯ ತಿಂಗಳಲ್ಲಿ ನವಿಲು ಕಲ್ಲಿನ ಕಾಡಿನ ಬಳಿ ಗಂಡು ನವಿಲನ್ನು ಕಳೆದುಕೊಂಡ ಹೆಣ್ಣು ನವಿಲಿನ ಶೋಕಾತಿಭಾರದ ರಸ ಚಿತ್ರವನ್ನು ಮುಂದಿಟ್ಟು ಅದನ್ನು ಚಿತ್ರಾಂಗದೆಗೆ ಹೋಲಿಸುವ ಮೂಲಕ ಅವಳ ಹೃದಯ ದರ್ಶನ ಮಾಡಿಸುತ್ತಾರೆ. ಸುದೀರ್ಘವಾದ ಮಹೋಪಮೆಯು ವಿರಹದ ತಾಪವನ್ನು ಮನದಟ್ಟು ಮಾಡುವಲ್ಲಿ ಪ್ರಕೃತಿಯ ಪ್ರತಿ ಪ್ರಾಣಿ ಪಕ್ಷಿ ಸಂಕುಲಗಳ ವಿರಹ ವೇದನಗೆಳನ್ನು ವರ್ಣರಂಜಿತ ಚಿತ್ರಗಳನ್ನು ಬಿಂಬಿಸುತ್ತವೆ. ನೊಂದು ಬೆಂದು ಚಿತ್ರ ತಿಂಗಳಾರಕೆ ಬರುವ ಪಾರ್ಥನ ವಚನವ ನೆನೆದು ಮನದಲ್ಲಿ ಆತನನ್ನು ಪೂಜಿಸುತ್ತಾ, ಆತ ಕೊಟ್ಟ ಆರು ತಿಂಗಳ ಗಡುವು ಮುಗಿದು ಪಾರ್ಥ ಬಾರದೆ ಇದ್ದದು ಅವಳನ್ನು ಮತ್ತಷ್ಟು ದುಃಖಕ್ಕೀಡುಮಾಡಿತು.

ಮೇಘರತಿ ಸಹ್ಯಗಿರಿ ಮನ್ಮಥನ ಅರಸುವ ಚಿತ್ರಾಂಗದೆ ಪಾರ್ಥನಿಗೆ ಕಾದರೂ ಪ್ರಯೋಜನವಾಗದೆ ಹಿಂತಿರುಗುವಳು ನಿರಾಸೆಯಲಿ ಅತಿಭೀಷಣ ಮನಸ್ಥಿತಿಯಲ್ಲಿ ತೆರಳುತ್ತಾಳೆ. ಈ ಸಂದರ್ಭದ ವಾಕ್ಯಗಳು ಅವಳಲ್ಲಿ ಬದುಕು-ಸಾವುಗಳ ದ್ವಂದ್ವತೆಯನ್ನು ಬಿಂಬಿಸುತ್ತವೆ.

ಉರುಳುರುಳು, ಸಾಗರವೆ, ಮುನ್ನೀರಿನಾಗರವೆ,
ತೆರೆತೋಳ್ಗಳಿಂದೆಯಾಲಿಂಗಿಸಿ ಧರಿತ್ರಿಯಂ
ವರುಷ ಶತಗತವಾದರಳಿಯದನುರಾಗದಲಿ
ಹರುಷ ಭೋಗದಲಿ! ಸುರನೀಲ ಸುಂಧರಮೂರ್ತಿ

ಗಂಭೀರ ವಿಸ್ತಾರ ಸುಗಭೀರ ನೀರನಿಧಿ,
ನೇಸರಿಂ ಕೆಲಸಿಡಿದು ನಮ್ಮೀಧರಾದೇವಿ

....
ಅಲ್ಲಿಯಾತ್ಮದ ಬಯಕೆವಳ್ಳಿ ದಾಂಗುಡಿ ದಾಂಟಿ
ಕಾಲದೇಶಾಂಡವನೊಡೆದು ಮಿಾಂಟಿ ಬ್ರಹ್ಮಮಂ
ತಬ್ಬುವುದನಂತತೆಯಾ ನೀಂಟಿ!

ಈ ಸಾಲುಗಳಲ್ಲಿ ಪ್ರಕೃತಿಯ ಜೊತೆ ಮಾನವ ಸೂಕ್ಷ್ಮ ಭಾವನೆಗಳನ್ನು ಓಡಿದು ತೋರಿದ್ದಾರೆ. ಚಿತ್ರಾಂಗದೆ ಆತ್ಮಹತ್ಯೆಯ ಮನಸ್ಸು ಮಾಡುತ್ತಾಳೆ. ಆ ಪ್ರಕಾರ ಕಾರ್ಯ ಮಗ್ನಳಾಗುತ್ತಾಳೆ.

ಮುಂದಿನ ಜೀವನವ ನೆನೆದು, ತನ್ನಿನಿಯನ ಬಾರದಿದ್ದುದ್ದಕ್ಕೆ ಬೇಸರಿಸಿ ಸಾವಿಗಣಿಯಾಗುತ್ತಾಳೆ.

"ನಿರ್ಜನ ನಿಶಾವೇಳೆಯಲಿ ಚಿತ್ರೆ
ಕ್ಷಾತ್ರಕುಲರಮಣಿ ಬಾಳ್ಗೊಲೆಗುಜ್ಜುಗಂಗೈದು
ಕಡಲತಡಿಗೈತಂದು ಮಣಿದು ಧಿಕ್ಪಾಲರಿಗೆ,
ಗಗನದೇವರ್ಕಳಿಗೆ ಪವನಂಗೆ ಸಾಗರಗೆ
ಶಶಿತಾರೆಗಳಿಗೆ ಭಿನ್ನೈಸಿದಳ್;"

ಸಾವಿಗೆ ಆಹುತಿಯಾಗಲು ಬಯಸಿ ಹೊರಟ ಚಿತ್ರಾಂಗದೆಗೆ ಸಮುದ್ರ ಮೂರುತಿಯು ಗೋಚರವಾಗುತ್ತದೆ. ಇಲ್ಲಿ ಕವಿ ಮತ್ತೊಮ್ಮೆ ತಮ್ಮ ದರ್ಶನವನ್ನು ಇಲ್ಲಿ ತೋರಿದ್ದಾರೆ. ಸಮುದ್ರ ಮೂರುತಿಯ ಉಪದೇಶದ ಮೂಲಕ ಬದುಕಿನ ಪ್ರೀತಿಯ ಮಾತುಗಳನ್ನಾಡಿಸುತ್ತಾರೆ. ಜೀವನ ತತ್ತ್ವಗಳನ್ನು ಆಡಿಸಿದ್ದಾರೆ.

"ಸ್ಸಾಹಸಂಗೈಯದಿರ್; ನಡೆ ಮಗಳೆ, ನಿನ್ನೆಡೆಗೆ
ಕಡಲೊಡಲ ಕುಳಿರಿನಿಂ ಬೆಚ್ಚನೆಯ ಮನೆಮಡಿಲೆ
ಲೇಸು ಕಣ್ಣೆದುರಿರ್ಪ ನೋವು ತಾನದೆಸೂಗಂ
ಕಾಣದಿಹ ಸಾವಿಗಿಂ ಮೇಣ್ ಮರ್ದಲ್ತು ಕೊಲೆ
ವಿರಹಕ್ಕೆ. ನಿನಗಹುದು ನಿನ್ನಿನಿಯ ದರ್ಶನಂ
ನೀನು ಕೊನೆಯುಸಿರೆಳೆವ ಮೊದಲ್. ನಿನ್ನೊಡಲಿನೊಳ್
ಬಳೆಯುತಿದೆ, ಸ್ವಾತಿಹನಿ ಮುತ್ತಾಗಿ ಬೆಳೆವಂತೆವೋಲ್
ನಿಮ್ಮ ಬೇಟದ ಸಾರಸರ್ವಸ್ವ ಶಿಶು!" (ಸಾಲು ೧೮೨೨-೨೯)

ಬದುಕಿನ ಬಗ್ಗೆ ಭರವಸೆಯನ್ನಿಟ್ಟುಕೊಂಡು ಗಂಡು ಮಗುವಿಗೆ ಜನ್ಮವೆತ್ತು ರಾಜಮಾತೆಯಾಗಿ ಬಾಳುತ್ತಾಳೆ. ಮುಂದೆ ಮಹಾಭಾರತ ಯುದ್ಧಮುಗಿದು, ಅಶ್ವಮೇಧ ಯಾಗದ ನಿಮಿತ್ತ ಅರ್ಜುನನ ಆಗಮನ. ಕುದುರೆಯ ಕಟ್ಟಿ ಹಾಕಿ ಅರ್ಜುನನೊಡನೆ ಕಾದಾಡುವ ಉತ್ಸಾಹ ಪುತ್ರನಿಗೆ. ಮಗನನ್ನು ಸಮಾಧಾನ ಮಾಡಿ ಕುದುರೆಯನ್ನು ಬಿಟ್ಟುಬಿಡುವಂತೆ ಹೇಳಿ ತನ್ನ ಒಲುಮೆಯ ಅರ್ಜುನನನ್ನು ತನ್ನ ಗುರುವೆಂದು ಹೇಳುತ್ತಾಳೆ. ಯುದ್ಧ ಸಲ್ಲದೆಂದು ಬುದ್ಧಿ ಹೇಳುತ್ತಾಳೆ.

ಏನು ಹೇಳಿದರೇನು ಚಿತ್ರಾಂಗದೆ ಏನು ಆಗಬಾರದೆಂದು ಬಯಸಿದ್ದಳೋ ಅದು ನಡೆದು ಹೋಗಿತ್ತು. ಅದೇ ತಂದೆ ಮಕ್ಕಳ ಘೋರ ಕಾಳಗ.

"ಪ್ರಳಯ ರೌದ್ರಭೀಲ ಶೂಲದರ ಧೂರ್ಜಟಿಯ
ತಾಂಡವ ಸಮಯ ಚಂಡ ಡಮರುಡಿರಿಡಿಮದಂತೆ
ಮೊಳಗಿದುದ ರಣಭೇರಿ ....
....
ತೊಡಗಿದಳ ನರ್ತನತೆ ಕರ್ಕಶ ಕದನಕಾಳಿ:"

ಅದ್ಭುತ ಶಬ್ದಗಳ ಮೂಲಕ ವಾಕ್ಯಗಳನ್ನು ನಾಟ್ಯವಾಡಿಸುವುದರ ಜೊತೆಗೆ, ರಣರಂಗದ ಭೀಕರ ಪ್ರಕೃತಿ ಚಿತ್ರವನ್ನು ಮನಸ್ಸಿಗೆ ಕಟ್ಟಿಕೊಡುತ್ತಾರೆ. ಇಲ್ಲಿ ಬಂದಿರುವ ಶಬ್ದಚಿತ್ರಗಳು ಯುದ್ಧರಂಗದ ವರ್ಣನೆಯನ್ನು ಮಾಡಲು ಸಹಕಾರಿಯಾಗಿವೆ. ಇವುಗಳ ನೋಡುತ್ತಲೆ ಕಲ್ಪನೆಯ ಮೂಲಕವೇ ರಣರಂಗದ ಚಿತ್ರವನ್ನು ಕಾಣಬಹುದು.

ಚಿತ್ರಾಂಗದೆ ಧ್ಯಾನಸ್ಥೆಯಾಗಿರಲು ದಿವ್ಯಾಕೃತಿಯ ರುಚಿರಮೂರ್ತಿಯು ಕಾಣಿಸಿಕೊಂಡು

"ನಡೆ, ಹೋಗು ಬೇಗದಲಿ;
ತಳುವಿದರೆಬೀಳುವುದ ಪಾರ್ಥನ ಕಳೇಬರ
ರಣಧರೆಗೆ; ತೊಡಗಿದ ನಿಶಾಯುದ್ಧಘೋರಾತ್ರಿ
ನಿನ್ನ ಹೃದಯದ ಬಲವನ್ನಿತ್ತು ರಣದೇವತೆಗೆ
ಕೆರಳ್ದ ಬಿದಿಯಂ ತಣಿಸಿ, ಪತಿಸುತರ್ಗಿರ್ವರ್ಗೆ
ನೀಂ ಶುಭಂಕರಿಯಾಗು ನಡೆ, ಹೋಗು ಬೇಗದಲಿ!"

ಎಂದು ಎಚ್ಚರಿಸುತ್ತದೆ. ಈ ರುಚಿರ ಮೂರ್ತಿಯ ಸಂದರ್ಶನವನ್ನು ಮಾಡಿಸಿದ ಕವಿ ಚಿತ್ರಾಂಗದೆಯರಿಗೆ ಏನುಮಾಡಬೇಕೆಂದು ತಿಳಿಸಿದ್ದಾರೆ. ಸುದ್ದಿ ತಿಳಿದ ಚಿತ್ರಾಂಗದೆ

ಪತಿ-ಸುತರನ್ನುಳಿಸಲು ರಣರಂಗಕ್ಕೆ ಶ್ವೇತ ಪತಾಕೆಯನ್ನು ಹಿಡಿದು ಸಾಗುತ್ತಾಳೆ. ಅಲ್ಲಿ ರಣರಂಗದಲ್ಲಿ ಯುದ್ಧ ನಡೆಯುತ್ತಿರುವ ಪ್ರಸಂಗವನ್ನು ವಿವರಿಸುತ್ತಾರೆ.

"...............ಯಮಾಲಯಂ
ತಾನೆನಲ್ಕೆ ಸೆದುದಾ ರಣಭೂಮಿ! ಅಸ್ತ್ರಾಗ್ನಿ
ಪೊತ್ತಿದ ಸಹಸ್ರಾರು ದೀವಿಗೆ ಸೊಡರ್ಮಾಲೆಗಳ
ನರ್ತಿಸುವ ತಿಮಿರ ಕಾಳಿಯ ರಸನೆಗಳ ಹೋಲಿ
ರಂಜಿಸುವಲ್ಲಿ!!

ಶರಬಾಣಗಳ ನಡುವೆ ನುಗ್ಗಿದ ಚಿತ್ರಾಂಗದೆ ಬಾಣಗಳು ಸರಸರನೆ ದೇಹವನ್ನು ಬಂದು ಬಿಗಿದಪ್ಪಿಕೊಂಡವು.

ಪ್ರೇಮದ ಅಮೃತ ತತ್ವದಂತಿದ್ದ ಚಿತ್ರಾಂಗದೆಯ ಸ್ಮಾರಕವೊಂದು ನಿರ್ಮಾಣ-ವಾಯಿತು.

"ತಿರೆಯೊಲ್ಮೆ
ಸಿರವೆತ್ತಿ ಸಗ್ಗನೀರಿಗೆ ಮುತ್ತು ಕೊಡುವಂತೆವೋಲ್
ಮಣಿಪುರದ ಮನದ ಮಹಾಸ್ಮೃತಿ ಸುಧಾ ಶಿವರೂಪಿತಾಂ
ಮೆರೆದುದಾ ಮೂಕ ಶೋಕದ ಶಿಲೆಯ ಸಂಗೀತೆ!

ಪ್ರಕೃತಿಯ ಜೊತೆಜೊತೆಯಲ್ಲಿ ಹುಟ್ಟಿ ಬೆಳೆದು ಅದರೊಡನೆ ತನ್ನ ಒಡನಾಟವನ್ನು ಇಟ್ಟುಕೊಂಡು ತಾನೇ ಪ್ರಕೃತಿಯೋ, ಪ್ರಕೃತಿಯೇ ತಾನೋ ಎಂಬಂತೆ ಜೀವನ ನಡೆಸಿದ ಚಿತ್ರ ಅದರಲ್ಲಿ ಕಣಕಣವಾಗಿ ಬೆರತು ಹೋಗಿದ್ದಳು. ಕೊನೆಗೆ ಮೂಕಸಾಕ್ಷಿಯಾಗಿ ಶಿಲೆಯಾಗಿ ನಿಂತಳು.

ಹೀಗೆ ಪ್ರಕೃತಿಯನ್ನು ಚಿತ್ರಾಂಗದಾ ಕಾವ್ಯದಲ್ಲಿ ಚಿತ್ರಾಂಗದಾ ಪಾತ್ರದ ಮೂಲಕ ಪ್ರಕೃತಿಯ ಪ್ರತಿ ವಸ್ತು, ಸನ್ನಿವೇಶಗಳನ್ನು ಮನೋಜ್ಞವಾಗಿ ವರ್ಣಿಸಲು, ಮನೋಭೂಮಿಕೆಯ ಮೇಲೆ ಸಾದರಪಡಿಸಲು ಪ್ರಕೃತಿಯನ್ನು ವೇದಿಕೆಯನ್ನಾಗಿ ಮಾಡಿಕೊಂಡಿದ್ದಾರೆ. ಇಲ್ಲಿ ಚಿತ್ರಾಂಗದೆ ನೆಪವಷ್ಟೆ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ಪ್ರಕೃತಿಯ ಪಾತ್ರ ಬಹಳ ಮಹತ್ವದ್ದು. ಆದರೆ ಈ ಕಾವ್ಯದಲ್ಲಿ ಕವಿ ತಾನು ಕಂಡುಂಡ ಅನುಭವಗಳನ್ನು ಪ್ರಕೃತಿಯ ಮೂಲಕ ಹಂಚಿಕೊಂಡಿದ್ದಾರೆ. ಮಲೆನಾಡಿನಂತಹ ಸುಂದರ ಪ್ರಕೃತಿ ತಾಣದಲ್ಲಿ ಬೆಳೆದ ಕುವೆಂಪುರವರಿಗೆ ಪ್ರಕೃತಿಯೆಂದರೆ ಬಲುಪ್ರೀತಿ. ಈ ಪ್ರೀತಿಯನ್ನು ತಮ್ಮ ಸಾಹಿತ್ಯದಲ್ಲೂ ಕರೆತಂದು ಜನಪ್ರಿಯರಾಗಿದ್ದಾರೆ.

ಕಾವ್ಯದಲ್ಲಿ ಬರುವ ಸೂರ್ಯೋದಯ, ಸೂರ್ಯಾಸ್ತಮ ಕಾಸಾರವರ್ಣನೆ, ದ್ವೀಪ, ಮಣಲೂರು ಮುಂತಾದ ವರ್ಣನೆಗಲು ಸಹಜವಾಗಿ ಮೂಡಿಬಂದು ಕಾವ್ಯದ ಸೌಂದರ್ಯವನ್ನು ಹೆಚ್ಚಿಸಿವೆ.

ಅಧ್ಯಾಯ – ಏಳು

ತೌಲನಿಕ ಅಧ್ಯಯನ

ಕುವೆಂಪು ಚಿತ್ರಾಂಗದಾ ಕಾವ್ಯದ, ಲಕ್ಷ್ಮೀಶನ ಜೈಮಿನಿ ಭಾರತದ ಚಿತ್ರಾಂಗದೆ ಮತ್ತು ರವೀಂದ್ರನಾಥ ಠಾಕೂರರ ಚಿತ್ರಾ ನಾಟಕಗಳೊಡನೆ ತುಲನಾತ್ಮಕ ಅಧ್ಯಯನ

ಕುವೆಂಪು ಅವರು ಚಿತ್ರಾಂಗದಾ ಕಾವ್ಯಕ್ಕೆ ಜೈಮಿನಿ ಭಾರತದಲ್ಲಿ ಬರುವ ಬಭ್ರುವಾಹನ ಅರ್ಜುನರ ಕಾಳಗವನ್ನು ವರ್ಣಿಸುವಾಗ ಲಕ್ಷ್ಮೀಶನ ಪ್ರಾಸಂಗಿಕವಾಗಿ ಚಿತ್ರಾಂಗದೆ ಪಾತ್ರವನ್ನು ನಮ್ಮ ಮುಂದೆ ತರುತ್ತಾರೆ. ಈ ಪಾತ್ರವನ್ನು ಬಳಸಿಕೊಳ್ಳುವುದರ ಜೊತೆಗೆ ಠಾಕೂರರ ಆಂಗ್ಲಭಾಷೆಗೆ ಭಾಷಾಂತರವಾಗಿರುವ ಚಿತ್ರಾ ನಾಟಕವನ್ನು ಬಳಸಿಕೊಂಡಿದ್ದಾರೆ. ಕಾವ್ಯದಲ್ಲಿ ಒಟ್ಟು ಆರುಪರ್ವಗಳಿದ್ದು ಮೊದಲ ಮೂರು ಪರ್ವಗಳು ಠಾಕೂರರ ಚಿತ್ರಾ ನಾಟಕವನ್ನು ಹೋಲುತ್ತದೆ. ಈ ಚಿತ್ರಾಂಗದೆಯನ್ನು 'ಪೂರ್ವ ಚಿತ್ರಾಂಗದೆ'ಯೆಂದು ಕರೆದಿದ್ದಾರೆ. ಉಳಿದ ಮೂರು ಪರ್ವಗಳಲ್ಲಿ ಲಕ್ಷ್ಮೀಶನ ಕೃಪೆ ಕೊಂಚ ಮಟ್ಟಿಗೆ ಕಂಡುಬಂದರೂ ಅದನ್ನು ಯಥಾವತ್ತಾಗಿ ಬಳಸಿಕೊಂಡಿಲ್ಲ. ಈ ಭಾಗದ ಚಿತ್ರಾಂಗದೆಯನ್ನು 'ಉತ್ತರ ಚಿತ್ರಾಂಗದೆ' ಎಂದು ಕರೆದಿದ್ದಾರೆ. ಹಲವು ಮಹತ್ವದ ಅಗತ್ಯ ಬದಲಾವಣೆಗಳನ್ನು ಮಾಡಿ ನೂತನವಾದ ಶ್ರೇಷ್ಠ ಕಾವ್ಯ ಕಲಾಕೃತಿಯನ್ನು ನಿರ್ಮಿಸಿದ್ದಾರೆ. ಉತ್ತರ ಚಿತ್ರಾಂಗದೆ ಪೂರ್ವ ಚಿತ್ರಾಂಗದೆ ಎಂದು ಹೇಳಿರುವುದು ಸಮಸ್ತ ಕಥೆಯ ದೃಷ್ಟಿಯಿಂದಲೂ ಪಾತ್ರದ ದೃಷ್ಟಿಯಿಂದಲೂ ಮಹತ್ವದ್ದಾಗಿದೆ.

ವ್ಯಾಸಭಾರತದಲ್ಲಿ ಮಿಂಚಿ ಮರೆಯಾಗುವ ಪಾತ್ರವನ್ನು, ಲಕ್ಷ್ಮೀಶ, ಠಾಕೂರ್, ಕುವೆಂಪು ಇವರುಗಳ ದೃಷ್ಟಿಯಲ್ಲಿ ಹೇಗೆ ಮರುಹುಟ್ಟು ಪಡೆದಿದೆ ಎಂಬುದರ ಬಗ್ಗೆ ತುಲನಾತ್ಮಕ ಅಧ್ಯಯನ ನಡೆಸಲಾಗಿದೆ. ಕುವೆಂಪು ಚಿತ್ರಾಂಗದಾ ಕಾವ್ಯದೊಡನೆ, ಲಕ್ಷ್ಮೀಶ, ಠಾಗೂರರ ಚಿತ್ರಾಂಗದೆಯನ್ನು ಹೋಲಿಸಿ ನೋಡಲಾಗಿದೆ. ಇವುಗಳಲ್ಲಾಗಿರುವ ಬದಲಾವಣೆಗಳು, ಆ ಬದಲಾವಣೆಗಳ ಮಹತ್ವ, ಪೌರಾಣಿಕ ವಸ್ತುಗಳ ಆಯ್ಕೆಗೆ ಕಾರಣ, ಇಲ್ಲಿನ ಮೌಲ್ಯಗಳು ಇಂದಿನ ಕಾಲಕ್ಕೆ ಅವುಗಳ ಪ್ರಸ್ತುತತೆಯ ಬಗ್ಗೆ ಒಂದು ಚರ್ಚೆ ಇದೆ. ಕವಿಗಳು ತಮ್ಮ ತಮ್ಮ ಕೃತಿಗಳಲ್ಲಿ ಕೊಟ್ಟಿರುವ ಕಾಣ್ಕೆ ಕಂಡುಕೊಂಡಿರುವ ಅನುಭವಗಳನ್ನು ತಮ್ಮ ಪ್ರತಿಭೆಗೆನುಸಾರವಾಗಿ ಆಯ್ದುಕೊಂಡಿರುವ ಕಾವ್ಯ ಮಾಧ್ಯಮದ ಬಗ್ಗೆ ಒಂದು ಪಕ್ಷಿನೋಟವಿದೆ.

ಲಕ್ಷ್ಮೀಶನಲ್ಲಿ ವೀರರಸ ಪ್ರಧಾನವಾಗಿ ಕಂಡುಬಂದರೆ ರವೀಂದ್ರನಾಥ ಠಾಗೂರರಲ್ಲಿ ಶೃಂಗಾರ ರಸ ಕಂಡುಬರುತ್ತದೆ. ಕುವೆಂಪುರವರಲ್ಲಿ ವೀರ ಶೃಂಗಾರ

ರಸಗಳ ಜೊತೆಗೆ ಕರುಣರಸವು ಧಾರೆಧಾರೆಯಾಗಿ ಹರಿದಿವೆ. ಲಕ್ಷ್ಮೀಶನು ಜೈಮಿನಿಭಾರತವನ್ನು ಭಾಮಿನಿಷಟ್ಪದಿಯಲ್ಲಿ ಕಾವ್ಯದ ಮೂಲಕ ನಿರೂಪಿಸಿದ್ದರೆ, ಠಾಕೂರರು ನಾಟಕದ ಮೂಲಕ ಚಿತ್ರಾಂಗದೆಯ ಕಥೆಯನ್ನು ಸೊಗಸಾಗಿ ನಿರೂಪಿಸಿದ್ದಾರೆ. ಕುವೆಂಪುರವರ 'ಪಧ್ಯಂ ಹೃದ್ಯಂ' ಎನ್ನುವಂತೆ ಕಾವ್ಯ ಮಾಧ್ಯಮವನ್ನು ಆರಿಸಿಕೊಂಡು ದೀರ್ಘವಾಗಿ ರಚಿಸಿ, ಸರಳ ರಗಳೆಯನ್ನು ಪ್ರಯೋಗಿಸಿ ಯಶಸ್ವಿಯಾಗಿದ್ದಾರೆ.

ಮೊದಲು ರವೀಂದ್ರನಾಥ ಠಾಕೂರರ ಚಿತ್ರಾಂಗದ ನಾಟಕದ ಕಥಾಸ್ವರೂಪ ತಿಳಿದು ಕುವೆಂಪು ಚಿತ್ರಾಂಗದೆಯೊಡನೆ ತುಲನಾತ್ಮಕ ದೃಷ್ಟಿ ಹರಿಸೋಣ:

ರವೀಂದ್ರನಾಥ ಠಾಕೂರರು ಚಿತ್ರಾ ನಾಟಕಕ್ಕೆ ಮೂಲವ್ಯಾಸ ಭಾರತದ ಆಗಸದಲ್ಲಿ ಮಿಂಚಿನಂತೆ ಕಾಣಿಸಿಕೊಂಡು ಮಳೆಯಾಗುವ ಪಾತ್ರವನ್ನು ಕರೆದು ತಂದು ಶೃಂಗಾರ ರಸದ ನೈವೇದ್ಯವನ್ನು ಉಣಿಸಿದ್ದಾರೆ. ಆಕೆಯನ್ನು ಪ್ರಣಯಿನಿಯನ್ನಾಗಿ ನಿಲ್ಲಿಸಿದ್ದಾರೆ. ಸಮಸ್ತ ಜಗದ ನಾಡಿ ಮಿಡಿತದ ತುಡಿತಗಳನ್ನು ವೇದನೆಯ ಬಂಧನದಲ್ಲಿ ಬಂಧಿಸುವ ಶಕ್ತಿಯಿರುವ ಅನಂಗನಾದ ಮದನನು ಸರ್ವಾಂಗನಾಗಿ ಸೃಷ್ಟಿಯಾ ಆಸಕ್ತಿಯನ್ನು ಕೆರಳಿಸಿ ಸೌಂದರ್ಯ ವೇಷದಲ್ಲಿ ಅಣು ಕಣದಲ್ಲಿ ನದಿಯಂತೆ ಪ್ರವಹಿಸುತ್ತಿದ್ದಾನೆ. ಆತನಿಲ್ಲದ ಜಗತ್ತು ಶೂನ್ಯ. ಇಂತಹ ಮಹತ್ವದ ಸಂದೇಶವನ್ನು ಚಿತ್ರಾ ಪಾತ್ರದ ಮೂಲಕ ಸಂದೇಶವಿತ್ತಿದ್ದಾರೆ. ಪ್ರಾರಂಭದಲ್ಲಿ ಅರ್ಜುನನಿಂದ ತಿರಸ್ಕೃತಗೊಂಡ ಚಿತ್ರಾ ಮದನನ್ನು ಪ್ರಾರ್ಥಿಸುತ್ತಾಳೆ.

ಚಿತ್ರಾ ನಾಟಕದಲ್ಲಿ ಚಿತ್ರಾಂಗದೆಯು ಅರ್ಜುನನ್ನು ಬಯಸಿ, ತಿರಸ್ಕೃತಗೊಂಡು ಮನ್ಮಥನನ್ನು ಪ್ರಾರ್ಥಿಸುತ್ತಾಳೆ. ಅವಳ ಪ್ರಾರ್ಥನೆಗೆ ಪ್ರತ್ಯಕ್ಷನಾಗುತ್ತಾನೆ ಮದನ.

"ಚಿತ್ರಾ: ಪಂಚಬಾಣ ನೀನೇ ಏನು?

ಮದನ: ಹೌದು ನಾನೇ ಆ ಕಾಮದೇವ.

ಚಿತ್ರಾ: ಈ ದಾಸಿ ಪ್ರಣಾಮ ಸಲ್ಲಿಸುತ್ತಿದ್ದಾಳೆ. ಸ್ವೀಕರಿಸು ನಿನ್ನ
ದರುಶನ ಪಡೆದ ನನ್ನ ಜೀವನ ಸಾರ್ಥಕ.

ಮದನ: ಕಲ್ಯಾಣಿ, ಕಠೋರವಾದ ವ್ರತವನ್ನು ಏಕೆ ಕೈಗೊಂಡಿರುವೆ?
ಹೂವಿನ ಹಾಗೆ ಅರಳುವ ನಿನ್ನ ಯೌವ್ವನವನ್ನು ತಪಸ್ಸಿನ
ಜ್ವಾಲೆಯಲ್ಲಿ ಏಕೆ ಸುಡುತ್ತಿರುವೆ? ಹೇಳು ದೇವಿ
ನಿಸ್ಸಂಕೋಚವಾಗಿ ಹೇಳು

ಚಿತ್ರಾ: ಪುರುಷನ ಬ್ರಹ್ಮ ಚರ್ಯವನ್ನು ಅಲುಗಾಡಿಸದ ನನ್ನ

(ದುಃಖಿತಳಾಗಿ) ಹೆಣ್ಣುತನಕ್ಕೆ ಧಿಕ್ಕಾರ....ಓ

ಕಾಮದೇವ ನೀನಿನ್ನು ನಿನ್ನ ವಿದ್ಯೆಯನ್ನು ನನಗೆ ಕಲಿಸು"

(ಎಂದು ತನ್ನ ಪ್ರಣಯಭಂಗದ ಕಥೆಯನ್ನು ಹೇಳುವಳು)

ಮದನ: (ಅವಳ ಸಮಸ್ತ ಕಥೆಯನ್ನು ಕೇಳಿ) ನಾನು ನಿನಗೆ ಅವಶ್ಯ ಸಹಾಯ ಮಾಡುತ್ತೇನೆ. ವಿಶ್ವವಿಜಯ ಅರ್ಜುನನ್ನು ನಿನ್ನ ಮೋಹದಲ್ಲಿ ಸಿಲುಕಿಸಿ ನಿನ್ನೆದುರಿಗೆ ತಂದು ನಿಲ್ಲಿಸುತ್ತೇನೆ.

ಚಿತ್ರಾ: ನಾನು ಕೃತಾರ್ಥಳಾದೆ ಪ್ರಭು"[೧]

ಹೀಗೆ ವಸಂತ ರಾಜನಿಂದ, ಮದನನಿಂದ ವರವನ್ನು ಪಡೆದ ಚಿತ್ರೆ ಅನಂತ ಸೌಂದರ್ಯವನ್ನು ಹೊಂದುತ್ತಾಳೆ. ಒಂದು ವರ್ಷದ ಅವಧಿಯ ಈ ಸೌಂದರ್ಯದಿಂದ ಚಿತ್ರಾಂಗದೆಯ ದೇಹ ಯೌವ್ವನದ ಪುಷ್ಪಗಳಿಂದ ಅರಳಿತು. ಸರ್ವಾಂಗ ಸುಂದರಿಯಾಗಿ ಬಂದ ಚಿತ್ರಾಂಗದೆಯನ್ನು ಕಂಡ ಅರ್ಜುನ ಮನಸೋಲುತ್ತಾನೆ. ಆದರೆ ತನ್ನಿಂದ ತಿರಸ್ಕೃತಗೊಂಡ ಹೆಣ್ಣು ಇವಳೇ ಎಂಬುದನ್ನು ಗುರುತಿಸಲಾರದಷ್ಟು ಬದಲಾದ ಸೌಂದರ್ಯವತಿಯಾಗಿದ್ದಳು. ಅವಳ ರೂಪಲಾವಣ್ಯಕ್ಕೆ ಮನಸೋತು ಅವಳ ಬಳಿಗೆ ಹೋಗಿ ಪ್ರೇಮ ಭಿಕ್ಷೆ ಯಾಚಿಸುತ್ತಾನೆ. ಆ ಸುಂದರಿ ಚಿತ್ರೆ ಅರ್ಜುನನ ಕುರಿತು ಈ ರೀತಿ ಹೇಳುತ್ತಾಳೆ.

ಚಿತ್ರಾ: ನೀನು ನನ್ನ ಅತಿಥಿ ನಿನ್ನನ್ನು ಯಾವ ರೀತಿ ಸ್ವಾಗತಿಸಲಿ?

ಅರ್ಜುನ: ದೇವಿ! ನಿನ್ನ ಅಪಾರ ಸೌಂದರ್ಯ ರಾಶಿಯಿಂದ ಪ್ರಪಂಚವನ್ನು ದೂರಿಟ್ಟು ನಿರ್ಜನಾರಣ್ಯದಲಿ ತಪವನ್ನೇಕೆ ಆಚರಿಸುತ್ತಿರುವೆ?

ಚಿತ್ರಾ: ನನ್ನದೊಂದು ಆಂತರಿಕ ಅಭಿಲಾಷೆಯಿದೆ. ನಾನು ಯಾರನ್ನು ಬಯಸುತ್ತೇನೋ ಆತ ಮೂರು ಲೋಕದಲ್ಲಿ ಪ್ರಖ್ಯಾತನಾಗಿದ್ದಾನೆ ಅದಕ್ಕಾಗಿ ಶಿವಪೂಜೆಯಲ್ಲಿ ನಿರತಳಾಗಿರುವೆ.

ಅರ್ಜುನ: ಯಾರು ಆ ಸೌಭಾಗ್ಯ ಶಾಲಿ ಪುರುಷ? ನಿನ್ನ ಮನದ ಮೇಲೆ ಅಧಿಕಾರ ಪಡೆದವ.

---

೧. ಡಾ. ಪಂಚಾಕ್ಷರಿ ಹಿರೇಮಠ, ಕನ್ನಡ ಗದ್ಯ ಭಾರತಿ (ಚಿತ್ರಾ), ಪು. ೯೫

ಚಿತ್ರಾ: ಕುರುವಂಶದಲ್ಲಿ ಜನಿಸಿದ ವಿಶ್ವ ವಿಜಯಿ ಗಾಂಡೀವಧಾರಿ ಅರ್ಜುನ. ಆತನ ಕೀರ್ತಿ, ಸ್ವಭಾವ ನನ್ನ ಮನವ ಸುತ್ತಿದೆ.

ಅರ್ಜುನ: ಭದ್ರೆ ಅದೇ ಕುರುವಂಶದ ಅರ್ಜುನ. ನಿನ್ನ ಚರಣ ಸನ್ನಿಧಿಯಲ್ಲಿ ನಿಂತಿದ್ದಾನೆ.

ಈ ಸಂದರ್ಭದಲ್ಲಿ ಚರಣದಾಸನಾಧ ಅರ್ಜುನನ್ನು ಕಂಡು ಮನದಲ್ಲಿ ಸಂತೋಷಿಸಿದ ಚಿತ್ರಾಂಗದೆ ಅವನ ವ್ರತವನ್ನು ನೆನಪಿಸುತ್ತಾಳೆ. ಒಬ್ಬ ಸಾಧಾರಣ ನಾರಿಯನ್ನು ಪಡೆಯುವ ಸಲುವಾಗಿ ಹನ್ನೆರಡು ವರ್ಷದ ತಪವನ್ನು ಕೈಬಿಡುವುದೇ ಎಂದು ಕೇಳುವಾಗ ಇಲ್ಲಿ ಚಿತ್ರಾಳ ಜಾಣ್ಮೆಯನ್ನು ಕಾಣಬಹುದು. ಆದರೆ ಅಂತರಾತ್ಮದಲ್ಲಿ ತನ್ನ ವೇಷದ ಬಗ್ಗೆ ಅರ್ಜುನನನ್ನು ಮರಳು ಮಾಡುತ್ತಿರುವ ಬಗ್ಗೆ ಪಶ್ಚಾತ್ತಾಪವಿದ್ದು ಅರ್ಜುನನಿಗೆ 'ತಾನೊಂದು ಮಾಯೆಯ ರೂಪ' ಎನ್ನುತ್ತಾಳೆ. ಹೀಗೆ ಹೇಳುವಲ್ಲಿ ಆಕೆಯ ವ್ಯಕ್ತಿತ್ವವನ್ನು ಕಾಣಬಹುದು. ಕಪಟ ಸೆಳತಕ್ಕಿಂತ ನಿರ್ಮಲವಾದ ಪರಿಶುದ್ಧ-ವಾದ ಪ್ರೀತಿಯನ್ನು ತೋರಬೇಕೆಂಬುದೇ ಅವಳ ಮನೋಭಿಲಾಷೆಯಾಗಿತ್ತು.

ಇಲ್ಲಿ ಠಾಕೂರರು ಚಿತ್ರಾಳ ಅಂತರಂಗದಲ್ಲಿ ಉಂಟಾದ ಸೂಕ್ಷ್ಮಾತಿಸೂಕ್ಷ್ಮ ತುಮುಲಗಳನ್ನು, ಗೊಂದಲಗಳನ್ನು ಭಾವನೆಗಳ ರೂಪದಲ್ಲಿ ಹೊರ ಹೊರ ಹೊಮ್ಮಿಸಿದ್ದಾರೆ. ವಿಶ್ವದಲ್ಲಿ ಸೌಂದರ್ಯಕ್ಕೆ ಎಷ್ಟು ಬೆಲೆ ಇದೆಯೋ ಅಷ್ಟೇ ಬೆಲೆಯಿದೆ. ಅದರ ಶಾಶ್ವತತೆಗೆ, ಪರಿಶುದ್ಧತೆಗೆ, ಸೌಂದರ್ಯವೂ, ಶಾಶ್ವತವಾಗಿರಬೇಕಾದರೆ ಅದಕ್ಕೆ ತಕ್ಕ ಗುಣ ನಿಯುಮಗಳು ಇರಬೇಕು. ಆ ಗುಣ ನಿಯಮಗಳು ಆಯಾ ಕಾಲಕ್ಕೆ ತಕ್ಕಂತೆ ಹೊಂದಿಕೊಂಡಿರಬೇಕು. ಅದನ್ನೆಲ್ಲ ಠಾಘೂರರು ಚಿತ್ರಾ ಪಾತ್ರದ ಮೂಲಕ ವೈಭವೀಕರಿಸಿದ್ದಾರೆ.

ಚಿತ್ರಾ ತನಗೆ ದೊರೆತ ಸೌಂದರ್ಯದಿಂದ ಅರ್ಜುನನನ್ನು ಮೂದಲಿಸಬಹುದಿತ್ತು. ಆದರೆ ಕವಿಗಳ ಉದ್ದೇಶ ಅದಲ್ಲ. ಕೇವಲ ಸೌಂದರ್ಯವಿದ್ದರಷ್ಟೇ ಸಾಲದು ಅದಕ್ಕೆ ತಕ್ಕ ಔದಾರ್ಯವಿರಬೇಕು. ಅರ್ಜುನನ ಪಾತ್ರದ ಮೂಲಕ ಸೌಂದರ್ಯವೊಂದೇ ಸತ್ಯ ಎಂದು ಬಿಂಬಿಸುತ್ತಾರೆ. ಹನ್ನೆರಡು ವರ್ಷದ ತಪಸ್ಸಿಗಿಂತ ಸೌಂದರ್ಯ ಖನಿಯಂತಿರುವ ಚಿತ್ರಾಳು ಮುಖ್ಯವಾಗುತ್ತಾಳೆ. ಇಲ್ಲಿ ಗಮನಿತಕ್ಕ ಮತ್ತೊಂದು ಅಂಶವೆಂದರೆ ಚಿತ್ರಾ, ಅರ್ಜುನನ್ನು ಸವಿನಯದಿಂದ ಆಮಂತ್ರಿಸಿ ತನ್ನ ಸೌಂದರ್ಯಕ್ಕೆ ತಕ್ಕಂತಹ ನಡವಳಿಕೆ ತೋರಿರುವುದು. ಅರ್ಜುನ ಆ ಸುಂದರ ಕನ್ನಿಕೆಯೊಡನೆ ತನ್ನ ಪ್ರೇಮಭಿಕ್ಷೆ ಯಾಚಿಸಿ ಅವಳ ದಾಸನಾಗಿ ಅವಳ ಅನುರಾಗಕ್ಕೆ ಹಾತೊರೆಯುತ್ತಾನೆ. ಆ ಸುಮೂಹೂರ್ತದಲ್ಲಿ ಅರ್ಜುನ, ಚಿತ್ರಾಂಗದೆಯುರು ಒಂದಾಗುತ್ತಾರೆ. ವರ್ಷಾವಧಿಯ ಅವಸಾನದ ಸಮಯ ಅರ್ಜುನ

ಆನಂದ ತುಂದಿಲನಾಗಿ ಆಕೆಯ ಪೂರ್ವಾಪರ ತಿಳಿಯಲು ಉತ್ಸುಕನಾಗುವನು. ಆದರೆ ಆ ತರುಣಿ ತಾನು ಯಾರೆಂಬುದನ್ನು ಆ ಕ್ಷಣಕ್ಕೆ ತಿಳಿಯಗೊಡಲಿಚ್ಛಿಸದೆ ಅವನಿಗೆ ಜಗತ್ತಿನ ತರ್ಕ್ವಾನುಭವದ ಸುಧೆಯನ್ನು ಉಣ ಬಡಿಸುವ ಪ್ರಸಂಗ.

ಅರ್ಜುನ: "ನಿನ್ನ ಮನೆಯೆಲ್ಲಿ? ನಿನ್ನವರಾರು, ಸಂಬಂಧಿಗಳು ಯಾರು
ಇಲ್ಲವೇ ಇದ್ದರೆ ಅವರಾರು ನಿನಗೆ ನೆನಪು ಬರುತ್ತಿಲ್ಲವೇ?"

ಚಿತ್ರಾ: "ನಾನು ನಿನ್ನ ಸಮ್ಮುಖದಲ್ಲಿಯೇ ಇರಲು ಪರಿಚಯದ ಅವಶ್ಯಕತೆ
ಏಕೆ? ಬೆಳಗಿನ ಸುಂದರ ಕಾಲದಲ್ಲಿ ಈ ಪುಟ್ಟ ಹೂವಿನ ಮೇಲೆ
ಪವಡಿಸಿರುವ ಮಂಜುಹನಿಯ ಬಗ್ಗೆ ಪರಿಚಯವಿದೆಯೇನು? ಇದಕ್ಕೆ
ಶಿಫಾರಸ್ಸಿನ ಅಗತ್ಯವಿದೆಯೇ? ನೀನು ಯಾರನ್ನು ಪ್ರೀತಿಸಿರುವೆಯೋ
ಆಕೆಯ ಯಾವ ಹೆಸರೂ ಯಾವ ಪರಿಚಯವೂ ಇಲ್ಲದ ಈ ಮಂಜು
ಹನಿಯಾಗಿದ್ದಾಳೆ.

ಪ್ರೀತಿಯ ಸಾಗರಕ್ಕೆ ಆದಿ ಇಲ್ಲ, ಅನಂತವಿಲ್ಲ. ಇದನ್ನು ಬಂಧಿಸುವ ಪ್ರಯತ್ನವನ್ನೆಂದಿಗೂ ಮಾಡಬಾರದು. ಒಂದು ವೇಳೆ ಹಾಗೆ ಮಾಡಿದರೂ ಅದು ಕ್ಷಣಿಕ ಅಷ್ಟೇ. ಅದು ಸದಾ ಹರಿಯುವ ನದಿಯಂತೆ. ಬಂಧನವೆಂಬುದು ಕ್ಷಣಿಕತೆ; ಮುಕ್ತತೆ ಎಂಬುದು ಶಾಶ್ವತ. ಅರ್ಜುನನನ್ನು ಚಿತ್ರಾಂಗದೆ ತನ್ನ ಸೌಂದರ್ಯ ರಾಶಿಯಿಂದ ಬಂಧಿಸಿದ್ದಳಾದರೂ ಆತನಿಗೆ ಆಕೆಯನ್ನು ತನ್ನೊಡನೆ ಕರೆದೊಯ್ಯುವ ಬಯಕೆ. ಅವಳ ಬಗ್ಗೆ ತಿಳಿದುಕೊಳ್ಳುವ ಆಸೆ.

ವರ್ಷಾದವಸಾನದ ಕಾಲ ಸಮೀಪಿಸುತ್ತಿದ್ದಂತೆ ಅರ್ಜುನ ಆಕಸ್ಮಿಕವೆಂಬಂತೆ ಮಣಿಪುರುದ ರಾಜಕುಮಾರಿ ಚಿತ್ರಾಂಗದೆಯ ಸಾಹಸದ ಕಥೆಯನ್ನು ಕೇಳಿ ವಿಸ್ಮಿತನಾಗುತ್ತಾನೆ. ತನ್ನ ಪ್ರೀತಿಯ ಸುಂದರ ತರುಣಿ ಚಿತ್ರಾಂಗದೆ ಮಣಿಪುರದ ರಾಜಕುಮಾರಿ ಚಿತ್ರಾಂಗದೆಯ ಬಗ್ಗೆ ಹೇಳುವ ಸನ್ನಿವೇಶ.

ಚಿತ್ರಾ: ಏನು ಯೋಚಿಸುತ್ತಿರುವೆ ದೊರೆ

ಅರ್ಜುನ: ರಾಜಕುಮಾರಿ ಚಿತ್ರಾಂಗದಾ ಬಗ್ಗೆ ಅವಳನ್ನು ನೋಡಿಲ್ಲದಿದ್ದರೂ
ಸೋಜಿಗದ ಕಥೆಗಳನ್ನು ಕೇಳಿದ್ದೇನೆ.

ಚಿತ್ರಾ: ಓ ಅವಳೇ ಮಹಾ ಕುರೂಪಿ, ನನ್ನಂಥ ಸುಂದರ ಕಣ್ಣುಗಳಲ್ಲ ಹಾಗೂ
ಬಿಲ್ಲಿನಂತಹ ಹುಬ್ಬುಗಳಿಲ್ಲ ಅವಳಿಗೆ. ವೈರಿಗಳ ಬೆನ್ನೆಲುಬು
ಮುರಿಯುವುದನ್ನೇ ಅವಶ್ಯ ಕಲಿತಿದ್ದಾಳೆ. ಆದರೆ ಅವಳು ನನ್ನ

ಹಾಗೆ ಯಾರನ್ನು ತನ್ನ ಬಾಹುಬಂದನದಲ್ಲಿ ಬಂಧಿಸುವುದನ್ನು ಕಲಿತಿಲ್ಲ.

ಅರ್ಜುನ : ಆದರೆ ಅವಳು ಹೆಣ್ಣಿನ ಎಲ್ಲ ಮೃದುತ್ವ ಪಡೆದು ಪುರುಷನ ಹಾಗೆ ಮಹಾ ಪರಾಕ್ರಮಿಯೆಂದು ಕೇಳಿದ್ದೇನೆ.

ಚಿತ್ರಾ : ಇದುವೆ ಅವಳ ದುರ್ಭಾಗ್ಯವಾಗಿದೆ. ಹೆಣ್ಣು ಕೇವಲ ಹೆಣ್ಣಾಗಿರಬೇಕು ಈ ನೆಲದ ಶೋಭೆಯನ್ನು ಹೆಚ್ಚಿಸಿ ಪ್ರಕಾಶಮಾನವಾಗಿ ಪ್ರೀತಿಸಿ ನಾನಾ ಪ್ರಕಾರದ ಹಾವ ಭಾವಗಳಿಂದ ಪ್ರತಿಕ್ಷಣವೂ ಪತಿಯ ಸೇವೆ ಮಾಡಿ ಸಾಧ್ವಿ ಶಿರೋಮಣಿಯಾಗಿದ್ದಾಗಲೇ ಅವಳ ಜನ್ಮ ಸಾರ್ಥಕವಾಗುತ್ತದೆ.

ಈ ಸಂಭಾಷಣೆಯಲ್ಲಿ ಚಿತ್ರಾಂಗದೆ ಮತ್ತು ಅರ್ಜುನರ ಪೂರ್ಣ ವ್ಯಕ್ತಿತ್ವ ಗೋಚರವಾಗುತ್ತದೆ. ಚಿತ್ರಾಂಗದೆ ಸಾಹಸ ಕಥೆಯನ್ನು ಕೇಳಿದ ಅರ್ಜುನ ಅವಳ ಬಗ್ಗೆ ಹೆಮ್ಮೆ ಹೊಂದುತ್ತಾನೆ. ಹೆಣ್ಣಿನ ಮೃದುತ್ವ ಪಡೆದಿದ್ದರೂ ವೀರಾಗ್ರಣಿಯಾಗಿ ರಾಜ್ಯವನ್ನು ಸುಭೀಕ್ಷವಾಗಿ ನಡೆಸಿಕೊಂಡು ಹೋಗುತ್ತಿರುವ ಆಕೆಯನ್ನು ನೆನೆದು ವಿಸ್ಮಿತನಾಗುತ್ತಾನೆ.

ಚಿತ್ರಾಂಗದೆಯು ಹೆಣ್ಣು ಹೇಗಿರಬೇಕು ಎಂಬುದನ್ನು ವ್ಯಂಗ್ಯಾತ್ಮಕವಾಗಿ ನುಡಿದಿದ್ದಾಳೆ. ಹೆಣ್ಣು ತ್ಯಾಗಮಯಿಯಾಗಿ ಪತಿಯ ಸೇವೆಯೇ ತನ್ನ ಆದ್ಯ ಕರ್ತವ್ಯ. ಅವನ ಸೇವೆಯಲ್ಲಿ ತನ್ನ ಜೀವನವನ್ನು ನೂಕುತ್ತಾಳೆ. ಆದರೆ ಸ್ತ್ರೀ ಅವನ ಸಮಭಾಗಕ್ಕೆ ಬಂದರೆ ಮಾತ್ರ ಸಹಿಸಲಾರದ ಪುರುಷರನ್ನು ಕುರಿತು ಪ್ರಶ್ನಿಸಿದ್ದಾಳೆ.

ಠಾಕೂರರು ಚಿತ್ರಾಂಗದೆ ಮಾತುಗಳ ಮೂಲಕ ಸ್ತ್ರೀಯರ ಕೆಲವು ಸೂಕ್ಷ್ಮಾತಿ ಸೂಕ್ಷ್ಮ ಭಾವನೆಗಳನ್ನು ಪ್ರತಿಬಿಂಬಿಸಿದ್ದಾರೆ. ತಾನು ಯಾರೆಂಬ ಗುಟ್ಟನ್ನು ರಟ್ಟು ಮಾಡದೆ ಅರ್ಜುನನಿಗೆ ತನ್ನ ಪ್ರೇಮಸುಧೆಯನ್ನು ಧಾರೆ ಎರೆಯುವಳು. ಕಡೆಗೆ ಅರ್ಜುನನಿಗೆ ತನ್ನ ನಿಜವಾದ ಪರಿಚಯವನ್ನು ಮಾಡಿಕೊಡುವಳು.

ಚಿತ್ರಾ: ನಾನೇ ರಾಜಕುಮಾರಿ ಚಿತ್ರಾಂಗದಾ. ನಾನು ದೇವಿಯೂ ಅಲ್ಲ, ಸಾಮಾನ್ಯ ಹೆಣ್ಣು ಅಲ್ಲ. ತಲೆಯ ಮೇಲಿರಿಸಿಕೊಂಡು ತನ್ನನ್ನು ಪೂಜಿಸುವುದೂ ಬೇಕಿಲ್ಲ. ನನ್ನನ್ನು ತಿರಸ್ಕಾರದಿಂದ ಹಿಂದಿಟ್ಟು ನಡೆಯುವುದು ನನಗೆ ಬೇಕಿಲ್ಲ. ನೀನು ನಿನ್ನ ಜೀವನದೊಂದಿಗೆ ನನ್ನನ್ನು ಜೊತೆಯಾಗಿ ಕರೆದೊಯ್ಯಬೇಕು. ನಿನ್ನ ಚಿಂತನೆಗಳನ್ನು ಪರಿಹರಿಸುವ ಭಾರವನ್ನು ನನಗೆ ನೀಡು. ಆಗ ನಿನಗೆ ನನ್ನ ವ್ಯಕ್ತಿತ್ವದ ಅರಿವಾಗುತ್ತದೆ.

ಅರ್ಜುನ : ಪ್ರಿಯೆ ನಿನ್ನಿಂದ ಪೂರ್ಣವಾಯ್ತೆನ್ನ ಪ್ರಾಣಪಾತ್ರೆ!

ಈ ವಾಕ್ಯಗಳಿಂದ ಠಾಕೂರರ ಚಿತ್ರಾ ನಾಟಕವು ಮುಗಿಯುತ್ತದೆ. ಆಕೆಯ ಪಾತ್ರದ ಮೂಲಕ ಸ್ತ್ರೀಯೊಬ್ಬಳು ತನ್ನ ಸ್ಥಾನಮಾನ ಕಾಯ್ದುಕೊಳ್ಳಲು ಪುರುಷನ ಸಹಕಾರದೊಂದಿಗೆ ಜೊತೆ ಜೊತೆ ಬೆಳೆಯಬೇಕೆಂಬ, ಉಳಿಯಬೇಕೆಂಬ ಹಂಬಲವನ್ನು ಅಭಿವ್ಯಕ್ತಿಸಿದ್ದಾರೆ. ಸಮಾನತೆ ಇದು ಸ್ತ್ರೀವಾದಿಗಳ ನಿಲವು. ಇಲ್ಲಿ ಸ್ತ್ರೀ ಬಯಸುವುದು ಸಮಾನತೆಯನ್ನು. ಇದನ್ನು ಠಾಕೂರರು ವಿಶಿಷ್ಟ ರೀತಿಯಲ್ಲಿ ಚಿತ್ರಿಸಿದ್ದಾರೆ.

ತಾನು ನಿನ್ನಿಂದ ತಿರಸ್ಕೃತಳಾದ ರಾಜಕುಮಾರಿ ಚಿತ್ರಾಂಗದಾ. ಮದನ ವರದಿಂದ ಬಂದ ಸುಂದರ ಸ್ತ್ರಿವೇಷಧಾರಿಣಿ ಎಂದೆಲ್ಲಾ ಹೇಳಿದಾಗ ಅದಕ್ಕೆ ಪ್ರತಿಯಾಗಿ ಅರ್ಜುನನು ಚಿತ್ರಾಂಗದೆಯ ನಿಜರೂಪದ ಅರಿವಾಗಿ ಅವಳಿಂದ ತಾನಿಂದು ಧನ್ಯನಾದೆ ಎಂಬ ಉದ್ಗಾರವೆತ್ತಿದ್ದಾನೆ.

ಇದಿಷ್ಟು ಠಾಕೂರರ ಚಿತ್ರಾ ನಾಟಕ. ಚಿತ್ರಾಂಗದೆಯನ್ನು ಶೃಂಗಾರ ಪರಿಪೂರ್ಣ ಪ್ರಣಯಿನಿಯಾಗಿ ಚಿತ್ರಿಸಿದ್ದಾರೆ, ವ್ಯಾಸ ಭಾರತದ ಕಥೆಯನ್ನು ಆರಿಸಿಕೊಂಡು ಹಲವು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಮುಂದಿನ ಅವಳ ಜೀವನವನ್ನು ನಮ್ಮ ಊಹೆಗೆ ಬಿಟ್ಟಿದ್ದಾರೆ.

ಕುವೆಂಪು ಚಿತ್ರಾಂಗದಾದೊಡನೆ ಠಾಕೂರರ ಚಿತ್ರಾ:

ಕುವೆಂಪುರವರು ಠಾಕೂರರ ಚಿತ್ರಾ ನಾಟಕವನ್ನು ಬಳಸಿಕೊಂಡು ತಮ್ಮ ಪೂರ್ವ ಚಿತ್ರಾಂಗದೆಯನ್ನು ಕಡೆದಿದ್ದಾರೆ. ಒಬ್ಬ ಸ್ತ್ರೀ ವೀರರಂತೆ ಗಂಡುಡುಗೆ ಧರಿಸಿದ ಮಾತ್ರಕ್ಕೆ ವೀರಾಗ್ರಣಿಯಾಗಿ ರಣರಂಗದಲ್ಲಿ ಹೋರಾಡಿದ ಮಾತ್ರಕ್ಕೆ ಸ್ತ್ರೀ ಸಹಜ ಬಯಕೆಗಳಿಂದ ಮುಕ್ತಳಾಗಲೂ ಎಂದಿಗೂ ಸಾಧ್ಯವಿಲ್ಲ. ನಮ್ಮ ರಾಜಕುಮಾರಿ ಚಿತ್ರಾಂಗದಾ ಇದಕ್ಕೆ ಹೊರತೇನಲ್ಲ! ಮನಸ್ಸಿನಲ್ಲಿನ ಸುಪ್ತ ಚೇತನದ ಬಯಕೆಗಳು ಕನಸಾಗಿ ಮಾರ್ಪಡುತ್ತದೆ. ಅದಕ್ಕೆ ಸಾಕ್ಷಿಯಾಗಿ ಚಿತ್ರಾಂಗದಾ ತನ್ನ ಬಯಕೆಯ ಆರಾದನೆಯ ಮೂರ್ತಿಯನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಕನಸಿನ ಮೂಲಕ ಆತನನ್ನು ಕಾಣುತ್ತಾಳೆ. ಕನಸಿನ ಪ್ರಸಂಗಗಳು ವಾಸ್ತವದಲ್ಲಿ ನನಸಾಗುವಂತಹ ಸನ್ನಿವೇಶಗಳು ಎದುರಾಗಿ ಬರುತ್ತವೆ. ಆದರೆ ಠಾಕೂರರಲ್ಲಿ ಈ ರೀತಿಯ ಕನಸಿನ ವಿಷಯದ ಬಗ್ಗೆ ಪ್ರಸ್ತಾಪವಿಲ್ಲ.

ಕುವೆಂಪುರವರಲ್ಲಿ ಅರ್ಜುನನ್ನು ಗೆಲ್ಲುವ ಬಯಕೆಯಿಂದ ಹೊರಟ ಚಿತ್ರಾಂಗದೆಗೆ ಸಿಕ್ಕಿದ್ದು ಅರ್ಜುನನ ತಿರಸ್ಕಾರದ ಮಾತುಗಳು ಜೊತೆಗೆ ಅವಳನ್ನು ನಿಂದಿಸಿ ಅವಳ ಸ್ವಾಭಿಮಾನಕ್ಕೆ ಚ್ಯುತಿ ಬರುವಂತಹ ಮಾತುಗಳನ್ನಾಡುವುದು.

ತಿರಸ್ಕೃತಗೊಂಡ ಚಿತ್ರಾಂಗದಾ ಮದನನ್ನು ಕುರಿತು ಪ್ರಾರ್ಥಿಸಿ ವರವನ್ನು ಅನುಗ್ರಹಿಸುವಂತೆ ಬೇಡುತ್ತಾಳೆ. ಒಂದು ದಿನದಲ್ಲಿಯೇ ಯುಗದ ತಪವನ್ನಾಚರಿಸುತ್ತಾಳೆ. ಧ್ಯಾನನಿರತಳಾಗಿರುವಾಗಲೇ ಚಿತ್ರಾಂಗದೆಗೆ ಒಂದು ತಿಂಗಳವರೆಗಿನ ಸೌಂದರ್ಯವತಿ-ಯಾಗುವಂತೆ ವರವನ್ನೀಯುತ್ತಾನೆ. ಠಾಕೂರರಲ್ಲಿ ಒಂದು ವರ್ಷದ ವರೆಗಿನ ಸೌಂದರ್ಯರಾಶಿಯನ್ನು ವಸಂತರಾಜ ಅನುಗ್ರಹಿಸಿದರೆ, ಮದನ ರತಿಲೀಲೆಗಳನ್ನು ಆಕೆಗೆ ಧಾರೆಯೆರೆಯುತ್ತಾನೆ ಮತ್ತು ಅರ್ಜುನನು ಕೇವಲ ತಿರಸ್ಕಾರ ಮಾಡುತ್ತಾನೆಯೇ ಹೊರತು ಮೂದಲಿಸುವುದಿಲ್ಲ.

ಕುವೆಂಪು ಇದಕ್ಕೆ ತಕ್ಕ ಅಗತ್ಯ ಮಾರ್ಪಾಡುಗಳನ್ನು ಮಾಡಿಕೊಳ್ಳುವುದರ ಮೂಲಕ ಒಂದು ವರ್ಷದ ಅವಧಿಯ ಸೌಂದರ್ಯವು ನೀರಸವನ್ನುಂಟು ಮಾಡಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಆಕೆ ಒಬ್ಬ ರಾಜಕುಮಾರಿ ತನ್ನ ಪರಿವಾರವನ್ನು ಒಂದು ವರ್ಷದ ಅವಧಿಯವರೆಗೂ ಬಿಟ್ಟಿರುವುದು ಸಾಧ್ಯವಿಲ್ಲ. ಈ ರೀತಿಯಾಗಿ ಕಣ್ಮರೆಯಾದ ರಾಜಕುಮಾರಿಯನ್ನು ಯಾರೂ ಹುಡುಕದೇ ಇರುತ್ತಾರೆಯೇ? ರಾಜಕುಮಾರಿಯ ಆಜ್ಞೆ ಪರಿಪಾಲಿಸುತ್ತಿರುವ ಪರಿವಾರದವರ ಕಣ್ಣಿಗೆ ಇವರು ಬೀಳುವುದಿಲ್ಲವೇ? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಅದೇ ರೀತಿ ಅರ್ಜುನನಿಗೂ ಒಂದು ವರ್ಷದವರೆಗೆ ತನ್ನ ಕರ್ತವ್ಯ ಮರೆತು ಇರಲು ಸಾಧ್ಯವಿಲ್ಲ. ಈ ಎಲ್ಲಾ ಕಾರಣಗಳನ್ನು ಗಮನದಲ್ಲಿಟ್ಟು ಕುವೆಂಪು ಒಂದು ಸಂವತ್ಸರದ ಬದಲು ಒಂದು ಮಾಸದವರೆಗೆ ವರವನ್ನು ದಯಪಾಲಿಸಿದ್ದಾರೆ. ಇಲ್ಲಿಂದ ಮುಂದೆ ಠಾಕೂರರ ರೀತಿಯಲ್ಲೇ ಕಾವ್ಯದ ಓಟ ಸಾಗುತ್ತದೆ. ಮಧ್ಯ ಮಧ್ಯದಲ್ಲಿ ಉಪಮೆಗಳನ್ನು ಕೊಟ್ಟು ಇವರು ಕಾವ್ಯದ ಅಂದ ಇಮ್ಮಡಿಯಾಗುವಂತೆ ಮಾಡಿದ್ದಾರೆ. ಕಾವ್ಯದಲ್ಲಿ ಮಹೋಪಮೆಗಳು ಮತ್ತಷ್ಟು ಮೆರಗನ್ನು ತಂದಿವೆ. ಮಹಾ ಛಂದಸ್ಸನ್ನು ಪ್ರಯೋಗಿಸಿದ್ದಾರೆ. ಪ್ರಕೃತಿ ವರ್ಣನೆಯ ಜೊತೆ ಜೊತೆಯಲ್ಲೇ ಪಾತ್ರಗಳ ಮನಸ್ಥಿತಿಗಳನ್ನು ವಿವರಿಸಿದ್ದಾರೆ.

ಮೂರನೆಯ ಪರ್ವದ ಪೂರ್ವ ಚಿತ್ರಾಂಗದೆ ಎಲ್ಲಿಯೂ ಸಹ ತಾನು ಯಾರೆಂದು ಹೇಳಿಕೊಳ್ಳದೆ ಉಳಿದುಬಿಡುತ್ತಾಳೆ. ಮುಂದೊದಗುವ ಅಪಾಯದ ಅಮಂಗಳದ ಭೀತಿಯಿಂದ ಗರ್ಭಿತ ರಹಸ್ಯೆಯಾಗುಳಿಯುತ್ತಾಳೆ. ಆದರೆ ಠಾಕೂರರು ತಮ್ಮ ನಾಟಕವನ್ನು ಇಲ್ಲಿಗೆ ಮುಕ್ತಾಯಗೊಳಿಸಿರುವುದರಿಂದ ಚಿತ್ರಾ ತನ್ನ ಪರಿಚಯವನ್ನು ಅರ್ಜುನನಿಗೆ ಮಾಡಿಕೊಂಡು ಅವನಿಗೆ ಆಶ್ಚರ್ಯವನ್ನುಂಟು ಮಾಡುತ್ತಾಳೆ. ಮತ್ತೊಂದು ಅಂಶವೆಂದರೆ ಅರ್ಜುನನು ಅವಳ ಸೌಂದರ್ಯ ನೋಡಿ ಮನಸೋತು 'ನಿನ್ನಿಂದ ನನ್ನ ವ್ರತವೂ ನಿಂತಿದೆ' ಎಂದು ಅವಳಲ್ಲಿ ಪ್ರಣಯಭಿಕ್ಷೆ ಬೇಡುತ್ತಾನೆ. ಇದರಿಂದ ಚಿತ್ರಾಂಗದೆ ತನಗೆ ಬಂದ ಈ ಮಾಯೆಯ ರೂಪದಿಂದ

ಆತನನ್ನು ಮೋಹಿಸುವಂತೆ ಮಾಡಿದೆನಲ್ಲಾ! ಎಂದು ಪಶ್ಚಾತ್ತಾಪಕ್ಕೆ ಒಳಗಾಗಿ ವರವನ್ನು ಹಿಂತೆಗೆದುಕೊಳ್ಳುವಂತೆ ಮದನನಲ್ಲಿ ಪ್ರಾರ್ಥಿಸುತ್ತಾಳೆ. ನಂತರ ಅರ್ಜುನನಿಗೆ ತನ್ನ ರೂಪ ಮಾಯೆಯ ಪ್ರಭಾವದಿಂದ ಬಂದಿದೆ ಎಂದು ಹೇಳಿ ನಂತರ ಆತನೊಡನೆ ಅನುರಕ್ತಳಾಗುತ್ತಾಳೆ. ವರ್ಷದವಸಾನದ ಸಮಯದಲ್ಲಿ ಅರ್ಜುನನಿಗೆ ತನ್ನ ಸುಂದರರೂಪದ ಅಂತ್ಯದ ಕಾಲ ಎಂದು ಹೇಳಿ "ನಾನು ಮಣಿಪುರದ ರಾಜಕುಮಾರಿ" ಎಂದು ಪರಿಚಯ ಮಾಡಿಕೊಳ್ಳುತ್ತಾಳೆ. ಕುವೆಂಪು ಚಿತ್ರಾಂಗದಾ ಅರ್ಜುನನ್ನು ತನ್ನ ಮೋಹದ ಬಲೆ ಬೀಸಿ ಮರಳುಮಾಡಿ ಒಲಿಸಿಕೊಂಡು ತಿಂಗಳಂತ್ಯ ಬಂದಾಗ ತನ್ನ ಮಾಯೆಯ ರೂಪವನ್ನು ಅರ್ಜುನನಿಗೆ ಹೇಳುತ್ತಾಳೆ. ಅರ್ಜುನನು ಅವಳನ್ನು ಅಗಲುವ ಸಂದರ್ಭದಲ್ಲಿ ಹೇಳುತ್ತಾಳೆ. ಕುವೆಂಪುರವರಲ್ಲಿ ಈ ಚಿತ್ರಾಂಗದೆಯ ಪರಿಚಯವು ಈ ಸಂದರ್ಭದಲ್ಲಿ ಆಗದೆ ಗರ್ಭಿತ ರಹಸ್ಯೆಯಾಗುಳಿಯುತ್ತಾಳೆ. ಠಾಕೂರರಲ್ಲಿ ನಾಟಕ ಈ ಹಂತಕ್ಕೆ ಮುಕ್ತಾಯಗೊಂಡು ಕವಿ ಶೃಂಗಾರ ರಸದ ಸವಿಯನ್ನು ಹರಿಸಿದ್ದಾರೆ. ಇಲ್ಲಿ ಅವರಿಗೆ ಅವಳ ಮುಂದಿನ ಜೀವನವು ಬೇಕಿರಲಿಲ್ಲ. ಕಾಮವು ಪ್ರೇಮವಾಗಿ ಅರ್ಜುನನ ನುಡಿಗಳಿಂದ ಅಭಿವ್ಯಕ್ತಿಸಿದ್ದಾರೆ. 'ಪ್ರಿಯೆ ನಿನ್ನಿಂದ ಪೂರ್ಣವಾಯ್ತೆನ್ನ ಪ್ರಾಣಪಾತ್ರೆ" ಎಂಬ ಮಾತುಗಳನ್ನು ಅರ್ಜುನನಿಂದ ಹೇಳಿಸಿ ಚಿತ್ರಾಂಗದೆಯ ಪಾತ್ರಕ್ಕೆ ಜೀವವಿಟ್ಟಿದ್ದಾರೆ, ಬೆಳಗಿಸಿದ್ದಾರೆ.

ಠಾಕೂರರಲ್ಲಿ ಚಿತ್ರಾಂಗದೆಯ ಪರಿಚಯದಲ್ಲಿ ನಾಟಕ ಮುಕ್ತಾಯಗೊಂಡಿದ್ದು ಇಲ್ಲಿ ಎಲ್ಲವೂ ಸುಖಾಂತ್ಯವಾಗುತ್ತದೆ. ಕುವೆಂಪು ಅವರ ಚಿತ್ರಾಂಗದೆಯಲ್ಲಿ ತನ್ನ ನಿಜವಾದ ಪರಿಚಯವನ್ನು ಉತ್ತರ ಚಿತ್ರಾಂಗದಾ ಸಂದರ್ಭದಲ್ಲಿ ಬದಲಾಯಿಸಿ ಅವಳ ಪ್ರಾಣಾರ್ಪಣೆಯ ಪ್ರಸಂಗದಲ್ಲಿ ದುರಂತವನ್ನು ತಂದಿದ್ದಾರೆ. ಕಾರಣ ಚಿತ್ರಾಂಗದೆಯನ್ನು ವೀರಮಾತೆಯಾಗಿ, ತಪಸ್ವಿನಿಯಾಗಿಸಿ ಪರಿತ್ಯಕ್ತಗೊಂಡ ಜೀವಕ್ಕೆ ತ್ಯಾಗವಿಟ್ಟು ಬೆಳೆಸಲೋಸುಗ ಈ ಸಂದರ್ಭವನ್ನು ಉಚಿತವಾಗಿ ತಂದಿದ್ದಾರೆ.

ನಾಡಿನಲ್ಲಿ ಕಳ್ಳರ ಕಾಟದಿಂದಾಗಿ ವನಚಾರಿಗಳು ರಕ್ಷಣೆಗಾಗಿ ಕಾಡಿನಲ್ಲಿ ಸಂಚರಿಸುತ್ತಿರುವಾಗ ಪಾರ್ಥನು ಎದುರಾಗಿ "ಈ ರಾಜ್ಯದಲ್ಲಿ ನಿಮ್ಮನ್ನು ರಕ್ಷಣೆಮಾಡುವರು ಯಾರು ಇಲ್ಲವೇ?" ಎಂದಾಗ, ವನಚಾರಿಗಳು "ಚಿತ್ರಾಂಗದಾ ನಮ್ಮ ಪೊರೆವ ತಾಯಿಯಂತೆ ಇದ್ದಳು. ತಂದೆಯಂತೆ ಕಾಪಾಡುತ್ತಿದ್ದಳು. ಈಗಾಕೆ ಎಲ್ಲಿಯೋ ತೀರ್ಥಯಾತ್ರೆಗೆ ಹೋಗಿದ್ದಾಳೆ" ಎಂದು ವನಚಾರಿಗಳ ಮೂಲಕ ಚಿತ್ರಾಂಗದೆಯ ಬಗ್ಗೆ ಪ್ರಸ್ತಾಪವೆತ್ತಿದ್ದಾರೆ ಠಾಗೂರರು. ಕುವೆಂಪುರವರಲ್ಲಿ ವನಚಾರಿಗಳು ಬರುವುದೇ ಇಲ್ಲ. ಬದಲಾಗಿ ದೂರದ ಬಿಡಾರದಲ್ಲಿ ಹಾಕಿದ್ದ ಭೂಮ್ಯಾಕಾಶವನ್ನು ಪರಿದ್ದ ಹೊಗೆಯಿಂದ ಅದು ಯಾರದೆಂದು ಅರ್ಜುನನು ಕೇಳಲು ಚಿತ್ರಾಂಗದೆಯ ಬಗ್ಗೆ

ಪ್ರಸ್ತಾಪಬರುತ್ತವೆ. ರಾಜಕುಮಾರಿ ಚಿತ್ರಾಂಗದೆಯ ಬಗ್ಗೆ ಚಿತ್ರಾಂಗದೆಯೇ ಹೇಳಿಕೊಳ್ಳುವ ಪ್ರಸಂಗ ಇಬ್ಬರಲ್ಲೂ ಒಂದೆ.

ಪಾತ್ರಗಳ ವಿಷಯದಲ್ಲಿ ಠಾಗೂರರಲ್ಲಿ ಚಿತ್ರಾಪೂರ್ಣ ಶೃಂಗಾರ ರೂಪಿಣಿಯಾಗಿ ಕಾಣಿಸಿಕೊಂಡಿದ್ದಾಳೆ. ತನ್ನ ಸೌಂದರ್ಯರಾಶಿಯ ಬಗ್ಗೆ ಪಶ್ಚಾತ್ತಾಪ-ವಿದ್ದರೂ ಅದನ್ನು ತನಗೆ ಬಂಧ ಮಾಯೆ ಎಂದು ತಿಳಿಸಿಯೆ ಅರ್ಜುನನೊಡನೆ ಮುಂದುವರೆಯುತ್ತಾಳೆ. ಇಲ್ಲಿ ಠಾಕೂರರು ಅತಿಮಾನುಷತೆಯನ್ನು ತಂದಿದ್ದಾರೆ. ಆ ಶಕ್ತಿಗಳ ಮೂಲಕ ಮದನ ವಸಂತರಾಜನ ಆಗಮನಗಳನ್ನು ಪಾತ್ರಗಳಾಗಿ ಚಿತ್ರಿಸಿದ್ದಾರೆ. ಅರ್ಜುನನು ಸಹ ಇಲ್ಲಿ ಉದಾತ್ತ ನಡವಳಿಕೆಯುಳ್ಳವನಾಗಿ ಕಾಣಿಸಿಕೊಳ್ಳುತ್ತಾನೆ. ಮೊದಲು ತಿರಸ್ಕರಿಸಿದ ಎನ್ನುವುದನ್ನು ಬಿಟ್ಟರೆ ಮುಂದೆ ಅವಳ ರೂಪ ಲಾವಣ್ಯಕ್ಕೆ ಮನಸೋತು ತನ್ನ ವ್ರತವನ್ನು ಮರೆತು ಅವಳಲ್ಲಿ ಅನುರಕ್ತನಾಗಲು ಇಚ್ಛಿಸುತ್ತಾನೆ. ಕಡೆಯಲ್ಲಿ ತನ್ನ ಇನಿಯಳ ಬಗ್ಗೆ ತಿಳಿದುಕೊಳ್ಳಲು ಉತ್ಸುಕನಾಗಿ ಆಕೆಯಿಂದಲೇ ಅವಳ ಪರಿಚಯ ಪಡೆಯುತ್ತಾನೆ. ತನಗೆ ಒಂದು ವರ್ಷದವರೆಗೂ ಪ್ರೇಮಸುಧೆಯನ್ನು ನೀಡಿದ ಆ ಸುಂದರ ತರುಣಿಯೇ ಮಣಿಪುರದ ರಾಜಕುಮಾರಿ ಚಿತ್ರಾಂಗದಾ ಎಂದು ತಿಳಿದು ಆಶ್ಚರ್ಯಗೊಂಡು **'ನಿನ್ನಿಂದ ಧನ್ಯನಾದೆ'** ಎಂದು ಹೇಳುತ್ತಾನೆ. ತನ್ನ ವ್ಯಕ್ತಿತ್ವದ ಪರಿಚಯ ಮಾಡಿಸುತ್ತಾನೆ.

ಠಾಕೂರರು ಮೂಲಭಾರತದ ಚಿತ್ರಾಂಗದೆಯನ್ನು ತಮ್ಮ ನಾಟಕಕ್ಕೆ ಆಯ್ದುಕೊಂಡಿದ್ದರೂ, ಇದರಲ್ಲಿ ಆಕೆಯನ್ನು ಹುಟ್ಟಿನಿಂದಲೇ ಕುರೂಪಿಯನ್ನಾಗಿ ಚಿತ್ರಿಸಿದ್ದಾರೆ. ಚಿತ್ರಾಂಗದೆಗೆ ಸಹಜ ಸಾಮಾನ್ಯ ರೂಪವಿದ್ದಿತೇ ಹೊರತು ರಾಜಕುಮಾರಿ-ಯರಿಗಿರಬೇಕಾದ ರೂಪುಲಾವಣ್ಯ ಇರಲಿಲ್ಲವೆಂದು ಚಿತ್ರಿಸಿ ತನ್ನ ಸೌಂದರ್ಯಕ್ಕಾಗಿ ಮದನನ್ನು ವಸಂತರಾಜನನ್ನು ಪ್ರಾರ್ಥಿಸುವಂತೆ ಅತಿಮಾನುಷತೆಯನ್ನು ತಂದಿದ್ದಾರೆ. ತಮ್ಮ ನಾಟಕವನ್ನು ಬೇರೆ ರೀತಿಯ ತಿರುವಿನಿಂದ ರಚಿಸಿದ್ದಾರೆ.

ಈ ಹಂತದಲ್ಲಿ ಠಾಕೂರರ ನಾಟಕ ಸಮಾಪ್ತಿಗೊಳ್ಳುತ್ತದೆ. ಕುವೆಂಪುರವರಲ್ಲಿ ಪೂರ್ವಚಿತ್ರಾಂಗದೆಯೂ ಉತ್ತರ ಚಿತ್ರಾಂಗದೆಯಾಗಿ ಬದಲಾಗಿದ್ದಾಳೆ. ಕಾವ್ಯ ಮುಂದಿನ ಹಂತಕ್ಕೆ ಕಾಲಿಡುತ್ತದೆ. ಇಲ್ಲಿಂದ ಮುಂದೆ ಲಕ್ಷ್ಮೀಶನ ಚಿತ್ರಾಂಗದೆಯನ್ನು ಆರಿಸಿಕೊಂಡಿದ್ದರೂ ಹಲವಾರು ಮಹತ್ವದ ಮಾರ್ಪಾಡುಗಳಿಂದ ಚಿತ್ರಾಂಗದೆಯ ಪಾತ್ರಕ್ಕಾಗಲಿ, ಕಥೆಗಾಗಲೀ ಬೇರೆ ರೀತಿಯ ತಿರುವನ್ನು ನೀಡಿದ್ದಾರೆ. ಠಾಕೂರರ ಚಿತ್ರಾಂಗದೆಯಂತೆ ಪ್ರಣಯಿನಿಯಾಗಿದ್ದ ಚಿತ್ರಾ ಮುಂದೆ ಪ್ರೇಮ ತಪಸ್ವಿನಿಯಾಗಿ,

ವೀರಮಾತೆಯಾಗಿ, ತ್ಯಾಗಮೂರ್ತಿಯಾಗುವ ಜೀವನವನ್ನು ಉತ್ತರ ಚಿತ್ರಾಂಗದೆಯಲ್ಲಿ ಕಾಣಬಹುದು.

ಲಕ್ಷ್ಮೀಶನ ಮತ್ತು ಕುವೆಂಪು ಚಿತ್ರಾಂಗದೆಯರ ತೌಲನಿಕ ದೃಷ್ಟಿ

ಕುವೆಂಪುರವರು ಇದುವರೆಗಿನ ಪೂರ್ವ ಚಿತ್ರಾಂಗದೆಗಿಂತ ಇನ್ನೂ ಮುಂದಿನ ಚಿತ್ರಾಂಗದೆಯು ಕುರಿತು ಲಕ್ಷ್ಮೀಶ ಜೈಮಿನಿಭಾರತದ ಚಿತ್ರಾಂಗದೆಯನ್ನು ಕರೆತಂದಿದ್ದರೂ, ಅನೇಕ ಮಹತ್ವದ ಮಾರ್ಪಾಟುಗಳನ್ನು ಮಾಡಿದ್ದಾರೆ. ಲಕ್ಷ್ಮೀಶನ ಚಿತ್ರಾಂಗದೆಗಿಂತ ಕುವೆಂಪು ಚಿತ್ರಾಂಗದೆಯು ಎಷ್ಟರಮಟ್ಟಿಗೆ ಭಿನ್ನಳಾಗಿದ್ದಾಳೆ. ಕುವೆಂಪು ತಂದಿರುವ ಬದಲಾವಣೆಗಳೇನು? ಆ ಬದಲಾವಣೆಯ ಉದ್ದೇಶ, ಮಹತ್ವಗಳ ಬಗ್ಗೆ ತಿಳಿಯುವ ಮೊದಲು ಜೈಮಿನಿಭಾರತದ ಚಿತ್ರಾಂಗದೆಯ ಕಥಾವಿನ್ಯಾಸವನ್ನು ಅವಲೋಕಿಸೋಣ.

ಜೈಮಿನಿಭಾರತದ ಚಿತ್ರಾಂಗದಾ ಕಥಾವಸ್ತು

"ಗಣ್ಯಮಿದು ಶೃಂಗಾರ ಕುಸುಮ ತರು ತರುಗಿದಾ
ರಣ್ಯಮಿದು ನವರಸ ಪ್ರೌಢಲಾಲಿತ್ಯ ನಾನಾ ವಿಚಿತ್ರಾರ್ಥಂಗಳ"

ಎಂದು ಹೇಳುವ ಲಕ್ಷ್ಮೀಶನು ತನ್ನ ಜೈಮಿನಿಭಾರತದಲ್ಲಿ ಶೃಂಗಾರ ಸಾಂದ್ರತೆಯೂ ನವರಸ ಪ್ರೌಢಿಮೆಯೂ ವ್ಯಕ್ತವಾಗಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ ಅದರ ಒಳಭಾಗದಲ್ಲಿ ಭಕ್ತಿಯಿದೆ. ಹೊರಭಾಗವೂ ಲಾವಣ್ಯದ ಮೈಕಟ್ಟನ್ನು ಹೊಂದಿದೆ.

ಜೈಮಿನಿ ಭಾರತದ ವಸ್ತು ಅಶ್ವಮೇಧಿಕ ಕಥೆ. ಮಹಾಭಾರತ ಯುದ್ಧದ ನಂತರ ಪಾಂಡವರು ಅಶ್ವಮೇಧಯಾಗವನ್ನು ಕೈಗೊಳ್ಳುತ್ತಾರೆ. ಯಜ್ಞಾಶ್ವದ ರಕ್ಷಣೆಗಾಗಿ ಅರ್ಜುನ ಅದರ ಹಿಂದಿರುತ್ತಾನೆ. ಅನೇಕ ರಾಜ್ಯಗಳನ್ನು ಸುತ್ತಿ ಅಶ್ವವು ಮಣಿಪುರಕ್ಕೆ ಬರುತ್ತದೆ. ಹೀಗೆ ಬಂದ ಕುದುರೆಯನ್ನು ಮಣಿಪುರದ ರಾಜಕುಮಾರ ಬಭ್ರುವಾಹನ ಕಟ್ಟಿಹಾಕುತ್ತಾನೆ.

ಕ್ಷಾತ್ರಧರ್ಮದ ಪ್ರಕಾರ ಬಭ್ರುವಾಹನ ಕುದುರೆಯನ್ನು ಕಟ್ಟಿ ಯುದ್ಧ ಮಾಡಲು ಉತ್ಸುಕನಾಗುತ್ತಾನೆ. ಈ ವಿಷಯವನ್ನು ತಿಳಿಸಲು ತಾಯಿ ಚಿತ್ರಾಂಗದೆಯ ಬಳಿ ಬರುತ್ತಾನೆ. "ಅಮ್ಮಾ ಪಾಂಡವರು ಬಿಟ್ಟಿರುವ ಯಾಗದ ಕುದುರೆಯಂತೆ ಯಾರ ಅಪ್ಪಣೆ ಪಡೆಯದೆ ನಮ್ಮಲ್ಲಿ ನಿರಾತಂಕವಾಗಿ ಅಲೆದಾಡುತ್ತಿತ್ತು. ಬೆಂಗಾವಲಿಗೆ ಸ್ವತಃ ಪಾರ್ಥನೆ ಸೇನಾಸಮೇತ ಬಂದಿದ್ದಾನೆ. ಯಾರಾದರೆ ಏನಂತೆ? ಹಸ್ತಿನಾವತಿ ಸಿಂಹಾಸನಕ್ಕೆ ಭೂಮಂಡಲದ ರಾಜರೆಲ್ಲ ಮಣಿಯ ಬೇಕೆಂಬ ನಿಯಮವಿಲ್ಲವಷ್ಟೇ? ನಾನು ಮಣಿಪುರದ ದೊರೆಯಾದುದರಿಂದ ಪಾರ್ಥನು ನನಗೆ ಮಣಿಯಲಿ ಇಲ್ಲದಿದ್ದರೆ

ನನ್ನ ಬಾಹುಬಲವನ್ನು ಪರೀಕ್ಷಿಸಲಿ"[೧] ಎಂದನು. ಬಭ್ರುವಾಹನನಿಗೆ ಅರ್ಜುನನೊಡನೆ ಕಾದಾಡುವ ಹಂಬಲ ಅದನ್ನು ತನ್ನ ತಾಯಿಯ ಬಳಿ ನಿವೇದಿಸಿಕೊಳ್ಳುತ್ತಾನೆ. ಇದನ್ನು ಕೇಳಿದ ಚಿತ್ರಾಂಗದೆ ಮಗನಿಗೆ "ಮಗನೇ ನೀನೆಂತಹ ಪ್ರಮಾದವನ್ನು ಮಾಡಿದೆ? ಮೂರುಲೋಕದ ಗಂಡುಗಲಿ ಸವ್ಯಸಾಚಿಯು ನಿನ್ನ ಹಗೆಯೇ? ಅವನೇ ನಿನ್ನ ಜನ್ಮದಾತ. ಆದ್ದರಿಂದ ಆತನ ಬಳಿಗೆ ಹೋಗಿ ಕಾಲಿಗೆಬಿದ್ದು ಕ್ಷಮಾಪಣೆ ಕೇಳಿ, ಕಪ್ಪ ಕಾಣಿಕೆಗಳನ್ನು ಕೊಟ್ಟು ಅರಮನೆಗೆ ಆಮಂತ್ರಿಸು".[೨] ಎನ್ನುತ್ತಾಳೆ. ತಾಯಿಯಿಂದ ಜನ್ಮರಹಸ್ಯವನ್ನು ಕೇಳಿದ ಮಗ ತನ್ನ ಕ್ಷಾತ್ರ ನೀತಿಯನ್ನು ಬಿಟ್ಟು ತಾಯಿಯ ಆಣತಿಯಂತೆ ನಡೆದುಕೊಳ್ಳುತ್ತಾನೆ. ಬಭ್ರುವಾಹನ ತಾಯಿಯ ಮಾತನ್ನು ನಡೆಸಿಕೊಡುವ ಸಲುವಾಗಿ ಅರ್ಜುನನಲ್ಲಿ ಕ್ಷಮೆ ಕೇಳುತ್ತಾನೆಯೇ ಹೊರತು ಯುದ್ಧ ವಿಮುಖನಾಗಿ ಅಲ್ಲ. ತನ್ನ ತಂದೆಯನ್ನು ಕಾಣಲು ಹೋದಾಗ ಅವನಿಗೆ ಅಲ್ಲಿ ದೊರೆತದ್ದು ಅವಮಾನ, ತಿರಸ್ಕಾರದ ನಿಂದನೆಗಳು. ತನ್ನ ತಾಯಿಯ ಬಗ್ಗೆ ಆಡಬಾರದ ಮಾತುಗಳನ್ನು ತಂದೆಯಾದವನು ಆಡುತ್ತಿದ್ದರೆ ಮಗನಿಗೆ ಸಹಿಸಲಾರದ ಕೋಪ ಬಂದು ಯುದ್ಧಕ್ಕೆ ಕಹಳೆ ಊದಿದನು.

ಲಕ್ಷ್ಮೀಶನು ಯುದ್ಧವರ್ಣನೆಯಲ್ಲಂತೂ ಅದ್ವಿತೀಯ. ವೃಷಭಧ್ವಜ, ನೀಲಧ್ವಜ, ಪ್ರದ್ಯುಮ್ನ, ಅನಿರುದ್ಧಾದಿಗಳು ಬಂದರು ಸಂಗ್ರಾಮ ನಿಲ್ಲಲಿಲ್ಲ. ಕಡೆಗೆ ಅರ್ಜುನನೇ ಸಮರಕ್ಕೆ ಬರುತ್ತಾನೆ. ಇಬ್ಬರು ಚಾಪ ವಿದ್ಯಾ ಪ್ರವೀಣರು. ಇಬ್ಬರೂ ಹೂ ಬಿಟ್ಟ ಮುತ್ತುಗದ ಮರಗಳಂತೆ ಕಾಣುತ್ತಿದ್ದರು.

ಮಗನ ಸಾಹಸ ಕಾರ್ಯವ ನೋಡಿ ಸವ್ಯಸಾಚಿಗೆ ಆಶ್ಚರ್ಯ. ಆ ವೇಳೆಗೆ ಸರಿಯಾಗಿ ಹೂಡಲ್ಪಟ್ಟ ಬಾಣವು ಅರ್ಜುನನ ಶಿರವನ್ನು ತಾಕುತ್ತದೆ. ಅರ್ಜುನನು ಅಸುನೀಗುತ್ತಾನೆ. ಜಯಶೀಲನಾಗಿ ಅರಮನೆಗೆ ಹಿಂತಿರುಗಿದ ಬಭ್ರುವಾಹನನಿಗೆ ಚಿತ್ರಾಂಗದೆಯು ಬೈದು ಹಲುಬುತ್ತಾಳೆ. ತನ್ನ ತಂದೆಯನ್ನು ಬದುಕಿಸಲು ಬಭ್ರವಾಹನ ಪಾತಾಳಲೋಕಕ್ಕೆ ತೆರಳಿ ಸಂಜೀವಕ ಮಣಿಯನ್ನು ಶ್ರೀಕೃಷ್ಣನ ಕೃಪೆಯಿಂದ ತರುತ್ತಾನೆ. ಸಂಜೀವಕದಿಂದ ಪ್ರಾಣವಾಯುವು ಮರಳಿ ಬಂದು ಅರ್ಜುನ ಎದ್ದು ನಿಲ್ಲುತ್ತಾನೆ. ಬಭ್ರುವಾಹನ ಅರ್ಜುನರು ಒಂದಾಗುತ್ತಾರೆ. ಅರ್ಜುನನಿಗೆ ಸ್ವಲ್ಪ ನಾಚಿಕೆಯಾದರೂ ಮಗನನ್ನು ತಬ್ಬಿಕೊಳ್ಳುವನು.

೧. ಲಕ್ಷ್ಮೀಶನ ಜೈಮಿನಿಭಾರತ, ಸಂ: ಬಿ.ಎನ್.ಸಣ್ಣಯ್ಯ ರಾಮೇಗೌಡ, ಅರಿಕೆ.
೨. ಅದೇ

ಸತಿ-ಪತಿಯರು ಒಂದಾಗುವರು. ಚಿತ್ರಾಂಗದೆಯೊಡನೆ ಇನ್ನಿತರ ಸ್ತ್ರೀಯರು ಹಸ್ತಿನಾಪುರಕ್ಕೆ ತೆರಳುತ್ತಾರೆ. ಕಥೆ ಇಲ್ಲಿಗೆ ಸುಖಾಂತ್ಯವಾಗುತ್ತದೆ.

ಲಕ್ಷ್ಮೀಶ ಜೈಮಿನಿಭಾರತದ ಚಿತ್ರಾಂಗದೆಯು ಕೇವಲ ಯುದ್ಧ ಸಂದರ್ಭದಲ್ಲಿ ಪ್ರಾಸಂಗಿಕವಾಗಿ ಕಾಣಿಸಿಕೊಳ್ಳುತ್ತಾಳೆ. ಇಲ್ಲಿ ಯಾರು ಮುಖ್ಯರಲ್ಲ, ಯಾರು ಅಮುಖ್ಯರಲ್ಲ. ಲಕ್ಷ್ಮೀಶನು ಅರ್ಜುನನ ಪ್ರಾಣವನ್ನು ತರಲು ಅತಿಮಾನುಷ ಶಕ್ತಿಗಳನ್ನು ತಂದಿದ್ದಾನೆ. ಮಾನವ ಸಂಘರ್ಷಕ್ಕೆ ಅತಿಮಾನವ ಪರಿಹಾರವನ್ನು ತಂದಿಲ್ಲಿ ಕಥೆಗೆ ಜೀವಂತಿಕೆ ತುಂಬಿದ್ದಾನೆ. ಇದು ಲಕ್ಷ್ಮೀಶನ ಜೈಮಿನಿ ಭಾರತದ ಅರ್ಜುನ ಬಭ್ರುವಾಹನ ಕಾಳಗದ ಕಥಾಹಂದರ.

ತೌಲನಿಕ ನೋಟ

ಕುವೆಂಪುರವರು ಲಕ್ಷ್ಮೀಶನ ಜೈಮಿನಿ ಭಾರತದ ಚಿತ್ರಾಂಗದೆಯನ್ನು ಕೊಂಚ ಮಟ್ಟಿಗೆ ಬಳಸಿಕೊಂಡು, ಸಂಪೂರ್ಣವಾಗಿ ಆಕೆಯ ಪಾತ್ರವನ್ನು ವಿಭಿನ್ನ ರೀತಿಯಲ್ಲಿ ಬೆಳೆಸಿದ್ದಾರೆ. ಇದನ್ನು ಉತ್ತರ ಚಿತ್ರಾಂಗದಾದಲ್ಲಿ ಕಾಣಬಹುದು. ಲಕ್ಷ್ಮೀಶನ ಚಿತ್ರಾಂಗದೆಗಿಂತ, ಕುವೆಂಪು ಚಿತ್ರಾಂಗದೆಯೂ ಸಂಪೂರ್ಣ ಭಿನ್ನವಾಗಿದ್ದಾಳೆ. ಕಥೆ ಮೂಲದಾದ್ದರೂ ಕಲೆ ಕವಿಗಳದು. ಕಥೆಯಲ್ಲಾಗಲೀ, ಪಾತ್ರದಲ್ಲಾಗಲೀ ಕುವೆಂಪು ಹೊಸತನವನ್ನು ಮೆರೆದಿದ್ದಾರೆ. ನೂತನ ಕಾವ್ಯಕಲಾಕೃತಿಯನ್ನು ನಿರ್ಮಿಸಿದ್ದಾರೆ. ಅವರೇ ಹೇಳುವಂತೆ, "ಈ ಚಿತ್ರಾಂಗದೆ ಆ ಚಿತ್ರಗಳೆರಡನ್ನೂ ಕೂಡಿಸಿ ತಯಾರಾದವಳಲ್ಲ. ಅವುಗಳಿಂದ ಮೂಡಿ ಸೃಷ್ಟಿಯಾಗಿದ್ದಾಳೆ. ಗಣಿತ ಕರ್ಮವಾಗಿಲ್ಲ; ಕಲಾಕೃತಿಯಾಗಿದ್ದಾಳೆ."

ಲಕ್ಷ್ಮೀಶನ ಚಿತ್ರಾಂಗದೆ ಹುಟ್ಟಿನಿಂದಲೇ ಸುರಸುಂದರಿ. ಗಂಡಸಿನ ಹಾಗೆ ಕ್ಷಾತ್ರ ತೇಜಸ್ಸು ಅವಳಲ್ಲಿತ್ತು. ಮೊದಲಬಾರಿಗೆ ಅರ್ಜುನನ್ನು ಕಂಡಾಗ ಆಕೆಗೆ ಪ್ರೇಮ ಉದಯಿಸಿ, ತನ್ನ ತಂದೆ ಚಿತ್ರವಾಹನನ ಅಪ್ಪಣೆ ಪಡೆದು ವಿವಾಹವಾಗುತ್ತಾಳೆ. ಕುವೆಂಪುರವರು ಠಾಕೂರರ ಚಿತ್ರಾಂಗದೆಯಂತೆ ಕುರೂಪಿಯನ್ನಾಗಿಸಿ ಮನ್ಮಥನ ಸಹಾಯದಿಂದ ರತಿಸೌಂದರ್ಯದ ರೂಪವನ್ನು ವರವನ್ನಾಗಿ ಪಡೆದು ಅರ್ಜುನನು ತನ್ನನ್ನು ಮೋಹಿಸುವಂತೆ ಮಾಡುತ್ತಾಳೆ. ಗಾಂಧರ್ವವಿಧಿಯಿಂದ ವಿವಾಹವಾಗುತ್ತಾಳೆ.

ಲಕ್ಷ್ಮೀಶನಲ್ಲಿ ಸಂಸ್ಕಾರ ಪಡೆದ, ನಾಗರಿಕತೆಯನ್ನು ಪ್ರದರ್ಶಿಸುವ ಹಾಗೆ ಕಾಣಿಸಿಕೊಳ್ಳುವ ಚಿತ್ರಾಂಗದೆ – ಕುವೆಂಪುರವರಲ್ಲಿ ಅಡವಿಯ ಸ್ತ್ರೀಯಂತೆ, ಅತಿಮಾನುಷ ಶಕ್ತಿಯನ್ನು ಪ್ರಾರ್ಥಿಸಿ ಅದರ ಸಹಾಯದಿಂದ ತನ್ನ ಬಯಕೆಯನ್ನು ಪೂರೈಸಿಕೊಳ್ಳುವ ಕಿರಾತ ಕನ್ಯೆಯಾಗಿ ಕಾಣಿಸುತ್ತಾಳೆ. ಮನ್ಮಥನ ಕೃಪೆಯಿಂದ ಬಂದ

ರೂಪದಿಂದ ಅರ್ಜುನನ್ನು ಒಲಿಸಿಕೊಳ್ಳುತ್ತಾಳೆ. ಇದನ್ನು ಪಾರ್ಥನಿಗೆ ಹೇಳುತ್ತಾಳೆ. ಆದರೆ ತಾನು ರಾಜಕುಮಾರಿ ಚಿತ್ರಾಂಗದಾ ಎಂದು ಹೇಳದೆ ಕೇವಲ ನಿನ್ನಿಂದ ತಿರಸ್ಕೃತಗೊಂಡ ಹೆಣ್ಣು ಎಂದಷ್ಟೇ ಹೇಳಿ ಗರ್ಭಿತ ರಹಸ್ಯೆಯಾಗುಳಿಯುತ್ತಾಳೆ. ತನ್ನ ಅಶಾಶ್ವತ ರೂಪದಿಂದ ಪಾರ್ಥನಿಗೆ ಮೋಸ ಮಾಡುತ್ತಿದ್ದೇನೆ ಎಂಬ ಪಶ್ಚಾತ್ತಾಪದ ಬೇಗುದಿಯಲ್ಲಿ ಬೇಯುವುದಕ್ಕಿಂತ ನಿಜಸಂಗತಿಯನ್ನು ಹೇಳುತ್ತಾಳೆ.

ಮುಂದೆ ಅರ್ಜುನ-ಚಿತ್ರಾಂಗದೆಯರ ಪ್ರಣಯಪ್ರಸಂಗ ಪ್ರೀತಿಯ ಸಾಗರದಲ್ಲಿ ತೇಲಿ, ಚಿಲುಮೆಯಂತಾಗುತ್ತಾರೆ. ದಿನಗಳು ಕಳೆದಂತೆ ಅರ್ಜುನನ ಅಗಲಿಕೆಯ ಪ್ರಸಂಗ ಎದುರಾಗುತ್ತದೆ. ಅರ್ಜುನನ ನಿರ್ಗಮನದಿಂದ ದುಃಖಿತಳಾದ ಚಿತ್ರೆಯ ಕಾಮ ಪ್ರೇಮಕ್ಕೆ ತಿರುಗುತ್ತದೆ. ಮುಂದೆ ಕುವೆಂಪು ತಮ್ಮ ಕಲ್ಪನಾ ಲಹರಿಯನ್ನು ಮುಂದುವರೆಸಿದ್ದಾರೆ. ಅರ್ಜುನನು ಆರು ತಿಂಗಳಿಗೆ ಬರುವನೆಂಬ ವಚನವನ್ನು ನೆನೆದು ಮನದಲ್ಲಿ ತುಂಬಿಕೊಂಡು ಅವನು ಕೊಟ್ಟ ಉಂಗುರವನ್ನು ಬಚ್ಚಿಟ್ಟುಕೊಂಡು ತನ್ನ ಅರಮನೆಗೆ ಹಿಂತಿರುಗುತ್ತಾಳೆ. ಆರು ತಿಂಗಳು ಕಳೆವವರೆಗೂ ಅವಳ ವಿರಹದ ತಾಪವನ್ನು ಬಣ್ಣಿಸುವ ಬಗ್ಗೆ ಅಮೋಘವಾದುದು. ಷಟ್ ಮಾಸಗಳು ಕಳೆದು ಇನಿಯನ ಕಾಣುವ ಹಂಬಲದಿಂದ ಕಾನನಕ್ಕೆ ತೆರಳಿ ಪಾರ್ಥನ ಬರುವಿಕೆಯನ್ನು ಎದುರು ನೋಡುತ್ತಿರುತ್ತಾಳೆ. ಆದರೆ ಅವಳ ಆಶಾಗೋಪುರ ಗಾಳಿ ಗೋಪುರ-ವಾಗುತ್ತದೆ. ಅತೀವ ದುಃಖದಿಂದ ಆತ್ಮಹತ್ಯೆಗೆ ಪ್ರಯತ್ನಪಡುತ್ತಾಳೆ. ನಂತರ ಸಮುದ್ರಮೂರ್ತಿಯ ದರ್ಶನವಾಗಿ ಅವಳಿಗೆ ಜೀವನ ಪ್ರೀತಿಯು ಉಪದೇಶಾಮೃತವನ್ನು ನೀಡುತ್ತದೆ. ಅವಳ ಜವಾಬ್ದಾರಿಯನ್ನು ನೆನಪಿಸುತ್ತದೆ. ಚಿತ್ರಾಂಗದೆಯು ಮುಂದೆ ಒಬ್ಬ ತಾಯಿಯಾಗಿ ಜೀವನವನ್ನು ರೂಪಿಸಿಕೊಳ್ಳುತ್ತಾಳೆ. ತನ್ನ ಮಗನಿಗೆ ಬೇಕಾದ ಎಲ್ಲಾ ವೀರೋಚಿತ ವಿದ್ಯೆಯನ್ನು ಹೇಳಿಕೊಡುತ್ತಾಳೆ. ಮಗನನ್ನು ಒಬ್ಬ ಸಮರ್ಥ ರಾಜನನ್ನಾಗಿ ಪ್ರಜಾಪಾಲಕನಾಗುವಂತೆ ಬೆಳೆಸುತ್ತಾಳೆ. ಶೌರ್ಯದಲ್ಲಿ ತಂದೆ ತಾಯಿಯರನ್ನು ಮೀರಿಸುವ ಗಂಡುಗಲಿಯಾಗಿ ಬಭ್ರುವಾಹನ ಬೆಳೆಯುತ್ತಾನೆ. ಮಹಾಭಾರತದ ಯುದ್ಧಕಾಲ ಆರಂಭ, ಪಾಂಡವರಿಗೆ ಅದರಲ್ಲೂ ಅರ್ಜುನನ ಕ್ಷೇಮಕ್ಕೆ ಚಿತ್ರಾಂಗದೆ ತಪಸ್ಸನ್ನು ಆಚರಿಸುವುದು. ಯುದ್ಧದಲ್ಲಿ ತಾನು ಹೋಗಿ ಮಣಿಪುರಕ್ಕೆ ಕೀರ್ತಿ ತರುವೆನೆಂದು ಬಭ್ರುವಾಹನ ಉತ್ಸುಕನಾಗುವುದು. ಈ ಎಲ್ಲಾ ಘಟನೆಗಳ ಜೊತೆಗೆ ಕುವೆಂಪುರವರು ತಮ್ಮ ಸ್ವಂತ ಪ್ರತಿಭೆಯ ಬಲದಿಂದ ಕಥೆಯಲ್ಲಿ ಹಲವು ಅಂಶಗಳನ್ನು ತಂದು ನವೀನತೆಯನ್ನು ತುಂಬಿದ್ದಾರೆ.

ಲಕ್ಷ್ಮೀಶನಲ್ಲಿ ಕೆಲವು ಘಟನೆಗಳ ವಿವರ ಇಲ್ಲವಾದರೂ ಕುವೆಂಪುರವರ ಪೂರ್ಣದೃಷ್ಟಿ ಇಲ್ಲಿ ಕೆಲಸಮಾಡಿದೆ. ಇಂತಹ ಸಂದರ್ಭಗಳನ್ನು ಕವಿ ಸಮರ್ಥವಾಗಿ ದುಡಿಸಿಕೊಂಡಿದ್ದಾರೆ.

ಮಹಾಭಾರತ ಯುದ್ಧ ಮುಗಿದ ಅಶ್ವಮೇಧಯಾಗದ ಕಾಲ ಸನ್ನಿಹಿತವಾಗುತ್ತದೆ. ಹಯವು ಹಲವಾರು ರಾಜ್ಯಗಳನ್ನು ಸುತ್ತಿ ಮಣಿಪುರಕ್ಕೆ ಬರುತ್ತದೆ. ಬಭ್ರುವಾಹನ ಮೂರು ಲೋಕದ ಸವ್ಯಸಾಚಿಯು ಕುದುರೆಯ ರಕ್ಷಣೆಗೆಂದು ಬಂದಿರುವುದನ್ನು ತಿಳಿದು ಆತನೊಡನೆ ಸಮರ ಸನ್ನದ್ಧನಾಗಲು ಕುದುರೆಯನ್ನು ಕಟ್ಟಿಹಾಕುತ್ತಾನೆ. ಈ ವಿಷಯವನ್ನು ತಾಯಿಗೆ ತಿಳಿಸಲು ಹೋಗುತ್ತಾನೆ.

- ಲಕ್ಷ್ಮೀಶನಲ್ಲಿ, ಬಭ್ರುವಾಹನನು ತಾಯಿಗೆ ಕುದುರೆಯನ್ನು ಕಟ್ಟಿಹಾಕಿರುವ ಸಂಗತಿಯನ್ನು ಮತ್ತು ಅವರ ರಕ್ಷಣೆಗೆ ಅರ್ಜುನನು ಬಂದಿರುವ ವಿಷಯವನ್ನು ತಿಳಿಸುತ್ತಲೇ ಚಿತ್ರಾಂಗದೆಗೆ ಸಂತೋಷವೋ ಸಂತಸ. ಹಲವಾರು ವರ್ಷಗಳ ಬಳಿಕ ತನ್ನ ಪತಿಯನ್ನು ಕಾಣುವ ತವಕ ಮಗನಿಗೆ ಅರ್ಜುನನೇ ನಿನ್ನ ತಂದೆ, ಆತನೊಡನೆ ಕಾದಾಡುವುದು ಉಚಿತವಲ್ಲ ಎಂದು ತಂದೆಯಲ್ಲಿ ಕ್ಷಮಾಪಣೆ ಕೇಳಿ ಕಪ್ಪಕಾಣಿಕೆಗಳನ್ನು ಕೊಡಬೇಕೆಂದು ಬುದ್ಧಿಹೇಳುತ್ತಾಳೆ.
- ಕುವೆಂಪುರವರಲ್ಲಿ, ಬಭ್ರುವಾಹನ ಯುದ್ಧ ಮಾಡಲು ತಾಯಿಯ ಆಶೀರ್ವಾದ ಮತ್ತು ಒಪ್ಪಿಗೆ ಪಡೆಯಲು ಪರ್ಣಕುಟಿಗೆ ಹೋಗಿದ್ದಾಗ

> "......ಬಾಲ್ಯ ಕಾಲದಲಿ
>
> ಕಲಿಯಾದೆನಾನರ್ಜುನನ ನಾಮಜಪದಿಂದೆ
>
> ಬಿಲ್ಬಿಜ್ಜೆಯಂ ಕಲಿತು! ನಾನಲ್ತೆ ಗುರುನಿನಗೆ
>
> ಗುರುಗೆ ಗುರುವಾದವಗೆ ಗೌರಪಮೆ ಗುರುಗಾಣ್ಕೆ
>
> ಗುರು ಪಿತೃಗೆ ಸಮನಲ್ತೆ"

ಚಿತ್ರಾಂಗದೆಯು ಯುದ್ಧವು ತರವಲ್ಲ. ಅರ್ಜುನನು ನನಗೆ ಬಾಲ್ಯಕಾಲದ ಗುರು. ಗುರು ಪಿತೃವಿಗೆ ಸಮ. ಯಾಗದ ಕುದುರೆಯನ್ನು ಬಿಟ್ಟುಬಿಡುವಂತೆ ಹೇಳಿ-ಕಳುಹಿಸುತ್ತಾಳೆ.

ಈ ಸಂದರ್ಭಗಳನ್ನು ಹೋಲಿಸಿದಾಗ ಲಕ್ಷ್ಮೀಶನ ಚಿತ್ರಾಂಗದೆ ತನ್ನ ಮಗನಿಗೆ ಅರ್ಜುನನೇ ನಿನ್ನ ತಂದೆ ಎಂದು ಹೇಳುತ್ತಾಳೆ. ಕುವೆಂಪುರವರು ಇಲ್ಲಿಯೂ ತಂದೆಯ ಬಗ್ಗೆ ಯಾವ ಒಂದು ಬಗೆಯ ರಹಸ್ಯವನ್ನು ಹೇಳಿಸದೆ ಕೇವಲ ಬಾಲ್ಯ ಕಾಲದ ಗುರುವೆಂದು ಹೇಳಿಸುತ್ತಾರೆ. ಈ ಬದಲಾವಣೆಗೆ ಕಾರಣವಿಷ್ಟೇ ಚಿತ್ರಾಂಗದೆಯನ್ನು ಪ್ರೇಮ ತಪಸ್ವಿನಿಯಾಗಿ ತೋರಿಸಲು ಇಲ್ಲಿಯೂ ಸಹ ತನ್ನ ಪತಿ

ಯಾರೆಂದು ಹೇಳಿಸದೆ ಬಿಟ್ಟಿದ್ದಾರೆ. ಈ ಸಂದರ್ಭವು ಚಿತ್ರಾಂಗದೆಯ ದುರಂತಕ್ಕೆ ನಾಂದಿ ಹಾಡಿದಂತಿದೆ.

ಮಗನಿಂದ ಅಪೇಕ್ಷಿಸದ ಉತ್ತರವು ಇನ್ನೂ ಬಾರದೆ ಇದ್ದುದರಿಂದ ಚಿತ್ರಾಂಗದೆಗೆ ಮನಸ್ಸಿನಲ್ಲಿ ತಳಮಳ. ಧ್ಯಾನಕ್ಕೆಂದು ಕೂರುತ್ತಾಳೆ. ಕವಿ ಇಲ್ಲಿ ರುಚಿರಮೂರ್ತಿಯ ದರ್ಶನವಾಗಿ ತಂದೆ ಮಕ್ಕಳ ಕಾಳಗದ ಬಗ್ಗೆ ಕೇಳಿ ತಾನು ಏನು ಮಾಡಬೇಕೆಂಬ ಸಂದೇಶವನ್ನು ಪಡೆದು ಶ್ವೇತ ಪತಾಕೆಯನ್ನು ಹಿಡಿದು ರಣರಂಗಕ್ಕೆ ಧಾವಿಸುತ್ತಾಳೆ. ರಣರಂಗದಲ್ಲಿನ ಭೀಕರ ಬಾಣಗಳ ಮಧ್ಯೆ ನುಸುಳಿದ ಚಿತ್ರಾಂಗದೆಯ ದೇಹ ಶರದಿಂದ ತುಂಬಿತು. ಆ ಕ್ಷಣಗಳಲ್ಲಿ ಆಕೆಯನ್ನು ಹಿಡಿದುಕೊಳ್ಳಲು ತಂದೆ-ಮಗ ಇಬ್ಬರು ಧಾವಿಸುತ್ತಾರೆ. ಸಾವು-ಬದುಕುಗಳ ನಡುವೆ ಹೋರಾಡುತ್ತಿದ್ದ ಚಿತ್ರಾಂಗದೆ ತನ್ನ ಪತಿಯನ್ನು ಮಗನಿಗೆ ಪರಿಚಯಿಸಿ ಮಗನಿಗೆ ತನ್ನ ತಂದೆಯನ್ನು ಪರಿಚಯಿಸಿ ಶಾಂತಿಯನ್ನು ನುಡಿದು ಶಿವನಾಮವನ್ನು ಜಪಿಸಿ ಕೊನೆಯುಸಿರೆಳೆಯುತ್ತಾಳೆ.

ಲಕ್ಷ್ಮೀಶನಂತೆ ಇಲ್ಲಿ ಕುವೆಂಪುರವರ ಕಾವ್ಯ ಅತಿಮಾನುಷತೆಯಿಂದ ಪಾರಾಗಿಲ್ಲ. ತಂದೆ ಮಕ್ಕಳ ಕಾಳಗದಲ್ಲಿ ತಂದೆಯನ್ನು ಕೊಂದು ಅತಿಮಾನುಷತೆಯಿಂದ ಜೀವವನ್ನು ಉಳಿಸುವ ಪ್ರಯತ್ನವನ್ನು ಮಾಡಿಲ್ಲ. ಬದಲಿಗೆ ಅತಿಮಾನುಷ ಶಕ್ತಿಯ ಪ್ರಭಾವದಿಂದ ಚಿತ್ರಾಂಗದೆಗೆ ತನ್ನ ಮುಂದಿನ ಕಾರ್ಯದ ಬಗ್ಗೆ ಹೇಳುವ ರುಚಿರಮೂರ್ತಿಯು ಪ್ರಾಣವನ್ನು ಕೊಟ್ಟಾದರೂ ಸರಿಯೇ ತಂದೆ ಮಕ್ಕಳನ್ನು ಉಳಿಸು ಎಂದು ಬೋಧಿಸುತ್ತದೆ. ಕುವೆಂಪು ಇಲ್ಲಿ ಮಹತ್ವದ ಮಾರ್ಪಾಡುಗಳನ್ನು ಮಾಡಿ ಚಿತ್ರಾಂಗದೆಯನ್ನು ಅವಳ ವ್ಯಕ್ತಿತ್ವವನ್ನು ಉತ್ತುಂಗಕ್ಕೆ ಏರಿಸಿದ್ದಾರೆ.

ಅರ್ಜುನನಿಗಾಗಿ ಅನೇಕ ಸಂವತ್ಸರಗಳನ್ನು ಕಳೆದು ಅವನ ನೆನಪಲ್ಲೇ ತನ್ನ ಜೀವನವನ್ನು ಕಳೆದು, ಪ್ರಣಯಕಾಮಿನಿಯಿಂದ ಪ್ರೇಮತಪಸ್ವಿನಿಯಾಗಿ, ವೀರಮಾತೆ-ಯಾಗಿ ತ್ಯಾಗಮೂರ್ತಿಯಾಗಿ ಎಲ್ಲರ ಹೃನ್ಮನಗಳಲ್ಲೂ ಉಳಿಯುತ್ತಾಳೆ ಈ ಚಿತ್ರಾಂಗದೆ.

ಕುವೆಂಪು ಚಿತ್ರಾಂಗದೆಯ ಪಾತ್ರವನ್ನು ತಮ್ಮ ಕಾವ್ಯಕ್ಕೆ ಆಯ್ಕೆಮಾಡಿಕೊಂಡು, ಕೆಲವು ಮಹತ್ವದ ಮಾರ್ಪಾಡುಗಳನ್ನು ಮಾಡಿಕೊಂಡು ಆ ಎಲ್ಲಾ ಚಿತ್ರಾಂಗದೆ-ಯರಿಗಿಂತಲೂ (ವ್ಯಾಸ, ಲಕ್ಷ್ಮೀಶ, ಠಾಕೂರ) ವಿಭಿನ್ನ ರೀತಿಯಲ್ಲಿ ಒಡಮೂಡಿದ್ದಾಳೆ. ಮತ್ತೆ ಜನ್ಮವೆತ್ತಿದ್ದಾಳೆ. ಕುವೆಂಪು ಚಿತ್ರಾಂಗದಾ ಕಾವ್ಯಕ್ಕೆ ಲಕ್ಷ್ಮೀಶ ಠಾಕೂರರ ಪ್ರಭಾವ ಕೊಂಚಮಟ್ಟಿಗೆ ಇದ್ದರೂ ತಮ್ಮ ದರ್ಶನ ಶಕ್ತಿಯಿಂದ ಅಪೂರ್ವ ಪ್ರತಿಭೆಯ ಬಲದಿಂದ ಇಂದಿನ ಕಾಲಕ್ಕೆ ತಕ್ಕಂತೆ ರಚಿಸಿದ್ದಾರೆ. ವ್ಯಾಸಭಾರತದ ಪುಟ್ಟ ಕಥೆಯಂತಿರುವ ಚಿತ್ರಾಂಗದೆಯನ್ನು ಬೃಹತ್ ಕಾವ್ಯದ ಮೂಲಕ ಹಲವು ಬದಲಾವಣೆಗಳನ್ನು ಮಾಡಿ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. 'ಚಿತ್ರಾಂಗದಾ" ಖಂಡಕಾವ್ಯ ಕನ್ನಡಕ್ಕೆ ಕವಿಕೊಟ್ಟ ಅಮೂಲ್ಯ ಕಾಣಿಕೆಯಾಗಿದೆ.

ಉಪಸಂಹಾರ

ಪೌರಾಣಿಕವಾದ ಚಿತ್ರಾಂಗದೆಯ ಪಾತ್ರವನ್ನು ಆಯ್ದುಕೊಂಡು ಆ ಪಾತ್ರಕ್ಕೆ ತಮ್ಮದೇ ಆದ ರೀತಿಯ ನೂತನ ಚಿತ್ರಾಂಗದೆಯನ್ನು ಮೂಡಿಸಿದ್ದಾರೆ. ಪಾತ್ರಗಳಾಗಲೀ, ಕಥೆಯಾಗಲೀ ಮೂಲದ್ದಾದ್ದರೂ, ಅವುಗಳಿಗೆ ಇಂದಿನ ಕಾಲಕ್ಕೆ ತಕ್ಕಂತಹ ಅಗತ್ಯತೆಗಳನ್ನು ಮನಗಂಡು ತಮ್ಮ ಕಲ್ಪನಾಪ್ರತಿಭೆಯ ಬಲದಿಂದ ಚಿತ್ರಾಂಗದಾ ಖಂಡಕಾವ್ಯವನ್ನು ಕವಿ ರಚಿಸಿದ್ದಾರೆ.

ಚಿತ್ರಾಂಗದೆ ಕಥೆ ವ್ಯಾಸರಲ್ಲಾಗಲೀ, ಲಕ್ಷ್ಮೀಶನಲ್ಲಾಗಲೀ, ಠಾಕೂರರಲ್ಲಾಗಲೀ ಪೂರ್ಣತೆಯನ್ನು ಪಡೆದುಕೊಂಡಿಲ್ಲ. ಇದಕ್ಕೆ ಕಾರಣ ಅದರ ಅಪೂರ್ಣತೆಯ ಮುಂದಿನ ಊಹೆಯನ್ನು ನಮ್ಮ ಚಿತ್ತಕ್ಕೆ ಬಿಟ್ಟಿರಬಹುದು. ಕುವೆಂಪುರವರು ಈ ಪಾತ್ರದ, ಕಥೆಯ ಪೂರ್ಣತೆಯನ್ನು ತಂದುಕೊಟ್ಟು ಉತ್ತಮ ಕಾವ್ಯ ಕಲಾ ಕೃತಿಯನ್ನಾಗಿ ಮಾಡಿದ್ದಾರೆ.

ಚಿತ್ರಾಂಗದೆ ಸಂಪೂರ್ಣ ಜೀವನವನ್ನು ತಮ್ಮ ಕಾವ್ಯದಲ್ಲಿ ಹಿಡಿದುಕೊಟ್ಟಿರುವ ಕವಿ ಹೆಣ್ಣಿನ ಮನಸ್ಸಿನ ಆಂತರಿಕ ತುಮುಲ ಗೊಂದಲಗಳನ್ನು, ಭಾವನೆಗಳನ್ನು ಅತಿ ಸೂಕ್ಷ್ಮಾತಿಸೂಕ್ಷ್ಮ ರೀತಿಯಲ್ಲಿ ವಿವರಿಸಿದ್ದಾರೆ. ಮೊದಮೊದಲು ಪುರುಷರಂತೆಯೇ ಬೆಳೆದ ಚಿತ್ರಾಂಗದೆ ಯೌವ್ವನಕ್ಕೆ ಕಾಲಿಟ್ಟಾಗ ಸ್ತ್ರೀ ಸಹಜ ಬಯಕೆಗಳು ಅವಳನ್ನು ಆವರಿಸಿ ಆ ಕ್ಷಣದಲ್ಲಿ ಆಕೆ ತೆಗೆದುಕೊಂಡ ನಿರ್ಧಾರ ಮನೋವೈಜ್ಞಾನಿಕ ದೃಷ್ಟಿಯಿಂದ ಸರಿಕಾಣಬಹುದು. ಆದರೆ ಮನಸ್ಸಿಗೆ ಬಂದಂತೆ ಕೈಗೊಳ್ಳುವ ನಿರ್ಧಾರಗಳು ಕೆಲವೊಮ್ಮೆ ತೊಡಕನ್ನುಂಟುಮಾಡಬಹುದು. ಇದಕ್ಕಾಗಿ ಸಮಾಜವು 'ವಿವಾಹ' ಎಂಬ ವೇದಿಕೆಯನ್ನು ಸಿದ್ಧಪಡಿಸಿಕೊಟ್ಟಿದೆ. ಇದನ್ನು ಮೀರಿದ ಚಿತ್ರಾಂಗದೆ ಗಾಂಧರ್ವ ರೀತಿಯಲ್ಲಿ ಅರ್ಜುನನ್ನು ವಿವಾಹವಾಗುವುದು ಅದಕ್ಕೂ ಮುನ್ನ ತಾನು ಅರ್ಜುನನ್ನು ಒಲಿಸಿಕೊಳ್ಳಲು ಸುಂದರವಾಗಬೇಕೆಂದು ಹಂಬಲಿಸುವುದು ಇದೆಲ್ಲಾ ಸ್ತ್ರೀ ಸಹಜ ಬಯಕೆಗಳೇ ಆದರು ಅದನ್ನು ಸಂಪಾದಿಸುವಲ್ಲಿ ಕವಿ ಅತಿಮಾನುಷ ಶಕ್ತಿಯನ್ನು ತಂದಿದ್ದಾರೆ. ಮನ್ಮಥನ ಆಗಮನ, ಸೌಂದರ್ಯವನ್ನು ದಯಪಾಲಿಸುವುದು ಇವೇ ಮುಂತಾದವು.

ಚಿತ್ರಾಂಗದೆಯು ಅರ್ಜುನ ತನ್ನ ಸೌಂದರ್ಯಕ್ಕೆ ದಾಸನಾದಾಗ ತಾನು ಆ ಕ್ಷಣಕ್ಕೆ ಮನಸೋಲದೆ ಅತಿಬುದ್ಧಿವಂತಿಕೆಯಿಂದ ನಡೆದುಕೊಳ್ಳುತ್ತಾಳೆ. ಅವನ ಬ್ರಹ್ಮಚರ್ಯೆ ವ್ರತವನ್ನು ನೆನಪು ಮಾಡಿಕೊಡುತ್ತಾಳೆ. ಇಲ್ಲಿ ಆಕೆಯ ಸಮಯ ಪ್ರಜ್ಞೆಯನ್ನು ಕಾಣಬಹುದು. ಒಂದು ತಿಂಗಳ ಕಾಲ ಸಮಯದ ಅರಿವಿಲ್ಲದೆ ಇಬ್ಬರು

ಸುಖಲಹರಿಯಲ್ಲಿ ತೇಲಿದ ನಂತರ ಅಗಲಿಕೆಯ ಸಂದರ್ಭ ಬರುತ್ತದೆ. ಚಿತ್ರಾಂಗದೆಯನ್ನು ಬಿಟ್ಟು ಅರ್ಜುನ ಹೊರಟುಹೋಗುತ್ತಾನೆ. ಈ ಸಂದರ್ಭದ ವಿರಹ ವೇದನೆಯನ್ನು ಕವಿ ಪ್ರಕೃತಿಯ ಪ್ರಾಣಿ–ಪಕ್ಷಿ ಸಂಕುಲಗಳೊಂದಿಗೆ ಹೋಲಿಸಿ ಹೆಚ್ಚು ಪರಿಣಾಮಕಾರಿ ಯಾದ ರೀತಿಯಲ್ಲಿ ಮನದಟ್ಟಾಗುವಂತೆ ಚಿತ್ರಿಸಿದ್ದಾರೆ.

ಪ್ರೇಮ, ತ್ಯಾಗ ಮುಂತಾದ ಮೌಲ್ಯಗಳನ್ನು ಈ ಖಂಡಕಾವ್ಯದಲ್ಲಿ ಚಿತ್ರಾಂಗದ ಪಾತ್ರದ ಮೂಲಕ ಮೆರೆಸಿದ್ದಾರೆ. ಮೊದಮೊದಲು ಶೃಂಗಾರ, ವೀರರಸದ ಕಡಲಿನಲ್ಲಿ ತೇಲಿದ ಚಿತ್ರಾಂಗದೆ ನಂತರದ ಜೀವನದಲ್ಲಿ ಕರುಣರಸದ ಸಾಗರದಲ್ಲಿ ಮುಳುಗಿದ್ದಾಳೆ. ಇಲ್ಲಿ ಕಾಮವು ಪ್ರೇಮವಾಗಿ ಬದಲಾಗಿರುವ ಮಹತ್ವದ ಸನ್ನಿವೇಶವನ್ನು ಕವಿ ತಂದಿದ್ದಾರೆ. ಒಂದು ಹೆಣ್ಣು ಜೀವನದಲ್ಲಿ ಅಡ್ಡದಾರಿ ತುಳಿದು ಪಶ್ಚಾತ್ತಾಪದ ಮೂಲಕ ಮಹಾಸಾಧ್ವಿಯಾಗುವ ಸುಂದರ ಕಥಾನಕವನ್ನು ಸೃಷ್ಟಿಸಿರುವ ಕವಿಗಳು ಇದಕ್ಕಾಗಿ ಮೌಲ್ಯಗಳ ಮಹಾಪೂರವಾದ 'ಮಹಾಭಾರತ'ದ ಸಾಗರದಲ್ಲಿ, ಒಂದು ಪಾತ್ರವನ್ನು ಆಯ್ದು ತೆಗೆದು ತಮ್ಮ ಪ್ರತಿಭಾ ಬಲದಿಂದ ಕಲ್ಪನಾ ಸಾಮರ್ಥ್ಯದಿಂದ ನೂತನ ಕಾವ್ಯಕಲಾಕೃತಿಯನ್ನಾಗಿ ಮಾಡಿದ್ದರೆ.

ಠಾಕೂರರ ಚಿತ್ರಾಂಗದೆ ಮತ್ತು ಲಕ್ಷ್ಮೀಶನ ಚಿತ್ರಾಂಗದೆಯನ್ನು ತಮ್ಮ ಕಾವ್ಯಕ್ಕೆ ಬಳಸಿಕೊಂಡಿದ್ದರೂ, ಈ ಇಬ್ಬರು ಚಿತ್ರಾಂಗದೆಯರಿಗಿಂತಲೂ ವಿಭಿನ್ನವಾಗಿ, ವಿಶಿಷ್ಟವಾಗಿ ಮೂಡಿಬಂದಿದ್ದಾಳೆ ಕುವೆಂಪು ಚಿತ್ರಾಂಗದೆ. ತಮ್ಮ ಪೂರ್ಣ ದೃಷ್ಟಿಯಿಂದ ಚಿತ್ರಾಂಗದೆ ಪೂರ್ಣ ಜೀವನವನ್ನು ನಮ್ಮ ಮುಂದೆ ಸಾಕ್ಷಾತ್ಕರಿಸಿಕೊಟ್ಟಿದ್ದಾರೆ. ಚಿತ್ರಾಂಗದೆ ತನ್ನ ಇನಿಯನಿಗಾಗಿ ತನ್ನ ಸರ್ವಸ್ವವನ್ನು ತ್ಯಾಗ ಮಾಡಿ ಆ ತ್ಯಾಗದ ಹಾದಿಯಲ್ಲಿ ತಮ್ಮ ಮುಂದಿನ ಬದುಕನ್ನು ಸವೆಸುತ್ತಾಳೆ. ಗಾಂಧರ್ವ ರೀತಿಯ ವಿವಾಹದಿಂದ ಕೇವಲ ಒಂದು ತಿಂಗಳ ಅವಧಿಯಷ್ಟು ದಿನ ಅರ್ಜುನನ ಜೊತೆಗಿದ್ದ ಚಿತ್ರಾಂಗದೆ ಆತನನ್ನು ತನ್ನ ಪತಿಯಾಗಿ ಸ್ವೀಕರಿಸಿ, ಜೀವಮಾನದುದ್ದಕ್ಕೂ ಅವನ ನೆನಪಲ್ಲೆ ಬದುಕುಳಿಯುವ ಚಿತ್ರಾಂಗದೆಯ ವ್ಯಕ್ತಿತ್ವ ಶಿಖರಪ್ರಾಯವಾದುದು. ಅರ್ಜುನ ವಚನಭ್ರಷ್ಟನಾಗಿ ನಡೆದುಕೊಂಡಿದ್ದರೂ ಅವನ ಮೇಲೆ ಕೋಪಗೊಳ್ಳದೆ, ಸಾಧ್ವಿಯಂತೆ ನಡೆದುಕೊಳ್ಳುತ್ತಾಲೆ. ಅಧಿಕಾರವೆಲ್ಲ ಸಂಪೂರ್ಣವಾಗಿ ಅವಳ ಕೈಯಲ್ಲಿದ್ದರೂ ತಾನು ಬೇರೊಂದು ವಿವಾಹವಾಗದೆ ಅರ್ಜುನನ ಮಗನಿಗೆ ಜನ್ಮ ನೀಡುತ್ತಾಳೆ. ಆ ಮಗುವಿನ ಲಾಲನೆ ಪಾಲನೆಯಲ್ಲಿ ತನ್ನ ಸಂತೋಷವನ್ನು ಕಾಣುತ್ತಾಳೆ. ತನ್ನ ಪತಿದೇವನಿಗಾಗಿ ಪ್ರಾಣವನ್ನು ಸಮರ್ಪಿಸಿಕೊಳ್ಳುತ್ತಾಳೆ. ಇಂತಹ ಮಾತೆಯ ಸ್ಮರಣಾರ್ಥವಾಗಿ ಮಣಿಪುರದ ಜನತೆ ಅಮೃತಶಿಲೆಯಲ್ಲಿ ಸ್ಮಾರಕವೊಂದನ್ನು ಕಟ್ಟುತ್ತಾರೆ. ಇಲ್ಲಿ ಕವಿಯ

ದರ್ಶನವನ್ನು ಕಾಣಬಹುದು. ಭಾವನೆಗಳ ಮಹಾಪೂರವೇ ಹರಿದುಬಂದಿದೆ. ಪ್ರೇಮ ತಪಸ್ವಿನಿಯಾಗಿ ಬಾಳಿದ ಚಿತ್ರಾಂಗದೆಯ ವ್ಯಕ್ತಿತ್ವ ಇಂದಿನವರೆಗೆ ಮಾದರಿಯಾಗಿದೆ.

ಇನ್ನು ಪಾತ್ರಗಳ ವಿಚಾರದಲ್ಲಿ ಕುವೆಂಪು ತನ್ನ ರಚನಾ ಕುಶಲತೆಯನ್ನು ತಂದು ಆಯಾ ಪಾತ್ರಗಳಿಗೆ ನ್ಯಾಯ ದೊರಕಿಸಿಕೊಟ್ಟಿದ್ದಾರೆ. ಇಲ್ಲಿ ಯಾವ ಪಾತ್ರವನ್ನು ಮುಖ್ಯವಾಗಿ ತೆಗೆದುಕೊಂಡು ನೋಡಿದಾಗ ಅಲ್ಲಿ ಅವುಗಳ ಮಹತ್ವವನ್ನು ಕಾಣಬಹುದು. ಎಲ್ಲಾ ಪಾತ್ರಗಳು ತಮ್ಮ ತಮ್ಮ ಕಾರ್ಯಗಳನ್ನು ಜವಾಬ್ದಾರಿಯಾಗಿ ನಿಭಾಯಿಸಿವೆ. ಇಲ್ಲಿ ಯಾವ ಪಾತ್ರಗಳು ಕೀಳಲ್ಲ. ಇಂದಿನ ಪ್ರಸ್ತುತ ಸಂದರ್ಭಕ್ಕೆ ತಕ್ಕ ಹಾಗೆ ಆ ಪಾತ್ರಗಳ ಸ್ಥಾನಮಾನಗಳು ನಿಂತಿವೆ. ಕಾವ್ಯದಲ್ಲಿ ಮೂರು ಮುಖ್ಯವಾದ ವಾಸ್ತವ ಪಾತ್ರಗಳಿದ್ದರೂ ಅತಿಮಾನುಷ ಶಕ್ತಿಗಳಲ್ಲೂ ಮೂರು ಪಾತ್ರಗಳನ್ನು ಕರೆತಂದಿದ್ದಾರೆ. ವಾಸ್ತವ ಪಾತ್ರಗಳನ್ನು ತೆಗೆದುಕೊಂಡು ನೋಡಿದಾಗ ಚಿತ್ರಾಂಗದೆ ತೂಕದ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾಳೆ. ಅತಿಮಾನುಷ ಪಾತ್ರಗಳಲ್ಲಿ ಮನ್ಮಥ, ಸಮುದ್ರಮೂರ್ತಿ, ರುಚಿರಮೂರ್ತಿಗಳ ಮೂಲಕ ಕವಿ ತಮ್ಮ ದರ್ಶನವನ್ನು ಕಂಡರಿಸಿದ್ದಾರೆ. ಅವುಗಳಲ್ಲಿ ಮದನಮೂರ್ತಿ ವರವನ್ನು ಕರುಣಿಸಿದರೆ, ಸಮುದ್ರಮೂರ್ತಿ ಜೀವನ ಪ್ರೀತಿಯ ಸಂದೇಶವನ್ನು ಕೊಡುತ್ತದೆ. ಮತ್ತು ರುಚಿರಮೂರ್ತಿಯು ಚಿತ್ರಾಂಗದೆಗೆ ಜೀವಾರ್ಪಣೆ ಮಾಡಿ ಅಮರವಾಗುಳಿಯಲು ಉಪದೇಶಿಸುತ್ತದೆ.

ಇನ್ನು ಕಾವ್ಯದಲ್ಲಿ ಪ್ರಕೃತಿಯ ವಿಷಯಕ್ಕೆ ಬಂದಾಗ ಮನುಷ್ಯ ಮನೋವ್ಯಾಪಾರದ ಜೊತೆಗೆ ಪ್ರಕೃತಿಯಲ್ಲಿನ ಆಗುಹೋಗುಗಳನ್ನು ಸಮೀಕರಸಿದ್ದಾರೆ. ಸ್ತ್ರೀ ಸಂವೇದನೆಯನ್ನು ಪ್ರಕೃತಿಯಲ್ಲಿನ ಪ್ರತಿ ಚಲನವಲನಗಳಲ್ಲಿ ಗುರುತಿಸಿಕೊಟ್ಟಿದ್ದಾರೆ. ಪ್ರಕೃತಿಯ ಮಳೆ, ಕತ್ತಲು, ಬೆಳಕು, ಗರಿಕೆ, ಹೂವುಗಳು ಎಲ್ಲವೂ ಇಲ್ಲಿ ಮೈತಳೆದು ನಿಂತಿದೆ. ಪ್ರಕೃತಿ ಸೌಂದರ್ಯವನ್ನು ಕುರಿತು ವರ್ಣನೆಗಳ ವಿಚಾರದಲ್ಲಿ ಕವಿಗೆ ಎಲ್ಲಿಲ್ಲದ ಉತ್ಸಾಹ. ಮಿಂಚು, ಗುಡುಗು, ಸಿಡಿಲು ಇವುಗಳ ಆರ್ಭಟಕ್ಕೆ ಮನುಷ್ಯನ ಕೋಪತಾಪಗಳ ಜೊತೆಗೆ ಹೋಲಿಸಿದ್ದಾರೆ.

ಇನ್ನು ಭಾಷೆ, ಶೈಲಿ, ಛಂದಸ್ಸುಗಳ ವಿಚಾರದಲ್ಲಿ ನೂತನತೆಯನ್ನು ಮೆರೆದ ಕವಿ ಕನ್ನಡದಲ್ಲಿ ಕೈಗೊಂಡ ಮೊತ್ತಮೊದಲ ಸಾಹಸವಾಗಿದೆ. ಹಾಗೂ ಇದೇ ಮೊದಲ ದೀರ್ಘವಾದ ಖಂಡಕಾವ್ಯವಾಗಿದೆ. ಭಾಷೆಯ ವಿಷಯದಲ್ಲಿ ಸಂಸ್ಕೃತ ಪದಗಳನ್ನು ಹೇರಳವಾಗಿ ಬಳಸಿದ್ದರೂ ಹಳಗನ್ನಡದ ಕಡೆ ಹೆಚ್ಚು ಒಲವು ತೋರಿದ್ದಾರೆ. ಶೈಲಿಯಂತೂ ಅವರ ಪ್ರತಿ ಸಾಲುಗಳಲ್ಲೂ ವ್ಯಕ್ತವಾಗಿದೆ. ಒಮ್ಮೆ ಭೋರ್ಗರೆದು ಹರಿವ

ಜಲಪಾತದಂತೆ ಇದ್ದರೆ, ಮತ್ತೊಮ್ಮೆ ಶಾಂತ ಸರೋವರದ ರೀತಿ. ಆಯಾ ಸನ್ನಿವೇಶಕ್ಕೆ ತಕ್ಕಂತೆ ಪದಗಳ, ವಾಕ್ಯಗಳ ಆವಾಹನೆ ಮಾಡಿ ತಂದು ನರ್ತಿಸಿ ಕುಣಿಸಿದ್ದಾರೆ. ಇಲ್ಲಿ ಕುವೆಂಪು ಅಕ್ಷರಗಳ ಮಾಂತ್ರಿಕನೆಂದರೆ ತಪ್ಪಾಗಲಾರದು. ಮಾಂತ್ರಿಕ ತನ್ನ ಮಾಯಾಜಾಲದಿಂದ ಅಕ್ಷರಗಳನ್ನು ಎಲ್ಲಿಂದಲೋ ಕರೆದುತಂದು ತಮಗೆ ಗೋಚರಿಸುವ ಹಾಗೆ ಮಾಡುತ್ತಾನೆ ಅಂತೆಯೇ ಕುವೆಂಪುರವರು.

ಆಧುನಿಕ ಕನ್ನಡ ಕವಿ ಕುಲೋತ್ತುಂಗರಾದ ಕುವೆಂಪು ತಮ್ಮ ಅನುಭವ ಭಂಡಾರದಿಂದ ಅನೇಕ ಮಹೋಪಮೆಗಳನ್ನು ಬಳಸಿ ಕಾವ್ಯದ ಅಂದ ಇಮ್ಮಡಿಯಾಗುವಂತೆ ಮಾಡಿದ್ದಾರೆ. ಈ ಮಹೋಪಮೆಗಳ ಮಾದರಿ ಪರಕೀಯದಾದ್ದರು ಇದರಲ್ಲಿ ಬಳಕೆಗೊಂಡಿರುವ ಭಾವನೆಗಳು ಸ್ವಕೀಯವಾಗಿವೆ. ಹೀಗೆ ಎಲ್ಲಾ ಹಂತಗಳಲ್ಲೂ ಚಿತ್ರಾಂಗದಾ ಖಂಡಕಾವ್ಯ ಕನ್ನಡ ಸಾಹಿತ್ಯ ಸರಸ್ವತಿಯ ಮುಡಿಗೇರಿಸಲ್ಪಟ್ಟ ಬಾಡದ ಹೂವಿನಂತೆ. ನೂತನ ಕಲಾಕೃತಿಯಾಗಿ, ಪರಂಪರೆಯ ಜೊತೆಗೆ ಬೆಳೆದುಬಂದ ಕಾವ್ಯವಾಗಿದೆ. ಸಾಹಸ ಸ್ತ್ರೀಯೊಬ್ಬಳ ಜೀವನವನ್ನು ಮಾನವೀಯ ಮೌಲ್ಯಗಳ ಜೊತೆ ಪರಿಣಾಮಕಾರಿಯಾಗಿ ರಚಿಸಿ ಸಾರ್ವಕಾಲಿಕ ಸತ್ಯದ ಪ್ರತಿಪಾದನೆ ಮಾಡಿದ್ದಾರೆ. ಚಿತ್ರಾಂಗದಾ ಪಾತ್ರದ ಮೂಲಕ "ಒಲುಮೆ"ಯ ಸಾರ್ಥಕತೆಯನ್ನು ಸಾರಲು ಬರೆದಿಟ್ಟ ಬಂಗಾರದ ಶಾಸನವನ್ನಾಗಿಸಿದ್ದಾರೆ.

[illegible]

ಗ್ರಂಥಋಣ

೧. ಕುವೆಂಪು., ಚಿತ್ರಾಂಗದಾ, ಪ್ರಕಾಶಕರು:ಉದಯರವಿ ಪ್ರಕಾಶನ, ವಾಣಿವಿಲಾಸಪುರ, ಮೈಸೂರು, ೨೦೦೭.

೨. ಡಾ.ಪಂಚಾಕ್ಷರಿ ಹಿರೇಮಠ ಎಂ.ಎ, (ಸಂ) ಕನ್ನಡ ಗದ್ಯಭಾರತಿ–೧, ದಕ್ಷಿಣ ಭಾರತ ಹಿಂದಿ ಪ್ರಚಾರಸಭಾ(ಕರ್ನಾಟಕ ಶಾಖೆ), ಡಿ.ಸಿ.ಕಾಂಪೌಂಡ್. ಧಾರವಾಡ.

೩. ಬಿ.ಎಸ್. ಸಣ್ಣಯ್ಯ, ಡಾ॥ರಾಮೇಗೌಡ (ಸಂ), ಲಕ್ಷ್ಮೀಶನ ಜೈಮಿನಿಭಾರತ, ಪ್ರಕಾಶಕರು ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೩.

೪. ಪ್ರೊ. ಅರವಿಂದ ಮಾಲಗತ್ತಿ, ಪ್ರಧಾನ ಸಂಪಾದಕರು, ಕುವೆಂಪು ಕೃತಿ ವಿಮರ್ಶೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಪ್ರಕಟಣಾ ಮಾಲೆ ೫೪೪, ೨೦೦೬.

೫. ಡಾ.ಮಳಲಿವಸಂತಕುಮಾರ್, ಸಂಪಾದಕರು, ಚಿತ್ರಾಂಗದಾ ಸಮೀಕ್ಷೆ, ತ.ವೆಂ.ಸ್ಮಾರಕ ಗ್ರಂಥಮಾಲೆ, ಕೃಷ್ಣಮೂರ್ತಿಪುರಂ, ಮೈಸೂರು, ೧೯೭೨.

೬. ಲತಾರಾಜಶೇಖರ್, ಕುವೆಂಪು ಕಾವ್ಯದಲ್ಲಿ ಪ್ರಕೃತಿ – ಒಂದು ಅಧ್ಯಯನ, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾ ಪರಿಷತ್, ಮೈಸೂರು, ೨೦೦೩.

೭. ಜಿ.ಎಸ್. ಶಿವರುದ್ರಪ್ಪ, ಸೌಂದರ್ಯ ಸಮೀಕ್ಷೆ, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು. ೧೯೭೦.

೮. ಕುವೆಂಪು, ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, ೧೯೯೩.

೯. ಜವರೇಗೌಡ.ದೇ. ಕುವೆಂಪು ದರ್ಶನ ಮತ್ತು ಸಂದೇಶ, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾ ಪರಿಷತ್, ಮೈಸೂರು, ೧೯೮೯.